

ANTARANGA

# ನಮ್ಮಲ್ಲಿ

## ಕನ್ನಡ ಪುಸ್ತಕಗಳು

| | | | | |
|---|---|---|---|---|
| [illegible] ಪುರಾಣ | | 3 | 0 | 0 |
| ಚಂದ್ರಗುಪ್ತ ಚಕ್ರವರ್ತಿ | | 1 | 0 | 0 |
| ಸರಸ್ವತೀ (ಸಾಮಾಜಿಕ ನಾಟಕ) | | 0 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ (ಇಂಗ್ಲಿಷ್ ಸ್ವಯಂಬೋಧಿನಿ) | | 0 | 8 | 0 |
| ಸಾಮುದ್ರಿಕ ಶಾಸ್ತ್ರ | | 0 | 8 | 0 |
| ಹೊಂದೊವಲ ಹಂಬಲು | | 0 | 6 | 0 |
| ವೀರಭೂಮಿ (ಕತೆ) | | 0 | 1 | 6 |
| ಗೀತೆಯ ಕೈಗನ್ನಡಿ | | 0 | 4 | 0 |
| ಗೀತೆಯ ಮೂಲ (ಈಶಾವಾಸ್ಯೋಪನಿಷತ್ತಿನ ಭಾಷಾಂತರ) | | 0 | 1 | 0 |
| ಸ್ತ್ರೀಪದ್ಯರತ್ನಾಕರ ಭಾಗ | I | 0 | 1 | 0 |
| ಡಿ | II | 0 | 1 | 0 |
| ಡಿ | III | 0 | 1 | 0 |
| ಡಿ | IV | 0 | 1 | 0 |
| ಪುರಂದರ ದಾಸರ ಪದ ಭಾಗ | I | 0 | 4 | 0 |
| ಡಿ | II | 0 | 4 | 0 |
| ಡಿ | III | 0 | 4 | 0 |
| ಡಿ | IV | 0 | 4 | 0 |
| ಮಧುವನ | | 1 | 8 | 0 |
| ಧರ್ಮಸಂಕಟ (ಸಾಮಾಜಿಕ ನಾಟಕ) | | 0 | 4 | 0 |
| Gouthama the Buddha | | 0 | 8 | 0 |
| ಭಗವದ್ಗೀತೆ | | 0 | 2 | 0 |
| ಕುಕ್ಕುಟ ಪಂಚಾಂಗ | | 0 | 1 | 0 |
| ಮಗ್ಗಿ | | 0 | 1 | 6 |
| ತುಳುನಾಡ್ ತಿಲಕ ಪಂಚಾಂಗ | | 0 | 1 | 0 |
| ವೈಜಯಂತೀ ಪಂಚಾಂಗ | | 0 | 2 | 6 |
| ಜಯಪಾಂಡ್ಯ ವಿಜಯ | | 0 | 2 | 0 |

## ತುಳು ಪುಸ್ತಕಗಳು

| | | | |
|---|---|---|---|
| ಕೃಷ್ಣಸಂಧಾನ (ಪ್ರಸಂಗ) (ಕನ್ನಡ ಕೃಷ್ಣ ಸಂಧಾನವನ್ನೊಳಗೊಂಡಿದೆ.) | 0 | 8 | 0 |
| [illegible]ಲೀಂದ್ರ (ಕತೆ) | 0 | 2 | 0 |
| ಅಳಿಯ ಸಂತಾನ ಕಟ್ಟ್‌ದ ಗುಟ್ಟು (ವಿಮರ್ಶಾತ್ಮಕ ಲೇಖನ) | 0 | 4 | 0 |
| ಕಾಸಿಗ್ (ಪದ್ಯ) | 0 | 4 | 0 |
| ತುಳುವ್ಯಾಕರಣ | 0 | 8 | 0 |
| ಜನಮರ್ಲ್ (ನಾಟಕ) | 0 | 6 | 0 |
| ಮದ್‌ಮಾಳತ್ತ್ ಮದ್‌ಮಾಯೆ. (ಕತೆ) | 0 | 2 | 0 |
| ಬಂಗಾರ್‌ದಂಗಿದ ಕತೆ | 0 | 1 | 0 |
| ಪದ್ಯಮಾಲಿಕೆ | 0 | 1 | 0 |
| ಮಿತ್ಯನಾರಾಯಣ ಕತೆ | 0 | 8 | 0 |
| ಸತೀ ಕಮಲ್ (ನಾವೆಲ್) | 0 | 6 | 0 |
| ಕನ್ಯೋಪದೇಶ | 0 | 2 | 0 |
| ಕನ್ನಡಕೊ | 0 | 0 | 6 |
| ವಾಲಿಸುಗ್ರೀವರ ಕಾಳಗ | 0 | 3 | 0 |
| ಬೊಬ್ಬರ್ಯ (ಪಾಡ್ದನ) | 0 | 2 | 0 |
| ತೊಡಕಿನಾರ್ ,, | 0 | 2 | 0 |
| ಮುಂಡತ್ತಾಯ ,, | 0 | 2 | 0 |
| ವಿಶ್ವರೂಪ ದರ್ಶನ (ಗೀತೆಯ IIನೇ ಅಧ್ಯಾಯದ ಪದ್ಯಾತ್ಮಕ ಭಾಷಾಂತರ) | 0 | 1 | 0 |
| ಭಗವದ್ಗೀತೆ | 0 | 5 | 6 |

ತುಳುನಾಡ್ ಪ್ರೆಸ್, ಉಡುಪಿ

# ಅಂತರಂಗ

ಸಚಿತ್ರ ಕನ್ನಡ
ವಾರ ಪತ್ರಿಕೆ
ಉಡುಪಿ, ದ. ಭಾ.

ಜುಲೈ ೨೧, ೧೯೪೦
ಸಂಪುಟ ೫ ಸಂಚಿಕೆ ೧೦೫

ಪ್ರಧಾನ ಸಂಪಾದಕ: **ಎಸ್. ಯು. ಪಣಿಯಾಡಿ.**

ಸಂಪಾದಕ: **ಕೆ. ಹೈದರ್.**

**ಸಹ-ಸಂಪಾದಕರು:**

ಪಿ. ಎಲ್. ಅಡಿಗ, ಪಿ. ವಿ. ಆಚಾರ್ಯ.

**ಸಲಹೆಗಾರರ ಮಂಡಲ:**

ಶ್ರೀ. ಬಿ. ವಾಸುದೇವರಾವ್, ಬಿ. ಎ., ಬಿ. ಎಲ್.
,, ಕೊರಡ್ಕಲ್ ಶ್ರೀನಿವಾಸರಾವ್, ಗ್ರಂಥಕರ್ತ.
,, ಆರ್. ಆರ್. ಕುಂಜೂರು.
,, ~~ಪಿ. [illegible] ಉಪಾಧ್ಯಾಯ~~, ಬಿ. ಎ., ಎಲ್‌ಎಲ್. ಬಿ.
,, ಕೆ. ಎಚ್. ಶೆಟ್ಟಿ, ಮೆನೇಜರ್, ನವಯುಗ
,, ಆರ್. ಎಸ್. ಶೆಣೈ, ಸಂಪಾದಕ, ಧುರೀಣ
,, ಬನ್ನಂಜೆ ರಾಮಾಚಾರ್ಯ, ,, ,,
,, ಶ್ರೀಮತಿ ಪಿ. ಭಾರತೀಬಾಯಿ.

**PROPRIETORS:**
**GENERAL SUPPLIES LTD, UDIPI.**

**Our Advertising Agent & Representative at Bombay:**

**Sri. K. K. HEBBAR, 12, Wallace Street, Fort, Bombay.**

## ADVERTISEMENT RATES
### PER INSERTION

| | | | | |
|---|---|---|---|---|
| **Full page** | **Rs.** | 15 | 0 | 0 |
| **Half page** | ,, | 8 | 0 | 0 |
| **Quarter page** | ,, | 5 | 0 | 0 |
| **⅛ page** | ,, | 3 | 0 | 0 |
| **Cover back** | ,, | 30 | 0 | 0 |
| **Cover inside** | ,, | 22 | 8 | 0 |
| **Sq. inch** | **As.** | 0 | 8 | 0 |

**A commission 6¼% will be allowed on contracts for above 3 months and below 6 months & 12½% for above 6 months & within a year.**

**All previous rates are cancelled.**
**14-4-1940**

**ADVERTISERS PLEASE NOTE:**

- Advertisement Charges are payable in advance.
- Any change in the advertisement should be intimated a fortnight in advance.
- Blocks, if any will be returned at the cost of the advertiser.
- The management reserves the right to reject advertisements, which may be deemed objectionable.

**Advertisement Manager,**
**ANTARANGA, UDIPI.**

**Bangalore Chief Agency Office: 45 A. S. Street, Bangalore City.**

# ಶ್ರೀ ಚಂದ್ರಕಲಾ ಸ್ಪರ್ಧೆ ನಂ. 44

## ಬೆಂಗಳೂರು ಸಿಟಿ

| ಎಂಟಾಣೆಗೆ 3 ಕೂಪನ್‌ಗಳು | **170** ರೂಪಾಯಿಗಳ ಬಹುಮಾನ! | ಒಂದು ರೂಪಾಯಿಗೆ 7 ಕೂಪನ್‌ಗಳು. |
|---|---|---|
| ಪ್ರಥಮ ಬಹುಮಾನ ರೂ. **80** | ಇತರ ಬಹುಮಾನ ರೂ. **80.** | ಸ್ಪೆಷಲ್ ರೂ. **10** |

ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರವನ್ನು ಕಳುಹಿಸಿದವರಿಗೆ ಹತ್ತು ರೂಪಾಯಿ ಕೊಡಲಾಗುತ್ತೆ.

**ಸೂಚನೆ:-** ಈ ಸ್ಪರ್ಧೆಯ ಸರಿಯಾದ ಉತ್ತರವನ್ನು 'ದಿ ಕೆನರಾ ಇಂಡಸ್ಟ್ರಿಯಲ್ ಅಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್' ಬೆಂಗಳೂರು ಸಿಟಿ ಇವರಲ್ಲಿ ಮೊಹರು ಮಾಡಿಡಲ್ಪಟ್ಟಿರುತ್ತದೆ. ಅದಕ್ಕೆ ಪ್ರತ್ಯಕ್ಷರವೂ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನವೂ ೧ ಮತ್ತು ೨ ತಪ್ಪಿನ ಉತ್ತರಗಳಿಗೆ ಇತರ ಬಹುಮಾನವೂ, ಕೊಡಲ್ಪಡುವುದು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತಲೂ ಹೆಚ್ಚಾಗಿದ್ದಲ್ಲಿ, ಬಹುಮಾನವು ಎಲ್ಲರಿಗೂ ಸಮನಾಗಿ ಹಂಚಲ್ಪಡುತ್ತದೆ. ಬಹುಮಾನದ ಹಂಚಿಕೆಯ ವಿಚಾರ ಸ್ಪರ್ಧೆಯ ಮ್ಯಾನೇಜರರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ವಿಧವಾದ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. **ಎಂಟಾಣೆಗಳಿಗೆ 3 ಉತ್ತರಗಳನ್ನೂ 1 ರೂ.ಗೆ 7. ಉತ್ತರಗಳನ್ನೂ ಕಳಿಸಬಹುದು.** 3ಕ್ಕಿಂತ ಕಡಿಮೆ ಉತ್ತರಗಳನ್ನು ಅಂಗೀಕರಿಸುವುದಿಲ್ಲ. ಪ್ರವೇಶ ಧನವನ್ನು ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ಕಳುಹಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಈ ಕೆಳಗಿನ ಕೂಪನ್ನಿನಲ್ಲಾಗಲಿ ಬಿಳಿಯ ಕಾಗದದಲ್ಲಾಗಲಿ, (ಶಾಯಿಯಿಂದ ಚಿತ್ತಿಲ್ಲದಂತೆ) ಬರೆದು ಕಳಿಸತಕ್ಕದ್ದು. **ಉತ್ತರಗಳು ತಲಪಲು 1—8—40ನೇ ಗುರುವಾರ ಕೊನೆಯ ದಿನ.** ನಂತರ ಬರುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಇದರ ಸರಿಯಾದ ಉತ್ತರ ಮತ್ತು ಬಹುಮಾನ ಪಡೆದವರ ಹೆಸರೂ ಸಹ 11—8—'40ರ ಅಂತರಂಗದಲ್ಲಿ ಪ್ರಕಟಿಸಲ್ಪಡುತ್ತದೆ. ಉತ್ತರಗಳನ್ನು ಕೆಳಗಿನ ವಿಳಾಸಕ್ಕೆ ಕಳಿಸತಕ್ಕದ್ದು. ಪೋಸ್ಟು ಮೂಲಕ ಕಳುಹಿಸುವವರು 1—8—40ನೇ ತಾರೀಖು ಕೂಡಾ ಕಳುಹಿಸಬಹುದು.

| | | | | | | |
|---|---|---|---|---|---|---|
| 1 ವಿ | ಶ್ವ | 2 ಕ | ರ್ಮ | ■ | 3 ವ | |
| | ■ | | ■ | 4 | ನ | ■ |
| ■ | 5 ಮೋ | ■ | 6 ನ | ವ | ರ | |
| ■ | | ■ | 7 | ಕ್ತ | ■ | ■ |
| 8 ವಿ | ■ | 9 | ■ | ■ | 10 | ನ |
| | ■ | ತಿ | ■ | 11 | ಪಾ | ಲ |
| ಯು | ■ | ಯು | ■ | 12 ಸ್ವೈ | | ಣೆ |

**ಎಡದಿಂದ ಬಲಕ್ಕೆ:—** ೧. ಬ್ರಹ್ಮ; ಅಕ್ಕಸಾಲೆ. ೩. ಯುವಕರು ಸುಂದರವಾದ....ವಿಗಾಗಿ ತುಂಬಾ ಹುಡುಕುತ್ತಾರೆ. ೪. ಕೆಲವರಿಗೆ ಇದರಲ್ಲಿ ಆಸಕ್ತಿ ಹೆಚ್ಚು. ೬. ಇವು ಒಂಭತ್ತು ಇವೆ. ೭. ಇಂಥವನು ನಿಧಾನಿಯಾಗಿರಬೇಕು. ೧೦. ಅವಿವೇಕಿಗಳಿಗೆ ಇದಿರುವುದಿಲ್ಲ. ೧೧. ಈತನು ಎಲ್ಲರ ಹಿತಕಾಂಕ್ಷಿ. ೧೨. ತಾಳ್ಮೆ.

**ಮೇಲಿನಿಂದ ಕೆಳಕ್ಕೆ:—** ೧. ಈತನಿಗೆ ಮಾನಸಿಕ ಶ್ರಮಕ್ಕಿಂತಲೂ ದೇಹಶ್ರಮವೇ ಜಾಸ್ತಿ. ೨. ತೊಂದರೆ. ೫. ಇದರಿಂದ ಜನರಿಗೆ ಏಳಿಗೆಯಾಗಲಾರದು. ೮. ಇದು ಹೆಚ್ಚಿನ ಘನತೆಯನ್ನು ತರುವುದು. ೯. ಹಿಂದೂ ಮುಸಲ್ಮಾನರ ಐಕಮತ್ಯಕ್ಕೆ ಪರಸ್ಪರ....ಬೇಕು.

**ನಮ್ಮ ಏಜಂಟರು:** 1 **ಬೆಂಗಳೂರು:-** ಮ. ರಾ. H. K. ಮೂರ್ತಿ, ತೆಂಗಿನಕಾಯಿ ವ್ಯಾಪಾರಿ ಮತ್ತು ನ್ಯೂಸ್ ಏಜಂಟ್. 55, ನ್ಯೂಮಾರ್ಕೆಟ್. ಸೇತೂರಾವ್ ಸ್ಟ್ರೀಟ್ ಇವರಲ್ಲಿ ಕೂಪನ್ನು ಮತ್ತು ಪ್ರವೇಶ ಧನವನ್ನು ಕೊಟ್ಟು ರಶೀದಿ ಪಡೆಯಬಹುದು.

**Wanted Agents, Apply for terms.**

ಮ್ಯಾನೇಜರ್, **ಶ್ರೀ ಚಂದ್ರಕಲಾ ಸ್ಪರ್ಧೆ**, 55, ನ್ಯೂಮಾರ್ಕೆಟ್, ಸೇತೂರಾವ್ ಸ್ಟ್ರೀಟ್, **ಬೆಂಗಳೂರು ಸಿಟಿ.**

# - ಅಂತರಂಗೀಯ -

## ವೈದ್ಯರ ದುರದೃಷ್ಟ?

ಚರ್ಚಿಲ್ಲರ ಬ್ರಾಡ್‌ಕಾಸ್ಟ್ ಭಾಷಣವನ್ನು ಕೇಳಿ ಕೆನಡಾದ ಜನಂಗೆ ಟಾನಿಕ್ ಕುಡಿದಂತಾಯಿತಂತೆ!

ವೈದ್ಯರ 'ಟಾನಿಕು'ಗಳಿಗೆ ಇನ್ನೇನು ಗತಿ?

೦ ೦ ೦

## ಎತ್ತಿನ ಹಾಲು!

ಮೌಲಾನಾಅಜಾದರು ಮಿ। ಜಿನ್ನಾರವರ ಬೆಂಬಲದ ಕೈಕೇಳಿದ್ದಕ್ಕೆ ಲೀಗಿನ ಅಧ್ಯಕ್ಷರು ಹಿಂಗಾಲಿನಿಂದ ಮೆಟ್ಟಿದರೆಂದು ಒಬ್ಬ ಧುರೀಣರ ಅಭಿಪ್ರಾಯ.

ಗಂಗೆತ್ತನ್ನು ಕರೆಯಹೋದರೆ ಹಾಲಿನ ಬದಲಿಗೆ ಸಿಗುವುದೊಂದು ತುಳಿತವಲ್ಲವೆ? ದನವಾವುದು ಎತ್ತಾವುದೆಂಬುದನ್ನು ತಿಳಿಯಲಾಗದಿದ್ದರೆ ಧುರೀಣರು ಕನ್ನಡಕವನ್ನೇಕೆ ಬಹಿಷ್ಕರಿಸಬೇಕು.

೦ ೦ ೦

## ಪುರೋಹಿತರ ಕಾಲೇಜು!

ತಿರುವಾಂಕೂರಿನಲ್ಲಿ ಪುರೋಹಿತರಿಗೆ ತರಬೇತೀಯುವುದಕ್ಕಾಗಿ 'ಶಾಂತಿಶಾಲೆ'ಯೊಂದು ಸ್ಥಾಪಿಸಲ್ಪಟ್ಟರೂ ವಿದ್ಯಾರ್ಥಿಗಳು ಮುಂದೆ ಬಗಲಿಲ್ಲವಂತೆ.

ಮಂಡೆ ಬೋಳುಮಾಡಿ ಕಾವಿಯುಡುವ ಶರ್ತವನ್ನು ತೆಗೆದುಹಾಕಿ ಬೂಟು ಸಿಗರೇಟುಗಳಿಗೆಡೆಕೊಟ್ಟರೆ ಉಮೇದ್ವಾರರಿಗೆ ಕಡಿಮೆಯಾಗುತ್ತದೆಯೆ? ಅದಕ್ಕೇ ಅನ್ನುವುದು ದೇವಸ್ಥಾನಗಳಲ್ಲಿ ಸುಧಾರಣೆಯಾಗಬೇಕೆಂದು!

೦ ೦ ೦

## ಯಾವುದು?

ಮುಸ್ಲಿಂ ರಾಷ್ಟ್ರೀಯ ಸ್ವಾಯತ್ತೆಯನ್ನು ಪಡೆಯುವುದಕ್ಕಾಗಿ ಮುಸಲ್ಮಾನರು ತಮ್ಮ ರಕ್ತದ ಕೊನೆಯ ಹನಿಯು ಹರಿದು ಹೋಗುವ ವರೆಗೂ ಹೋರಾಡುವರೆಂದು ಅಂಬೂರಿನಲ್ಲಿ ಮಲಬಾರಿನ ಹಾಜಿ ಸತ್ತಾರ್ ಸೇಟರು ಲೀಗ್ ಪರಿಷತ್ತಿನ ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದರು.

ರಕ್ತದ ಕೊನೆಯ ಹನಿ ಹರಿಯುವವರೆಗೆಂದು ಹೇಳುವ ಬದಲು ತಮ್ಮ ಉನ್ಮಾದವು ಅಳಿದು ಹೋಗುವ ವರೆಗೂ ಪಾಕಿಸ್ತಾನಕ್ಕಾಗಿ ಹೋರಾಡುವೆವೆನ್ನಬಹುದಿತ್ತು!

೦ ೦ ೦

## ವಿದೇಶೀ ತೀರ್ಮಾನ

ಮುಂಬಯಿಯಲ್ಲಿ ಹೈಕೋರ್ಟಿನವರ ತೀರ್ಮಾನದ ಪರಿಣಾಮವಾಗಿ ಅಮಲೇರಿಸುವ ವಿದೇಶೀ ಪಾನೀಯಗಳನ್ನು ತರಿಸಬಹುದೆಂದು ಮುಂಬಯಿ ಸರಕಾರದವರು ಪ್ರಕಟಿಸಿದ್ದಾರೆ. ಆದರೆ ದೇಶೀಯ ಮದ್ಯಗಳಿಗೆ ಎಂದಿನ ನಿಷೇಧವಿರುವುದಂತೆ.

ವಿದೇಶೀ ಮದ್ಯಗಳಿಗೆ ವಿದೇಶೀ ಸರಕಾರ ಬೆಂಬಲವೀಯದಿದ್ದರೆ ಮತ್ತಾರು?

೦ ೦ ೦

## ಪ್ರಯೋಜನ

ಹಿಂದೂ ಮಹಾ ಸಭೆಯ ಧುರೀಣರಾದ ಶ್ರೀ. ವಿ. ಡಿ. ಸಾವರ್ಕರರವರು ವೈಸರಾಯರೊಡನೆ ಮಾತುಕತೆ ನಡೆಸಿದ್ದರಿಂದ ಯಾವ ಪರಿಣಾಮವಾಯಿತು? ಎಂದೊಬ್ಬ ರಾಷ್ಟ್ರೀಯ ಧುರೀಣರು ಕೇಳುತ್ತಾರೆ.



"ಲಂಡನಿನ ಅಂತಿಮಾವಸ್ಥೆಯನ್ನಾದರೂ ಕಾಣುವೆವು ಆದರೆ ದುಷ್ಟ್ರಶೃಂಖಲರ ದಾಸ್ಯ ಶೃಂಖಲೆಯಿಂದ ಬಂಧಿಸಲ್ಪಡಲಾರೆ"ವೆನ್ನುವ ಬ್ರಿಟಿಷ್ ಪ್ರಧಾನರಾದ

**ವಿನ್‌ಸ್ಟನ್ ಚರ್ಚಿಲ್‌ರವರು.**

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳೊಡನೆ ಮಾತುಕತೆ ನಡೆಸುವ ಸಂದರ್ಭಗಳಲ್ಲೆಲ್ಲಾ ನಿಮ್ಮನ್ನು ಕರೆಯಲಾಗುವುದೆಂದು ವೈಸರಾಯರು ಭರವಸೆ ಕೊಟ್ಟಿರುವುದು ಸಾಲದೆ?

೦ ೦ ೦

## ಸುಲಭೋಪಾಯ.

ಮಳೆಗಾಲದಲ್ಲಿ ಕೆಲವೊಮ್ಮೆ ಬಿಡಿಸಿರುವ ಕೊಡೆಯು ಸುಂಟರಗಾಳಿಯಿಂದಾಗಿ ಮೇಲ್ಮುಖವಾಗಿ ಗಗನಮಂಡಲದಿಂದಿಳಿದಿರುವ ಪೆರಚ್ಯೂಟ್ ಸೈನಿಕನಂತೆ ಕಾಣಿಸುವುದರಿಂದ ಪೋಲೀಸರಾಗಲಿ, ಸಾರ್ವಜನಿಕರಾಗಲಿ ಅನ್ಯಥಾ ಭಾವಿಸಲೆಡೆಯಿದೆಯೆಂದು ಒಬ್ಬ ತಮಾಷೆ ಬರೆಹಗಾರರ ಅಂಬೋಣ.

ಈ ತಪ್ಪು ಭಾವನೆಯನ್ನು ನಿವಾರಿಸುವುದಕ್ಕಾಗಿ ಗಾಳಿಬಂದಾಗ ಕೊಡೆ ಕಂಕುಳಲ್ಲಿಟ್ಟು ನಡೆದರುತ್ತಮವೆಂದು ನಮ್ಮ ಸೂಚನೆ.

# ಅಂತರಂಗ

ಜುಲೈ ೨೧, ೧೯೪೦

## ಉತ್ಸಾಹೀ ಸಹಕಾರ?

ಪ್ರತಿದಿನವೆಂಬಂತೆ ಬ್ರಿಟಿಷ್ ಧುರೀಣರು ಸುಂದರವಾದ ವಾಕ್ಯಗಳಲ್ಲಿ ತಮ್ಮ ನಿಃಸ್ವಾರ್ಥ ಮನೋವೃತ್ತಿಯ ಕುರಿತು ಉದ್ದುದ್ದ ಭಾಷಣಗಳನ್ನು ಮಾಡುತ್ತಿದ್ದಾರೆ. 'ದಾಸ್ಯದ ಸುಂಟರಗಾಳಿಯಲ್ಲಿ ಸಿಲುಕಿರುವ ರಾಷ್ಟ್ರಗಳನ್ನು ರಕ್ಷಿಸಬೇಕಾದರೆ ಬ್ರಿಟನಿಗೆ ವಿಜಯ ದೊರಕಬೇಕೆ'ಂದು ಎಷ್ಟೋ ಧುರೀಣರು ಹೇಳಿದ್ದಾರೆ. ಪ್ರಾಯಶಃ ಈ ಭಾಷಣಗಳನ್ನು ಕೇಳುವವರು ನಿಜ ಪರಿಸ್ಥಿತಿಯೆಡೆಗೆ ಕಣ್ಮುಚ್ಚಿ ಸುಮ್ಮಗಿದ್ದಾರೆಂದು ಈ ಧುರೀಣರು ಭಾವಿಸಿರುವಂತಿದೆ. ಇತ್ತೀಚೆಗೆ ವಿಶ್ವಧರ್ಮಪರಿಷತ್ತಿನ ವಾರ್ಷಿಕಾಧಿವೇಶನದಲ್ಲಿ ಭಾಷಣ ಮಾಡುತ್ತಾ ಲಾರ್ಡ್ ಝೆಟ್ಲೆಂಡರವರು ಲಜ್ಜಾವಹವಾದ ಕೆಲವು ವಿಷಯಗಳನ್ನು ಹೇಳಿದ್ದಾರೆ. ಜಗತ್ತಿನಲ್ಲಿ ಶಾಂತಿ ಸಂಸ್ಥಾಪನೆಯಾಗಬೇಕಾದರೆ ಸಾಮ್ರಾಜ್ಯಶಾಹೀ ಮನೋವೃತ್ತಿಯ ರಾಜಕಾರಣಿಗಳನ್ನು ಮೂಲೆಪಾಲು ಮಾಡಬೇಕು. ರಾಷ್ಟ್ರಗಳ ಸ್ವಾತಂತ್ರ್ಯವನ್ನು ಹಿಟ್ಲರ್ ಮುಸಲನಿಗಳಂತಹ ಏಕಸತ್ತಾಧಿಕಾರೀ ಧುರೀಣರು ಅಪಹರಿಸುವುದಿದ್ದರೆ ಬ್ರಿಟನಿನ ಸಾಮ್ರಾಜ್ಯಶಾಹೀ ಪ್ರಜಾಸತ್ತೆಯ ಧುರೀಣರು ಭಾರತದಂತಹ ದೇಶಗಳನ್ನು ತಮ್ಮಾಧೀನವಿರಿಸಿಕೊಂಡು ಜಗತ್ತಿನ ಶಾಂತಿಯನ್ನು ಕೆಡಿಸುತ್ತಿದ್ದಾರೆ.

"ಅಯರ್‌ಲೇಂಡ್, ಪೆಲೆಸ್ಟೈನ್ ಮತ್ತು ಭಾರತದಂತಹ ದೇಶಗಳಲ್ಲಿ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಧಾರ್ಮಿಕ ನಿಯಮವೇ ಒಂದು ಮಾಧ್ಯಮವಾಗಿರುವುದು ಈ ಕಾಲದ ವಿಷಾದಕರ ಸಂಗತಿಗಳಲ್ಲೊಂದಾಗಿದೆ' ಯೆಂದು ಲಾರ್ಡ್ ಝೆಟ್ಲೆಂಡರು ಹೇಳಿದ್ದಲ್ಲದೆ ಆಯರ್‌ಲೇಂಡ್ ಮತ್ತು ಭಾರತಕ್ಕೆ ಬೆಟ್ಟೆತ್ತಿ ತೋರಿಸಿ- 'ಇವೆರಡು ದೇಶಗಳು ಇಂದಿನ ಪರಿಸ್ಥಿತಿಯಲ್ಲಿ ಎಂತಹ ಶೋಚನೀಯ ಧೋರಣೆಯನ್ನು ಅನುಸರಿಸುತ್ತಿವೆ! ಆ ಹೊಡೆದಾಟ, ಆ ಚರ್ಚೆ, ಇವೆಲ್ಲಾ ಸಾಲದುದಕ್ಕೆ ಸನಿಹದಲ್ಲಿ ಎಲ್ಲರನ್ನೂ ಬೆದರಿಸುತ್ತಿರುವ ಅಪಾಯವನ್ನೂ ಲೆಕ್ಕಿಸದೆ ತೀವ್ರವಾದ ವಾದವಿವಾದಗಳಲ್ಲಿ ನಿರತರಾಗಿದ್ದಾರೆ.''

ಆದರೆ ಮೇಲೆ ಸೂಚಿಸಿದ ಎರಡೂ ರಾಷ್ಟ್ರಗಳು ಬ್ರಿಟಿಷ್ ಸಾಮ್ರಾಜ್ಯದೊಳಗಿವೆ. ಅವುಗಳಲ್ಲಿಯ ಧಾರ್ಮಿಕ ವ್ಯತ್ಯಾಸಗಳಿಗೆ ವಿದೇಶೀ ಆಳ್ವಿಕೆಯೇ ಕಾರಣವೆಂಬುದನ್ನವರು ಹೇಳಲಿಲ್ಲ. ಆಯರ್ಲೇಂಡಿನ ಪ್ರೊಟೆಸ್ಟಂಟರು ಪ್ರತ್ಯೇಕ ಅಲ್ಸ್ಟರನ್ನು ಸ್ಥಾಪಿಸಿದುದು ಬ್ರಿಟಿಷರ ಬೆಂಬಲದಿಂದ. ಭಾರತದಲ್ಲಿ ವಿಭಜಿಸಿ ಆಳುವ ಧೋರಣೆಯನ್ನು ಬ್ರಿಟಿಷ್ ಸರಕಾರವು ಅನುಸರಿಸಿದುದರಿಂದ, ಆ ಪಕ್ಷಪಾತೀ ಧೋರಣೆಯ ಪರಿಣಾಮವಾಗಿ ಇಂದು 'ಪಾಕಿಸ್ತಾನ'ದ ಕೂಗು ತಲೆದೋರಿದೆ. ರಾಷ್ಟ್ರೀಯತೆಯ ಬುಡಕ್ಕೆ ಕೊಡಲಿ ಹಾಕಿ.' ಅಯ್ಯೋ, ಈ ಧಾರ್ಮಿಕ ಜಗಳ ಮುಗಿಯಲಿಲ್ಲವಲ್ಲ' ವೆಂದು ಬ್ರಿಟಿಷ್ ರಾಜಕಾರಣಿಗಳು ಕೂಗುವುದಕ್ಕಿಂತ ಹೆಚ್ಚಿನ ಕಪಟವು ಬೇರಾವುದಿದೆ? 'ದಾಸ್ಯದಲ್ಲಿರುವವರ ವಿಮೋಚನೆ'ಗಾಗಿ ಹೋರಾಡುವ ಬ್ರಿಟಿಷ್ ಸರಕಾರವು ಭಾರತದ ಅಹಿಂಸಾತ್ಮಕ ಬಿನ್ನಹವನ್ನೇಕೆ ಮಾನ್ಯಮಾಡುವುದಿಲ್ಲ?

ಬ್ರಿಟನು ತನ್ನ ವಸಾಹತುಗಳಲ್ಲಿ ಅನುಸರಿಸುವ ಧೋರಣೆಯನ್ನು ಕಂಡಿಲ್ಲದಿದ್ದರೂ ಇಂಗ್ಲೆಂಡಿನಲ್ಲಿರುವ ಸ್ವಾತಂತ್ರ್ಯದ ರೀತಿಯನ್ನು ಕಂಡು ಅವರಿಗೆ ಜಯದೊರಕಬೇಕೆಂದು ಪ್ರತಿಯೊಬ್ಬ ನಾಗರಿಕನೂ ಆಶಿಸದಿರಲಿಕ್ಕಿಲ್ಲ. ಆದರೆ ಬ್ರಿಟನಿನಲ್ಲಿ ಪ್ರಜೆಗಳಿಗಿರುವ ಸ್ವಾತಂತ್ರ್ಯವನ್ನು ಭಾರತದಲ್ಲಿಯ ಪ್ರಜೆಗಳಿಗೇಕೆ ಕೊಡಬಾರದು. ಇಲ್ಲಿದೆ ಸಾಮ್ರಾಜ್ಯಶಾಹೀ ಮನೋವೃತ್ತಿಯ ಬುಡ. ದಾಸ್ಯದಲ್ಲಿರುವವರನ್ನು ವಿಮೋಚಿಸಲಿಕ್ಕಾಗಿ ಹೋರಾಡುವ ಬ್ರಿಟಿಷರು ತಮ್ಮಾಧೀನದಲ್ಲಿರುವ ದಾಸ್ಯ ಶೃಂಖಲೆಯಿಂದ ಬಂಧಿತವಾದ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಬಾರದೇಕೆ? ಹಿಟ್ಲರಿಸಮನ್ನು ನಾಶಗೊಳಿಸಲು ಭಾರತದ ಪೂರ್ಣ ಸಹಕಾರ ಬೇಡವೆ? ಈಗ ಭಾರತೀಯರು ಕೊಡುತ್ತಿರುವುದು ಪೂರ್ಣ ಸಹಕಾರವನ್ನಲ್ಲ; ಅರೆ ಮನಸ್ಸಿನ ಸಹಕಾರವನ್ನು. ಭಾರತೀಯರಲ್ಲಿ ಉತ್ಸಾಹವಿಲ್ಲ. ಸಾವಿರಾರು ರೂಪಾಯಿಗಳ ವೇತನ ಪಡೆಯುವ ಅಧಿಕಾರಿಗಳ ಬಿನ್ನಹಕ್ಕೆ ಜನತೆಯು ಬೆಲೆಕೊಡುತ್ತಿಲ್ಲ. ಜನತೆಗಾಗಿ ದುಡಿಯುವ ಧುರೀಣರು ಬೆಂಬಲದ ಕರವನ್ನು ಮುಂದೆ ನೀಡಿರೆಂದರೆ ಒಮ್ಮೆಗೇ ನಲುವತ್ತು ಕೋಟಿ ಕರಗಳು ಮುಂದೆ ಬರುವುವು. ಆದರೆ ಬ್ರಿಟಿಷ್ ಸರಕಾರಕ್ಕೆ ನಿಜಸ್ಥಿತಿ ಹೇಗಿದೆಯೆಂಬುದನ್ನು ತಿಳಿಯುವ ಶಕ್ತಿಯಿಲ್ಲ. ಈಗ ಸಾಮ್ರಾಜ್ಯಶಾಹಿಯ ಮಬ್ಬು ಕವಿದಿದೆ. ಬೆಂಬಲದ ಬೆಳಕು ಕಾಣಬೇಕಾದರೆ ಆ ಮಬ್ಬು ಹೋಗಬೇಕು. ಆದರೆ ಅದೆಂದು ಹೋಗುವುದು?

# ಸುಳ್ಳಿನ ಚಕ್ರವರ್ತಿಗೆ ಸ್ಮಾರಕ ಕಟ್ಟಿದರು-



ಹಾಲ್‌ವೆಲ್ ಸತ್ಯಾಗ್ರಹದ ಪೆಸೆಯಿಂದ ಬಂಧಿಸಲ್ಪಟ್ಟ
ಶ್ರೀ| ಸುಭಾಷ್‌ಚಂದ್ರ ಬೋಸರು

### ಅದನ್ನು [illegible] ವರ್ಷಗಳ ವರೆಗೆ ಮಕ್ಕಳಿಗೆ ಕಲಿಸಿದರು

---

### ಆ ಸ್ಮಾರಕವನ್ನು ತೆಗೆಯಿರೆಂದು ಪಕ್ಷರೊಡನೆ ಹೇಳಿದಾಗ ಪುಕ್ಕತನವನ್ನು ತೋರಿದರು.

---

ಮುಸ್ಲಿಮ್ ನವಾಬನ ಮುಖಕ್ಕೆ ಮಸಿ ಹಚ್ಚುವ ದಂತಕಥೆಗೆ ಹಕ್ಕರ ಅಪ್ರತ್ಯಕ್ಷ ಬೆಂಬಲ!

**ಸುಳ್ಳಿನ ಸಮಾರಾಧನೆ! ಹೌದು ಇದೀಗ ಕಲ್ಕತ್ತದಲ್ಲಿ ವಿಜೃಂಭಣೆಯಿಂದ ನಡೆಯುತ್ತಿದೆ.**

**೧೮ ಅಡಿ ಚದರವಿರುವ ಒಂದು ಕೋಣೆಯಲ್ಲಿ ೧೪೬ ಮಂದಿ ಇಂಗ್ಲಿಷ್ ಕೈದಿಗಳು ಹಾಕಲ್ಪಟ್ಟರೆಂಬ ಸುಳ್ಳು ಕಥೆಯನ್ನು ಹೆಣೆದುದಕ್ಕೆ ಜಾನ್ ಜೆಫೇನಿಯಾ ಹಾಲ್‌ವೆಲ್ ಎಂಬವನ ಸ್ಮಾರಕಕ್ಕಾಗಿ ಶಿಲಾಪ್ರತಿಮೆಯೊಂದು ಕಲ್ಕತ್ತದಲ್ಲಿ ಸ್ಥಾಪಿಸಲ್ಪಟ್ಟಿತು.**

**ಈ ಸುಳ್ಳಿನ ಪ್ರತಿಮೆಯನ್ನು ತೆಗೆದು ಹಾಕಬೇಕೆಂದು ಬಂಗಾಲದ ಹಿಂದು ಮುಸ್ಲಿಮರೆಲ್ಲರೂ ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಜೂನ್ ೩ ರಂದು ತೀವ್ರಗಾಮಿ ಧುರೀಣರಾದ ಶ್ರೀ ಸುಭಾಷಚಂದ್ರ ಬೋಸರವರು ಅದನ್ನು ತೆಗೆದು ಹಾಕಲೇಬೇಕೆಂದು ಸತ್ಯಾಗ್ರಹ ಪ್ರಾರಂಭಿಸುವೆನೆಂದರು. ಪರಿಣಾಮವಾಗಿ ಹಕ್‌ಮಂತ್ರಿ ಮಂಡಲದವರು ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿಗನುಗುಣವಾಗಿ ಅವರನ್ನು ಸೆರೆಯಲ್ಲಿಟ್ಟರು. ಸತ್ಯಾಗ್ರಹವು ಈಗಲೂ ನಡೆಯುತ್ತಿದೆ. ಪ್ರತಿದಿನವೂ ಯುವಕರು ಬಂಧಿಸಲ್ಪಡುತ್ತಿದ್ದಾರೆ.**

**ಯಾರವನು ಧೀರ?**

**ಶಿಲಾಸ್ಮಾರಕಕ್ಕೆ ಅರ್ಹನಾದ ಧೀರನಾರವನು?** ಐರಿಷ್ ದೇಶದ ಸ[illegible] ವ್ಯಕ್ತಿಯಾದ ಹಾಲ್‌ವೆಲ್ ಎಂಬವನು.

ನಮ್ಮ ಶಾಲೆಗಳಲ್ಲಿ ಚರಿತ್ರೆಯ ಪುಸ್ತಕಗಳಲ್ಲಿ ಮಕ್ಕಳು ಲಜ್ಜಾವಹವಾದ ಒಂದು ಕಥೆಯನ್ನು ಈಗಲೂ ಓದುತ್ತಿದ್ದಾರೆ. ಅದೇ ಕಲ್ಕತ್ತದ ಕತ್ತಲೆ ಕೋಣೆ!

**ಯಾರನ್ನು ಬ್ರಿಟಿಷ್ ಚರಿತ್ರೆಗಾರರು ಕೆಟ್ಟ ಮನುಷ್ಯನೆಂದು ಚಿತ್ರಿಸಿದ್ದಾರೊ ಆ ಮಹಾಶಯನಾದ ಸಿರಾಜ್ ಉದ್ದೌಲನು ಫೋರ್ಟ ವಿಲಿಯಮನ್ನು ಮುತ್ತಿದಾಗ ಹಾಲ್‌ವೇಲನು ಸಣ್ಣ ಇಂಗ್ಲಿಷ್ ಸೇನೆಯೊಂದರ ದಳಪತಿಯಾಗಿದ್ದನು.**

**ಸಕಾಲದಲ್ಲಿ ಬೆಂಬಲವು ಬರದಿದ್ದುದರಿಂದ ಕೋಟೆಯಲ್ಲಿ ಯೋಧರೊಡನೆ ಹಾಲ್‌ವೆಲನೂ ಇರಬೇಕಾಯಿತು.**

**ಹಾಲ್‌ವೆಲ್ ತನ್ನ ಕಥೆಯನ್ನು ಹೆಣೆದಿರುವ ರೀತಿ ನೋಡಿ:—**

ನವಾಬನ ಸೈನಿಕರು ೧೪ ಅಡಿ ಚದರ ವಿರುವ ಕೋಣೆಯೊಂದರಲ್ಲಿ ೧೪೬ ಮಂದಿ ಇಂಗ್ಲಿಷ್ ಕೈದಿಗಳನ್ನು ಕೂಡಿ ಹಾಕಿದರಂತೆ! ಆ ಚಿಕ್ಕ ಕೋಣೆಗೆ ಎರಡೇ ಎರಡು ಬಹು ಚಿಕ್ಕ ಕಿಟಕಿಗಳಿದ್ದುವಂತೆ. ಅಷ್ಟು ಜನರು ಆ ಕೋಣೆಯಲ್ಲಿದ್ದರೂ ಈ ಮಹಾರಾಯನು ಕಿಟಕಿಯ ಬಳಿಯಲ್ಲಿಯೇ ಸ್ಥಳವನ್ನಾರಿಸಿ ಕೆಗೆದನಂತೆ. ಎಲ್ಲರಿಗೂ ಉಸಿರು ಕಟ್ಟಿತು. ಆದರೆ ಹಾಲ್‌ವೆಲ್ ಕಿಟಕಿಯ ಬಳಿಯಲ್ಲಿ ತಿಳಿಗಾಳಿಯನ್ನು ಸೇವಿಸುತ್ತಿದ್ದ. ಎಂತಹ ನಿಃಸ್ವಾರ್ಥ!

ಹಾಲ್‌ವೆಲ್‌ನಿಗೆ ಬಾಯಾರಿಕೆಯಾಯಿತಂತೆ. ಬೆವರಿನಿಂದ ತೊಯ್ದು ಹೋದ ಅಂಗಿಯ ಕೈಗಳನ್ನು ಬಾಯಿಯಲ್ಲಿಟ್ಟುಕೊಂಡನಂತೆ. ಇತರರೂ ಅವನಂತೆಯೇ ಬೆವರನ್ನು ಕುಡಿಯತೊಡಗಿದರು. ಆದರೂ ತನ್ನ ಸಮೀಪದಲ್ಲಿದ್ದ ಮಿಸೆಸ್ ಕೇರಿ ಎಂಬವಳನ್ನು ಆತ ಕಿಟಕಿಯ ಬಳಿಗೆ ಬರಲು ಬಿಡಲಿಲ್ಲವಂತೆ ಎಂತಹ ವ್ಯಕ್ತಿ! ಅವನಿಗಾಗಿ ಕಲ್ಕತ್ತದಲ್ಲಿ ಸ್ಮಾರಕ.

ಹಾಲ್‌ವೆಲನು ಯಾವ ದೃಷ್ಟಿಯಿಂದ ನೋಡಿದರೂ ಯೋಗ್ಯನಲ್ಲ. ಕ್ಲೈವನು ಮಾಡಿದ ಅನ್ಯಾಯಗಳ ಕುರಿತು ಇಂಗ್ಲೆಂಡಿನಲ್ಲಿ ವ್ಯವಹರಣೆ ನಡೆಯುತ್ತಿದ್ದಾಗ ಕ್ಲೈವನ ಪರವಾಗಿ ಸುಳ್ಳು ಸಾಕ್ಷಿ ಹೇಳಿದ ಕೀರ್ತಿ ಹಾಲ್‌ವೆಲನದು.

ಯಾರಿಗೂ ಅಸಾಧ್ಯವಾಗಿರುವ ೧೮ ಚದರದ ಕೋಣೆಯಲ್ಲಿ ೧೪೬ ಜನರನ್ನು ತುಂಬಿದರೆಂಬ ಘೋರ ಸುಳ್ಳು ಹೇಳಿದ ಕೀರ್ತಿ ಹಾಲ್‌ವೆಲನದು. ಆದುದರಿಂದ ಮಿ| ಗ್ರಿಫಿತ್ ಮೊದಲಾದ ಯುರೋಪಿಯನರು ಹಾಲ್‌ವೆಲ್ ಸ್ಮಾರಕವನ್ನು ನಾಶಗೊಳಿಸಬೇಕೆಂದಿರುವುದು.

ಆದರೆ ಮಿ| ಫಜ್ಲುಲ್ ಹಕ್ಕರು ಮುಸ್ಲಿಮ್ ರಾಜನೊಬ್ಬನ ಅವಮಾನವಾಗುತ್ತಿರುವುದನ್ನು ಸಹಿಸುತ್ತಿದ್ದಾರೆ.

ಕಲ್ಕತ್ತದಲ್ಲಿ ಜನಭರಿತವಾದ ಬೀದಿಯಲ್ಲಿ ಸುಳ್ಳಿನ ಸಾಕ್ಷಿಯಾಗಿ ನಿಂತಿರುವ ಸ್ಮಾರಕವನ್ನು ಬಂಗಾಲ ಕೊಲ್ಲಿಗೆ ತೆಗೆಸೆಯುವ ಚಳವಳಿಕ್ಕೆ ಹಕ್ಕರು ವಿರೋಧಿಸುತ್ತಿರುವುದು ಎಂತಹ ನಾಚಿಕೆಗೇಡಿತನ!

---


# 36,000 ರೂಪಾಯಿಗಳು.

## ಪೂರ್ಣ ಸರಿಯಾದ ೧೬ ಉತ್ತರಗಳಿಗೆ ಬಹುಮಾನವಾಗಿ ಹಂಚಲ್ಪಡುವುದು

ಮೊಹರು ಮಾಡಿಟ್ಟಿರುವ ನಮ್ಮ ಉತ್ತರದ ಮೊದಲನೆ ಅಡ್ಡ ಸಾಲಿನ ಪ್ರಾರಂಭದ ಎರಡು ಸಂಖ್ಯೆಗಳಿಗೆ ಸರಿಹೋಗುವ ಪ್ರತಿ ಉತ್ತರಕ್ಕೂ 5 ರೂಪಾಯಿಯ ಬಹುಮಾನವು ಕೊಡಲ್ಪಡುವುದು. ಮೊಹರು ಮಾಡಿಟ್ಟ ನಮ್ಮ ಉತ್ತರದ ಯಾವುದಾದರೊಂದು ಸಾಲಿಗೆ ಸರಿಹೋಲುವ ಪ್ರತಿ ಉತ್ತರಕ್ಕೂ 20 ರೂಪಾಯಿಯ ವಿಶೇಷ ಬಹುಮಾನಗಳು ಕೊಡಲ್ಪಡುವವು. ಮೊಹರಾಗಿದ್ದ ನಮ್ಮ ಉತ್ತರದ ಪ್ರಥಮ ಎರಡು ಸಾಲಿಗೆ ಸರಿಹೋಲುವ ಪ್ರತಿ ಉತ್ತರಕ್ಕೂ ರೂ. 300ರ ಬಹುಮಾನಗಳು ಕೊಡಲ್ಪಡುವವು. ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರ ಕಳುಹಿಸಿದವರಿಗೆ ರೂ. 150 ಕಾದಿಡಲಾಗಿದೆ.

| | | | |
|---|---|---|---|
| | | | |
| | | | |
| | | | |
| | | | |

ಈ ಚಚ್ಚೌಕದಲ್ಲಿ ಪ್ರತಿಯೊಂದು ಸಂಖ್ಯೆಯನ್ನು ಒಂದು ಬಾರಿಗೆ ಮಿಕ್ಕದಂತೆ 6ರಿಂದ 21ರ ವರೆಗಿನ ಸಂಖ್ಯೆಯನ್ನು ಪ್ರತಿಯೊಂದು ಕಲಮಿನ ಸಂಖ್ಯೆಯನ್ನು ಉದ್ದಕ್ಕೂ ಅಡ್ಡಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ 54 ಬರುವಂತೆ ಪೂರ್ತಿಮಾಡಿರಿ.

**ಉತ್ತರಗಳನ್ನು ಕಳುಹಿಸುವ ಕೊನೆಯ ದಿನ 30-7-1940. ಫಲಿತಾಂಶ ಪ್ರಕಟನೆ ದಿನ 8-8-40. ಒಂದು ಉತ್ತರಕ್ಕೆ ಪ್ರವೇಶಧನ ರೂ. 1. 3ಕ್ಕೆ ರೂ. 2. 8ಕ್ಕೆ ರೂ. 5.**

**ನಿಯಮಗಳು:**—ಮೇಲೆ ಸೂಚಿಸಿರುವಂತೆ ಅವಶ್ಯವಿರುವ ಹಣದೊಡನೆ ಖಾಲಿ ಕಾಗದದಲ್ಲಿ ಬರೆದು ಎಷ್ಟೂ ಉತ್ತರಗಳನ್ನು ಕಳುಹಿಸಬಹುದು ಹಣವನ್ನು ಮನಿಆರ್ಡರ್ ಅಥವಾ ಇಂಡಿಯನ್ ಪೋಸ್ಟಲ್ ಮೂಲಕ ಕಳುಹಿಸತಕ್ಕದ್ದು. ಬಹುಮಾನಗಳು ಸಂಗ್ರಹವಾದ ಹಣದ ದಾಮಾಶಯದಲ್ಲಿ ಕೊಡಲ್ಪಡುವುವು. ಆದರೆ ಮುಂಬಯಿಯ ಪ್ರಸಿದ್ಧ ಬೇಂಕಿನಲ್ಲಿಟ್ಟಿರುವ ಮೊಹರುತ್ತರಕ್ಕೆ ಸರಿಯಾದ ಉತ್ತರಕ್ಕೆ 2250 ರೂಪಾಯಿಗಳ ಬಹುಮಾನವು ನಿಶ್ಚಯವಾಗಿಯೂ ಕೊಡಲ್ಪಡುವುದು. ಫಲಿತಾಂಶ ತಿಳಿಯಬೇಕಾದರೆ ಸ್ಟಾಂಪು ಹಚ್ಚಿ ನಿಮ್ಮ ವಿಳಾಸ ಬರೆದ ಕವರನ್ನು ಉತ್ತರಗಳೊಂದಿಗೆ ಕಳುಹಿಸಿರಿ. ಮೆನೇಜರರ ನಿರ್ಣಯವೇ ಕೊನೆಯದಲ್ಲದೆ ನ್ಯಾಯಸಮ್ಮತವಾಗಿದೆಯೆಂಬುದನ್ನು ಗಮನದಲ್ಲಿಡತಕ್ಕದ್ದು.


ನಿಮ್ಮ ಉತ್ತರಗಳನ್ನು ಹಣವನ್ನು ಈ ವಿಳಾಸಕ್ಕೆ ಕಳುಹಿಸಿರಿ.

| | | | | |
|---|---|---|---|---|
| ಒಂದನೆ ಸಾಲು | 9 | 14 | 7 | 20 |
| ಎರಡನೆ ,, | 8 | 19 | 10 | 13 |
| ಮೂರನೆ ,, | 18 | 5 | 16 | 11 |
| ನಾಲ್ಕನೆ ,, | 15 | 12 | 17 | 6 |

The Manager,

**Forward Commercial Co.**

**Zaveri Bazar, BOMBAY 2.**



# ನಿಮಗೆ ಬೇಸರವಾದಾಗ ನನಗೆ ಬರೆಯಿರಿ

## ಹಿಟ್ಲರನ ಪ್ರಭಾವ

"ಮಂಗಳೂರಿನಲ್ಲಿ ಒಂದೇ ಸವನೆ ಕಳವುಗಳು ಹೆಚ್ಚುತ್ತಿರಲು ಕಾರಣ ವೇನಿರಬಹುದು?" ಕೇಳುತ್ತಾರೆ ಶ್ರೀ. ವಿ. ಆರ್. ಆರ್ (ಬೋಳಾರ)

ಹಿಟ್ಲರನು ಹಾಕಿಕೊಟ್ಟ ಮಾದರಿಯ ದೆಸೆಯಿಂದ.

o o o

## ಪೂರ್ಣ ಸ್ವಾತಂತ್ರ್ಯ

'ನಾನು ಪ್ರಗತಿಪರ ಮನೋವೃತ್ತಿಯ ಒಬ್ಬ ತರುಣ. ಜಾತೀಯ ಐಕ್ಯದಲ್ಲಿ ನನಗೆ ತುಂಬಾ ವಿಶ್ವಾಸ. ಜಾತೀಯ ಐಕ್ಯ ಸಾಧನೆಗೆ ಅಂತರ್ ಜಾತೀಯ ವಿವಾಹವು ಒಂದು ಉಚ್ಚ ಮಾಧ್ಯಮವೆಂದು ನನ್ನ ನಂಬುಗೆ. ನನ್ನ ನಂಬುಗೆಯಂತೆಯೇ ನಾನು ಇತ್ತೀಚೆಗೆ ಪತ್ರಿಕೆಗಳಲ್ಲಿ ಒಂದು ಜಾಹೀರಾತು ಪ್ರಕಟಿಸಿದೆ. ಜಾಹೀರಾತಿಗೆ ಪ್ರತ್ಯುತ್ತರವಾಗಿ ನನಗೆ ಹಲವು ಪತ್ರಗಳು ಬಂದುವು. ಪ್ರತಿಯೊಂದರಲ್ಲಿಯೂ 'ನಿಮ್ಮ ಜಾತಿಯಾವುದು?' ಎಂಬ ಪ್ರಶ್ನೆಯು ಇದ್ದೇ ಇತ್ತು. ನನ್ನ ಕೈ ಸೇರಿದ ಪತ್ರಗಳ ಪೈಕಿ ಒಂದರಲ್ಲಿ ಜಾತಿಯ ಸುದ್ದಿಯೇ ಇರಲಿಲ್ಲ. ನಾನು ಆ ಭಾಗದವರೊಡನೆ ಮಾತ್ರ ಪತ್ರ ವ್ಯವಹಾರ ಮಾಡಬೇಕೆಂದಿದ್ದೇನೆ. ಏಕೆಂದರೆ ಅಂತರ್ ಜಾತೀಯ ವಿವಾಹಕ್ಕೆ ಸಿದ್ಧರಾಗಿ ಪತ್ರಬರೆದವರಿಗೆ ಜಾತಿಯ ಸುದ್ದಿಯೇಕೆ? ನಾನು ನನ್ನ ಅಭಿಪ್ರಾಯದಂತೆ ನಡೆಯಬಹುದೆ?' ಕೇಳುತ್ತಾರೆ ಶ್ರೀ. ಎಸ್. ಎಸ್. ಆರ್ (ಬೆಂಗಳೂರು)

ಮದುವೆಯಾಗುವುದು ನೀವಾದುದರಿಂದ ನಿಮ್ಮಿಚ್ಛೆಯಂತೆಯೇ ನಡೆಯಿರಿ.

1940

## ದೇವರೇ ಗತಿ!

'ಸ್ವಾಮಿ, ಕರ್ನಾಟಕ ಏಕೀಕರಣವಾಗಬೇಕೆಂದು ಅಸ್ಪಷ್ಟವಾದ ಕೂಗು ನಮಗೆ ಕೇಳುತ್ತಿದೆ. ಆದರೆ ವ್ಯಾಪಾರಿಗಳಾದ ನಮಗೆ ಈ ಏಕೀಕರಣವಾಗಲಿರುವ ಪ್ರಾಂತ್ಯಕ್ಕೆ ಸೇರುವುದರಿಂದ ಯಾವ ಲಾಭವೂ ಇಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೆಂದರೆ ಒಂದು ಅನಾಥ ಹುಡುಗಿಯಂತೆ. ಅತ್ತ ಮುಂಬಯಿಯೂ ಅಲ್ಲ, ಇತ್ತ ಮದರಾಸೂ ಅಲ್ಲ. ಯಾರೊಡನೆ ಸೇರಿದರೂ ನಮ್ಮ ಭೌಗೋಲಿಕ ಪರಿಸ್ಥಿತಿಯಿಂದಾಗಿ ನಾವು ಮೂಲೆಯಲ್ಲಿಯೆ. ಆದುದರಿಂದ ಈ ಬಗ್ಗೆ ನಮ್ಮ ಜಿಲ್ಲೆಯ ಜನರಲ್ಲಿ ಸರಿಯಾದ ಅಭಿಪ್ರಾಯವನ್ನು ಉಂಟುಮಾಡಬೇಕು. ಹೀಗೇನೂ ಮಾಡದಿದ್ದರೆ ಈಗಾಗಲೆ ಹೊರಗಿನವರ ಆತಿಥ್ಯವನ್ನು ಪಡೆಯುತ್ತಿರುವ ಧುರೀಣರು ನಮ್ಮ ಜಿಲ್ಲೆಯ ಜನಾಭಿಪ್ರಾಯವನ್ನು ಲೆಕ್ಕಿಸದೆ ಯಾವುದಕ್ಕಾದರೂ ಸೇರಿಸಿಬಿಡಬಹುದು.' ಬರೆಯುತ್ತಾರೆ ಶ್ರೀ. ಕೆ. ಆರ್. ಕೆ. (ಮಂಗಳೂರು) Ed. K. Hyder.

ಏನು ಮಾಡೋಣ. ನಮ್ಮವರ ಬೆನ್ನುಹುರಿ ನೆಟ್ಟಗಾಗಲೊಪ್ಪುವುದೇ ಇಲ್ಲವಲ್ಲ. ಆದುದರಿಂದ ನೆಟ್ಟಗಾಗುವವರೆಗೆ ದೇವರೇ ಗತಿ!

o o o

Vol. 5, No. 105

Clean and neat Brahmin preparations!

**For daily use during your meals**

We prepare and sell best mango pickles, Udipi saar powder Colambo powder, Masala powder, vangibath powder, Chutney powder, Ananda powder, Shyamige, happala, pappada, Sugandhi kashaya powder. (can be used instead of coffee) -All healthy and tasty itemes that will make your meal sumptuous.

All orders must be accompanied with 50% advance
Parcels are sent by V. P. and Railway
*For further particulars enclose one anna stamp and write to*

**P. R. ACHARYA, Proprietor**

**THE KARNATAK CONDIMENTS STORES**

UDIPI, S. INDIA.

## ಎಷ್ಟೆತ್ತರ ಹುಚ್ಚು

“ಎಂ. ಜಿನ್ನಾ ಸಾಹೇಬರವರು ಮೌಲಾನಾ ಅಬುಲ್ ಕಲಮ್ ಆಜಾದರನ್ನು ಕಾಂಗ್ರೆಸ್ಸಿನ “show-boy” ಎಂದು ಹೇಳಿ ಹೀನಾಯಮಾನವಾಗಿ ದೂಷಿಸಿರುವುದು ಅಯೋಗ್ಯವಲ್ಲವೆ? ಜಿನ್ನರದಿದು ಎಷ್ಟೆತ್ತರ ಹುಚ್ಚು?” ಕೇಳುತ್ತಾರೆ ಶ್ರೀ ಕೆ.ಎಲ್.ಕೆ.(ಬೆಂಗಳೂರು.)

ಅಲ್ಲವೆಂದವರಾರು?

೦ ೦ ೦

## ಉಪಾಯ

ಜಗತ್ತಿನಲ್ಲಿ ಶಾಂತಿಯಾಗಬೇಕಾದರೆ ಮೊದಲು ಮಾಡಬೇಕಾದ ಕರ್ತವ್ಯ ವಾವುದು?” ಕೇಳುತ್ತಾರೆ ಶ್ರೀ ಕೆ. ಬಿ. ಐ. (ಬಳ್ಳಾರಿ)

ಸಾಮ್ರಾಜ್ಯಶಾಹೀ ಮನೋವೃತ್ತಿಯ ಎಲ್ಲಾ ರಾಜಕಾರಣಿಗಳನ್ನು ಕಾರಾಗೃಹದಲ್ಲಿಟ್ಟು ಧುರೀಣತ್ವವನ್ನು ಇತರರಿಗೆ ಕೊಡಬೇಕು!

೦ ೦ ೦

## ಆಶ್ಚರ್ಯವೆ?

“ಮಹಾತ್ಮಾಜಿಯವರು ಬ್ರಿಟನಿನೊಂದಿಗೆ ಅಹಿಂಸಾತ್ಮಕವಾಗಿ ಹಿಟ್ಲರನೊಡನೆ ಹೋರಾಡಬೇಕೆಂದುದಕ್ಕೆ ಬ್ರಿಟಿಷರು ಅದಕ್ಕೊಪ್ಪದೆ ಜಯದೊರಕುವ ವರೆಗೆ ಹೋರಾಡುತ್ತೇವೆಂದು ಉತ್ತರವಿತ್ತಿದ್ದಾರೆ ಪ್ರಜಾಸತ್ತಾತ್ಮಕ ತತ್ತ್ವವನ್ನು ಮೆಚ್ಚುವವರು ಗಾಂಧಿಜಿಯವರ ಸೂಚನೆಯನ್ನು ಮಾನ್ಯಮಾಡದಿರುವುದು ಆಶ್ಚರ್ಯವಲ್ಲವೆ?” ಕೇಳುತ್ತಾರೆ ಶ್ರೀ. ಕೆ. ವಿ. ಯಚ್ (ಮುಂಬಯಿ)

ತಮ್ಮ ಕಷ್ಟಕಾಲದಲ್ಲೂ ಸಾಮ್ರಾಜ್ಯಶಾಹೀ ಮನೋವೃತ್ತಿಯನ್ನು ಬಿಡದ ಜನರು ಗಾಂಧಿಜಿಯವರೊಂದಿಗೆ ತಮ್ಮ ಛಲಬಿಡದಿರುವುದರಲ್ಲೂ ಒಂದು ಆಶ್ಚರ್ಯವಿದೆಯೆ?

೦ ೦ ೦

## ಮಂಗಳೂರಿನ ಕೊರತೆ

“ನಾನು ೧೯೩೯-೪೦ರ ಮಂಗಳೂರು ಮ್ಯುನಿಸಿಪಾಲಿಟಿಯ ವರದಿಯನ್ನು ನೋಡಿದ್ದೇನೆ. ಆದರೆ ಅದನ್ನೋದಿದ ಬಳಿಕ ಮೊತ್ತಮೊದಲು ನಮಗೆ ನೆನಪಾಗುವ ಒಂದು ವಿಷಯವೆಂದರೆ ಮಂಗಳೂರಿಗೆ ‘ಡ್ರೈನೇಜ್’ ಮತ್ತು ‘ಪೈಪ್ ವಾಟರ್’ನ ವ್ಯವಸ್ಥೆಯಿಲ್ಲದಿರುವುದು. ದಿನೇ ದಿನೇ ನುಸಿಗಳು ಹೆಚ್ಚುತ್ತಿರುವಾಗ ಅಶುದ್ಧ ನೀರಿನಿಂದಾಗಿ ರೋಗಗಳು ಅಧಿಕವಾಗುತ್ತಿರುವಾಗ ಅತ್ಯವಶ್ಯವಾದ ಪೈಪುವಾಟರ್ ಮತ್ತು ಡ್ರೈನೇಜಿನ ವ್ಯವಸ್ಥೆ ಮಾಡದಿರುವುದು ದೊಡ್ಡ ಅನ್ಯಾಯವಲ್ಲವೆ? ನಗರಪಿತಾಮಹರು ಕೇವಲ ಸ್ಥಾನಮಾನಗಳಿಗಾಗಿ ಯತ್ನಿಸುವುದಲ್ಲದೆ ಈ ಬಗ್ಗೆ ಯಾವ ಸಿದ್ಧತೆಯನ್ನೂ ಮಾಡಲಿಲ್ಲ. ಇನ್ನೊಂದು ವಿಷಯವೆಂದರೆ ಮಂಗಳೂರಿಗೊಂದು ಟೌನ್‌ಹಾಲ್ ಇಲ್ಲದಿರುವುದು. ಆಡಳಿತೆಯು ಕೇವಲ ಕೆಲವು ಮಂದಿಯ ಕೈಯ್ಯಲ್ಲಿರದೆ ವೈಯಕ್ತಿಕ ಸ್ವಾರ್ಥವಿರದ ಜನರಲ್ಲಿದ್ದಿದ್ದರೆ ಮಂಗಳೂರಿಗೆ ಈ ಸೌಕರ್ಯಗಳು ಎಂದೋ ದೊರಕುತ್ತಿದ್ದುವು,’ ಬರೆಯುತ್ತಾರೆ ಶ್ರೀ. ವಿ. ಯಸ್. ಕೆ. (ಮಂಗಳೂರು)

ಮ್ಯುನಿಸಿಪಲ್ ಕಾನ್ಸಿಲನ್ನು ಪ್ರವೇಶಿಸುವುದು ಸ್ಥಾನವನ್ನು ಅಲಂಕರಿಸಲಿಕ್ಕಲ್ಲ. ಪರಂತು ಸಾರ್ವಜನಿಕರ ಸುಖಕ್ಕಾಗಿ ದುಡಿಯಲಿಕ್ಕೆಂದು ಭಾವಿಸುವ ಜನರಿದ್ದರೆ ಎಲ್ಲವೂ ಚೆನ್ನಾಗುವುದು. ಅದಕ್ಕಾಗಿ ಜನರು ಚಳವಳಿಸಬೇಕು.

೦ ೦ ೦

## ಅಭಿನಯ

‘ಮಹಾತ್ಮಾಜಿಯವರು ಕಾಂಗ್ರೆಸಿನ ಧುರೀಣತ್ವದಿಂದ ಈಗಾಗಲೆ ದೂರವಾಗಿರುವುದರಿಂದ ಮುಂದೆ ಕಾಂಗ್ರೆಸ್ ಸದಸ್ಯರು ಖಾದಿ ನಾಟಕ ಮತ್ತು ಅರೆ ಸಂನ್ಯಾಸಿ ವೇಷ ಹಾಕಿ ಅಭಿನಯಿಸಬೇಕಿಲ್ಲನಷ್ಟೆ?’’ ಪ್ರಶ್ನಿಸುತ್ತಾರೆ ಶ್ರೀ. ಕೆ. ಯಸ್. ಯಸ್ (ಮಂಗಳೂರು)

ಕ್ಷುದ್ರ ಮನೋವೃತ್ತಿಯ ಕುನ್ನಿಗಳು ಸದಾ ಅಭಿನಯಿಸಲೇ ಬೇಕಾಗುತ್ತದೆ. ಆದರೆ ಸ್ವಬುದ್ಧಿಯಿರುವ ಜನರು ಯಾವಾಗಲೂ ತಮ್ಮ ಧೋರಣೆಗಳನ್ನು ಬದಲಾಯಿಸಲಾರರು.

---

# ಮಾನ್ಯ ಗವರ್ನರರ ಯುದ್ಧ ನಿಧಿ

## ಜಿಲ್ಲಾ ಕಲೆಕ್ಟರರ ಪ್ರಕಟನೆ

ದಕ್ಷಿಣ ಕನ್ನಡದ ಮಾನ್ಯ ಜಿಲ್ಲಾ ಕಲೆಕ್ಟರರು ಕೆಳಗಿನಂತೆ ತಿಳಿಸಲಪೇಕ್ಷಿಸಿದ್ದಾರೆ:—

“ಮಾನ್ಯ ಗವರ್ನರರ ಯುದ್ಧ ನಿಧಿಗೆ ಚಂದಾಕೊಟ್ಟವರು ತಮ್ಮ ಹಣವು ಯಾವ ವಿಶಿಷ್ಟ ವಿಭಾಗದಲ್ಲಿ ವಿನಿಯೋಗಿಸಬೇಕೆಂದು ಅಪೇಕ್ಷಿಸುವರೋ ಅದಕ್ಕೆನೇ ವಿನಿಯೋಗವಾಗುವಂತೆ ಏರ್ಪಾಡು ಮಾಡಲಾಗಿದೆ. ವಿಮಾನ ಶುಶ್ರೂಷಾ ಪಥಕ ಅಥವಾ ಯುದ್ಧಕ್ಕೆ ಸಂಬಂಧಿಸಿದ ಇತರ ವಿಭಾಗಕ್ಕೆ ವಿನಿಯೋಗವಾಗಬೇಕಾದರೆ ಆಯಾ ವಿಭಾಗದ ಲೆಖ್ಖಕ್ಕೆ ಆ ಹಣವನ್ನು ದಾಖಲುಪಡಿಸಲಾಗುವುದು. ಜನರ ಇಂತಹ ಇಚ್ಛೆಗಳಿಗೆ ಸರ್ವಥಾ ಭಂಗಬರುವಂತಿಲ್ಲ. ಇದರಲ್ಲಿ ಯಾವ ಸಂದೇಹವೂ ಇರಲಾರದೆಂದು ಈ ಮೂಲಕ ಬಿನ್ನವಿಸಲಾಗಿದೆ.”

ಕಥಾ ಲೇಖಕ:-

# "ಗಂಡಿನಾಶೆ!"

ವೈಕುಂಠ ನಾರಾಯಣ ಪ್ರಭು,
ಬಲ್ಲಾಳ, ಕುಮಟಾ.

ದೇವೇಂದ್ರ ತನ್ನ ಚಿಕ್ಕ ಸಂಸಾರವನ್ನು ಚೊಕ್ಕವಾಗಿ ಸಾಗಿಸಿಕೊಂಡಿದ್ದ. ಅವನ ಪತ್ನಿ ಲಕ್ಷ್ಮಿ ಇಷ್ಟೊತ್ತಿಗೆ ಒಂಭತ್ತು ಬಸಿರುಗಳನ್ನು ಹೊತ್ತು ಹೆತ್ತಳು. ಆದರೆ, ಅವರ ಪಾಲಿಗೆ ಉಳಿದವುಗಳೆಂದರೆ ಕಡೆಯ ಈರ್ವ ಹೆಂಗೂಸುಗಳು ಮಾತ್ರ. ದೇವೇಂದ್ರಗೆ ಅಳಿದ ಮಕ್ಕಳಿಗಾಗಿ, ದುಃಖವೆನಿಸಲಿಲ್ಲ! ಉಳಿದ ಮಕ್ಕಳಿಗಾಗಿ ಸಂತೋಷವೂ ಎನಿಸಲಿಲ್ಲ.! ಅದಕ್ಕೆ ಕಾರಣವೆಂದರೆ ಅಳಿದವುಗಳೂ ಹೆಂಗೂಸುಗಳೇ; ಉಳಿದವುಗಳೂ ಹೆಂಗೂಸುಗಳೇ.

ತನ್ನ ವಂಶವೃದ್ಧಿಗೆ, ತಿಲೋದಕ ನೀಡಲಿಕ್ಕೆ, ಒಂದಾದರೂ ಗಂಡು ಜನಿಸಲಿಲ್ಲವಲ್ಲಾ? ಎಂಬದೊಂದು ಕೊರಗು ದೇವೇಂದ್ರನಲ್ಲಿ ಇತ್ತಿತ್ತಲಾಗಿ ಉದಿಸಿತ್ತು. ದೇವೇಂದ್ರನ ವಯಸ್ಸು ನಾಲವತ್ತೆಂಟಕ್ಕೆ ಮಿಕ್ಕಿತ್ತಾದರೂ, ಅವನಲ್ಲಿ ಹುಮ್ಮಸ್ಸು ಇತ್ತು. ಆದರೆ, ಲಕ್ಷ್ಮಿಯು ಮಾತ್ರ ಹೆತ್ತು ಹೆತ್ತು ಬೇಸತ್ತಿದ್ದಳು. ಅದೂ ಪೆಣ್ಮಕ್ಕಳನ್ನು ಹೆತ್ತಾಕೆ; ಎಂದ ಮೇಲೆ ಕೇಳಬೇಕೇ? ಸಕಾಲದಲ್ಲಿ ಅತ್ಯಗತ್ಯದ ಔಷಧೋಪಚಾರಗಳಿಗೂ ಅಪಾತ್ರಳಾಗುತಿದ್ದಳಾಕೆ! ಅದರಿಂದವಳು ಸಹಜವಾಗಿಯೇ ಕೊರಗಿ ಸೊರಗಿದ್ದಳು. ಅವಳ ಈ ಪರಿಯ ಇರವೇ ದೇವೇಂದ್ರನ ನಿರಾಶೆಯ ಮೂಲವಾಗಿತ್ತು. ಸಂದರ್ಭವಿರಲಿ ಇಲ್ಲದಿರಲಿ 'ಒಂದು ಗಂಡು ಜನಿಸಲಿಲ್ಲವಲ್ಲಾ?' ಎಂದುಸುರುವ ಇಳಿವೋರೆಯ ದೇವೇಂದ್ರನನ್ನು ಕಂಡರೆ ಕನಿಕರವೆನಿಸುತಿತ್ತು.

○ ○ ○

'ಲಕ್ಷ್ಮಿ ಬಸುರಿ; ಮುಟ್ಟುನಿಂತು ಎರಡು ತಿಂಗಳಾದವಂತೆ; ಅವಳಿಗೆ ವಾಂತಿ ಬೇರೆ ಶುರುವಾಗಿದೆ!' ಎಂದಳು, ನೆರೆಮನೆಯ ಗಂಗಾಬಾಯಿ. ದೇವೇಂದ್ರನಿಗೂ ಹೌದೆನ್ನಿಸಿತು; ಹೌದಾಗಿತ್ತು. ಅಂದಿನಿಂದ ದೇವೇಂದ್ರನ ನಿರಾಶೆ ಅಳಿದು, 'ಗಂಡಿನಾಶೆ' ಬಲಿಯತೊಡಗಿತು. ದೇವೇಂದ್ರ ನಲಿದಾಡಲಾರಂಭಿಸಿದ. ಕಂಡುಕಾಣದೆ ದೇವರು ದಿಂಡರುಗಳಿಗೆಲ್ಲ ಹರಿಕೆ ಹೊತ್ತ.

ದೇವೇಂದ್ರನ ಲೆಖ್ಖ (?) ದಂತೆ ಲಕ್ಷ್ಮಿಗೆ ಪೂರ್ಣ ನವಮಾಸಗಳುರುಳಿದವು. ಲಕ್ಷ್ಮಿ ಇನ್ನೂ ಹಡೆಯಲಿಲ್ಲ. 'ಗಂಡು ಹಡೆಯಲು ಹೆಣ್ಣಿಗಿಂತಲೂ ತಡ' ಎಂಬ ಹೆಂಗಳೆಯರ ಮಾತಿನ ಮೇಲೆ ಭರವಸೆ ಇಟ್ಟ ದೇವೇಂದ್ರನ ಆನಂದಸಾಗರ ತಾನೇ ಉಕ್ಕೇರತೊಡಗಿತು. ದಶಮಾಸ ಸಮಾಪಿಸಿದವು. 'ಸ್ವರ್ಗಕ್ಕೆ ಮೂರೇ ಬೆರಳಂತರ'ವೆಂಬಂತಿತ್ತು ದೇವೇಂದ್ರನ ಸ್ಥಿತಿ.

ಲಕ್ಷ್ಮಿಗೆ ಪ್ರಸೂತಿ ವೇದನೆಗಾರಂಭವಾಯಿತು. ಒಮ್ಮೆ ಜೋರಾಗಿ ಪ್ರಾರಂಭವಾದ ವೇದನೆ ಬಹು ಹೊತ್ತಿನ ನಂತರ ಮಾಯವಾಗುತ್ತಾಗುತ್ತಾ ಬಂತು. ಹೆರಿಗೆ ಕಷ್ಟಪ್ರದವೆನಿಸಿತು. ಸೂಲಗಿತ್ತಿಯ ಕೈಕಾಲುಗಳು ನಡುಗಲಾರಂಭಿಸಿದವು. ಸೂತಿಕಾಗೃಹದೊಳಗಿಂದ ಬರುವ ಅಯ್ಯಯ್ಯಯ್ಯೋ ಎಂಬ ಆರ್ತ ಧ್ವನಿಯು ಕ್ಷೀಣವಾಗುತ್ತಾ ಬಂದಿತ್ತು.

ದೇವೇಂದ್ರ ತನ್ನ 'ಗಂಡಿನಾಶೆ' ಅನತಿದೂರದಲ್ಲೇ ಫಲಿಸಲಿದೆ ಎಂಬ ಗುಂಗಿನಲ್ಲಿದ್ದರೆ, ಪಾಪ! ಬಡವೆ ಲಕ್ಷ್ಮಿ ತನ್ನ ಜೀವನ ವೃಕ್ಷದ ತುಟ್ಟತುದಿಯ ಟೊಂಗೆಯಲ್ಲಿದ್ದಳು.

'ಜನಿಸುವ ಕೂಸಿಗೆ ಏನೆಂದು ಹೆಸರಿಡಬೇಕು? ಅದನ್ನೆಂತು ಎತ್ತಿ ಮುದ್ದಾಡಿ ನಲಿದಾಡಬೇಕು? ಎಂಬಿವೇ ಮೊದಲಾದ ಭಾವೀಸುಖ ಸಾಮ್ರಾಜ್ಯದಲ್ಲಿ ದೇವೇಂದ್ರ ತಾನೇ ಲೋಲುಪನಾಗಿದ್ದ.

"ವೇದನೆ ಮಾಯವಾಗುತ್ತಾ ಬಂತು; ಜಲಕೋಶ ಒಡೆದು ನಾಲ್ಕೈದು ತಾಸಾದವು! ಹೆರಿಗೆ ಸ್ವಲ್ಪ ಕಷ್ಟಕರವೆಂಬಂತಿದೆ! ಕೊಂಚ ಡಾಕ್ಟರರಲ್ಲಿಗೆ ಹೋಗಿ ಬಂದರೆ ಒಳ್ಳೇದಿತ್ತು!" ಎಂದು ಕಂಗೆಟ್ಟ ಸೂಲಗಿತ್ತಿ ದೇವೇಂದ್ರನೊಡನೆ ಅಂತರಂಗದಿಂದುಸುರಿದಳು.

**FOR SALE**

A baby car (Ford) is for sale. For particulars apply to—
"X" Co/ Antaranga, Udipi.

ತಕ್ಷಣ ದೇವೇಂದ್ರ ಡಾಕ್ಟರರಲ್ಲಿಗೆ ಹೊರಟ. ಆತಗೆ ಲಕ್ಷ್ಮಿಯ ಕಷ್ಟಕರ ಹೆರಿಗೆಯ ಬಗ್ಗೆ ಅಷ್ಟೊಂದು ಕನಿಕರವೆನಿಸಲಿಲ್ಲ. ತನ್ನ ಇಷ್ಟ ಸಿದ್ಧಿಗೆ ನಷ್ಟವೊದಗಬಾರದೆಂಬದೇ ಮುಖ್ಯೋದ್ದೇಶವಾಗಿತ್ತು. ಅದರಿಂದಲೇ ಆತ ತಕ್ಷಣ ಡಾಕ್ಟರರ ಮನೆ ಕಂಡದ್ದು. ಡಾಕ್ಟರ ಮಸೂರಿಯವರಿಗೆ ಭೆಟ್ಟಿಯಾಗಿ, ದೇವೇಂದ್ರ ಸೂಲಗಿತ್ತಿಯಂದದ್ದನ್ನೆಲ್ಲ ಒಂದೇ ಉಸುರಿಗೆ ಹೇಳಿಮುಗಿಸಿದ. ಡಾಕ್ಟರ ಮಸೂರಿಯವರೆಂದರೆ ನುರಿತ ಅನುಭವಿಕ ಡಾಕ್ಟರರು. ಹೆರಿಗೆಯ ಕೆಲಸದಲ್ಲಂತೂ ಅವರಿಗೆ ಸರಿಗಟ್ಟುವವರ್‍ಯಾರೂ ಇರಲಿಲ್ಲ. ಮೇಲಾಗಿ ದಯಾಮಯಿಗಳು.

ಡಾಕ್ಟರರು ದೇವೇಂದ್ರ ಹೇಳಿದ್ದನ್ನೆಲ್ಲ ಕೇಳಿಕೊಂಡರು. ಕೊಂಚ ಸಮಯದವರೆಗೆ ಯೋಚಿಸಿದರು. ಕಾಲು ತಾಸಿಗೊಮ್ಮೆ ಕೊಡುವಂತೆ ನಾಲ್ಕು ಪಾಲು ಔಷಧ ತಯಾರಿಸಿ ಕೊಟ್ಟರು. 'ಈ ಔಷಧಿಯ ನಾಲ್ಕೂ ಭಾಗ ಕೊಟ್ಟಾದರೂ ಹೆರಿಗೆಯಾಗದಿದ್ದರೆ ಒಡನೇ ನಾನಿದ್ದಲ್ಲಿಗೆ ಬಾ. ನಾನೇ ಸ್ವತಃ ಬಂದು ನೋಡುತ್ತೇನೆ.' ಎಂದರು ಡಾಕ್ಟರರು. ದೇವೇಂದ್ರ ಔಷಧ ತಗೊಂಡು ಮನೆ ಸೇರಿದ.

ಮನೋಸಾಮ್ರಾಜ್ಯದ ಮಬ್ಬಿನಲ್ಲಿದ್ದ ದೇವೇಂದ್ರಗೆ ಲಕ್ಷ್ಮಿಯ ಕಷ್ಟದ ಅರಿವಿರಲಿಲ್ಲ. ಇಷ್ಟಾನಿಷ್ಟದ ಪರಿವೆ ಇರಲಿಲ್ಲ. ದೇವೇಂದ್ರ ತಾನು ತಂದ ಔಷಧಿಯನ್ನು ಸೂಲಗಿತ್ತಿಯ ಕೈಗಿತ್ತ. 'ಈ ಔಷಧಿಯ ನಾಲ್ಕುಭಾಗ ಸೇವನಾನಂತರವೂ ಹೆರಿಗೆಯಾಗದಿದ್ದರೆ ಸ್ವತಃ ಡಾಕ್ಟರರೇ ಬಂದು ಹೆರಿಗೆ ಮಾಡುತ್ತಾರಂತೆ.' ಎಂದು ಬಡಿವಾರದ ಮಾತನ್ನಾಡಿದ. ಇದರ ಪರಿಣಾಮ ಲಕ್ಷ್ಮಿಯ ಮೇಲೆ ಯಾವ ರೀತಿಯಾದೀತೆಂಬ ಯೋಚನೆ ಮಾಡಲಿಲ್ಲಾತ. ನರಳುತ್ತ ಬಳಲುತ್ತಲಿದ್ದ ಲಕ್ಷ್ಮಿ ದೇವೇಂದ್ರನಾಡಿದ ಮಾತುಗಳನ್ನು ಕೇಳದಿರಲಿಲ್ಲ. ಮೊದಲೇ ಅಶಕ್ತ-ಪ್ರಕೃತಿಯವಳು. ಹೆರಿಗೆಯಲ್ಲಿ ಹಿಂದೆಯೂ ಇಂದಿನಷ್ಟು ಕಷ್ಟ ಅನುಭವಿಸಿದವಳಲ್ಲಾಕೆ. ಅದರಲ್ಲೂ ಪತಿಯಾಡಿದ ಮಾತಿನೊಳಗಿನ '....ಡಾಕ್ಟರ...' ಎಂಬ ಅಪೂರ್ಣ ವಾಕ್ಯಕೇಳಿ ಅವಳು ತನ್ನಷ್ಟಕ್ಕೆ ಏನೇನೋ ಗ್ರಹಿಸಿಕೊಂಡಿರಬೇಕು. ಅದರಿಂದವಳ ಎದೆ ಹಾರುವದು ಜೋರಾಯಿತು. ಅವಳ ಮನೋವೇದನೆ ಬಲಿಯಿತು.

ಮೂರು ಪಾಲು ಔಷಧ ಸೇವನಾನಂತರ ಲಕ್ಷ್ಮಿ ಬಹು ಪ್ರಯಾಸದಿಂದ ಹಡೆದಳು. ಕೂಸು ಚೀರತೊಡಗಿತು. ಲಕ್ಷ್ಮಿಗೆ ಮೂರ್ಛೆಬಂದಿತ್ತು. ಸೂಲಗಿತ್ತಿ ಸಮಯೋಚಿತ ಉಪಚಾರದಲ್ಲಿ ನಿರತಳಾಗಿದ್ದಳು.

ಹೊರಕುಳಿತ ಹೆಂಗಳೆಯರೂ, 'ಗಂಡಿನಾಶೆ'ಯ ಮುಂದೆ ಹೆಂಡತಿಯ ಪರಿವೆ ಇಲ್ಲದ ದೇವೇಂದ್ರನೂ, "ಹೆಣ್ಣೋ? ಗಂಡೋ?" ಎಂದೆನ್ನುತ್ತ ಸೂತಿಕಾಗೃಹದ ಬಾಗಿಲು ಮುತ್ತಿದರು.

"ಸ್ವಲ್ಪ ಓರೆಯಾಗಿ, ಕೊಂಚ ಗಾಳಿಯಾಡಲಿ. ಮುಂದೆ ನೋಡೋಣ! ಹೆಣ್ಣೋ ಗಂಡೋ ಎಂಬದನ್ನು. ತುರ್ತ ಬಾಣಂತಿಯನ್ನೊಮ್ಮೆ ಎಚ್ಚರಿಸಿಕೊಳ್ಳುತ್ತೇನೆ." ಎಂದು ಸೂಲಗಿತ್ತಿ ಬಹು ಕಷ್ಟದಿಂದ ಉಸುರಿದಳು. ಸೂಲಗಿತ್ತಿಯ ಪರಿಶ್ರಮಪೂರ್ವಕ ಉಪಚಾರದಿಂದಾಗಿ ಬಾಣಂತಿ-ಲಕ್ಷ್ಮಿ ಕೊಂಚ ಕೊಂಚ ಸುಧಾರಿಸುತ್ತ ಶುದ್ಧಿಯಮೇಲೆ ಬರುತ್ತಲಿದ್ದಳು.

ಸೂಲಗಿತ್ತಿಯಾಡಿದ ಮಾತಿನಿಂದ ಅಕಾರಣವಾಗಿ ರೇಗಿದ ಜರಠೆಯೋರ್ವಳು ಮಿಂಚಿನ ವೇಗದಿಂದ ಮುಂದಾದಳು. 'ಏನು ಸೊಕ್ಕು ಬಂದಿದೆಯವ್ವಾ ಈ ಸೂಲಗಿತ್ತಿಗೆ. ತನ್ನೊದ್ಧರತು ಏನೂ ನಡೆಯದೆಂಬ ಧಿಮಾಕಿನವಳೀಕೆ. 'ಹೊಳೆಯ ನೀರಿಗೆ ಡೊಣ್ಣೆನಾಯಕನ ಅಪ್ಪಣೆ' ಎಂಬಂತೆ ಹೆರವರ ಮನೆಯಲ್ಲೂ ಇವಳ ಪಾರುಪತ್ಯ! ಹೂಂ.... ಹೆಣ್ಣೋ ಗಂಡೆಂದು ನೋಡಲೂ ನಮ್ಮಿಂದಾಗದೆಂದು ಭಾವಿಸಿದಳೇನೋ ಇವಳು?" ಎಂದು ಕಿಡಿಕಿಡಿಯಾಗಿ ಕಿರಚುತ್ತ, ಆಗ ತಾನೇ ಭೂಲೋಕಕ್ಕಿಳಿದ, ಹಸುಗೂಸನ್ನು ಲಕ್ಷ್ಯಪೂರ್ವಕವಾಗಿ ಇಣಿಕಿ-ಹಣಿಕಿ-ನೋಡಿ

ಸಚಿತ್ರ] **ಪೌರುಷ** [ಸಚಿತ್ರ

**ಪ್ರೇಮಕಲಾ, ಕಾಮದ ಗುಟ್ಟು ಮೊದಲಾದ ಪುಸ್ತಕಗಳನ್ನು ಬರೆದ ಡಾ|| ಗೋಪಾಲಕೃಷ್ಣರ ಹೊಸ ಪುಸ್ತಕ!**

ಕಾಮವೆಂದರೇನು? ಪೌರುಷವೆಂದರೇನು? ದುಶ್ಚಟಗಳಿಂದ ನಪುಂಸಕರಾಗಿದ್ದರೆ ಏನು ಮಾಡಬೇಕು? ಪೌರುಷ ನಾಶದ ಕಾರಣಗಳು, ಲಕ್ಷಣಗಳು, ವಿವಿಧ ಔಷಧೋಪಚಾರಗಳು, ಮಾನಸೋಪಚಾರಗಳು, ಕಳೆದುಕೊಂಡ ಪೌರುಷವನ್ನು ಮತ್ತೆ ತಂದುಕೊಳ್ಳಲು ಅನೇಕ ಚಿಕಿತ್ಸೆಗಳು ಇತ್ಯಾದಿ.......

ಪ್ರತಿಯೊಬ್ಬ ಪುರುಷನು ಅವಶ್ಯ ಓದಬೇಕಾದ ಪುಸ್ತಕ!

**ಬೆಲೆ: ೧ ರೂಪಾಯಿ. (ವಿ. ಪಿ. ವೆಚ್ಚ ಬೇರೆ)**

ವಿಳಾಸ:- **ಸಮಾಜ ಪುಸ್ತಕಮಾಲೆ, ಧಾರವಾಡ.**

ದಳು. 'ಇಸ್ಸೀsss! ದೇವೇಂದ್ರಾ? ನಿನ್ನ ಆಶೆ ಎಲ್ಲಾ ಮಣ್ಣುಪಾಲಾಯಿತಲ್ಲೋ? ಗಂಡು ಹಡೆಯಲು ಪಡೆದು ಬಂದವಳೇ ಅಲ್ಲ, ನಿನ್ನ ಹೆಂಡತಿ. ಅವಳ ಬಡಿಯ ಗುಣ, ಅದೆಂದಾದರೂ ತಪ್ಪುವದುಂಟೇ? ಅವಳ ತಾಯಿಯಲ್ಲಿ ಹುಟ್ಟಿದ್ದಾದರೂ ಎಲ್ಲಾ ಹೆಣ್ಣೇ ಅಲ್ಲೇನೋ? ನೀನು ಎಷ್ಟೆಲ್ಲಾ ಆಶೆಪಟ್ಟಿದ್ದೆ? ಎಲ್ಲಾ ವ್ಯರ್ಥ. ಹೂಂsss!' ಎಂದಳಾ ವಿಕೃತವದನೆ. ದೇವೇಂದ್ರನ ಮನೋರಾಜ್ಯ ಸೂರೆಯಾಗಿ ಹೋಯಿತು. ಆತ ನಿಂತಲ್ಲೇ ನಿಂತುಬಿಟ್ಟ-ಅಚೇತನ ಮೂರ್ತಿಯೋಪಾದಿಯಲ್ಲಿ.

ಅರ್ಧಮರ್ಧ ಮೂರ್ಛೆ ತಿಳಿದೆದ್ದು, ನರಳುತ್ತ ಬಳಲುತ್ತ ಇದ್ದ ಲಕ್ಷ್ಮಿಗೆ ಆ ಸೊಟ್ಟ ಮೋರೆಯವಳಾಡಿದ ಕೊಂಕು ನುಡಿಗಳು ಕೇಳಿಸಿದವು. ಮನನೊಂದಳು. ಸಹಿಸಲಸದಳವಾದ ಮನಃಕ್ಲೇಶ ಪಟ್ಟಳು. ಪ್ರಸೂತಿವೇದನಾ ಮೂರ್ಛೆಯಿಂದ ಬಳಲಿ ಎಚ್ಚೆತ್ತ ಲಕ್ಷ್ಮಿ ಅಸಹನೀಯ ಮನೋವೇದನೆಗೆ ತುತ್ತಾದ್ದರಿಂದ ಪುನಃ ಮೂರ್ಛೆ ಹೋದಳು. ಎಚ್ಚರದಪ್ಪಿ ನಿಶ್ಚೇಷ್ಟಳಾಗಿ ಬಿದ್ದುಬಿಟ್ಟಳು.

ನೆರೆದವರನ್ನೆಲ್ಲ ಗದ್ದರಿಸಿ ದೂರಸರಿಸಿ, ಸೂಲಗಿತ್ತಿ ಪುನಃ ಲಕ್ಷ್ಮಿಯನ್ನುಪಚರಿಸತೊಡಗಿದಳು. ಅತಿಯಾಗಿ ಸಾಹಸಪಟ್ಟಳು. ಬಹುವಾಗಿ ಹೆಣಗಾಡಿದಳು ಕಡೆಯಲ್ಲಿ ನಿರುಪಾಯಳಾದಳು. ಸೂಲಗಿತ್ತಿಯ ಉಪಚಾರದಿಂದ ಲಕ್ಷ್ಮಿ ಸುಧಾರಿಸುವಂತಿರಲಿಲ್ಲ. "ನಾನು ಪಾಪಿ! ನ-ನ್ನ ಬ-ಸಿ-ರು ಹೆ-ಂಗೂ-ಸು-ಗ-ಳ-ದು. ಗಂಡು ಹೆ-ರು-ವ ಭಾ-ಗ್ಯ ನ-ನ್ನ-ಲ್ಲಿ-ಲ್ಲ-ವ-ಂ-ತೆ... ಎಂದು ಏನೇನೆಲ್ಲಾ ಅಸ್ಪಷ್ಟವಾಗಿ ಲಕ್ಷ್ಮಿ ಮೂರ್ಛೆಯಲ್ಲೇ ಬಡಬಡಿಸಲಾರಂಭಿಸಿದಳು. ಸೂಲಗಿತ್ತಿಯು ಬಾಣಂತಿ ಲಕ್ಷ್ಮಿಯ ಸ್ಥಿತಿ ನೋಡಿ ಕಂಗೆಟ್ಟಳು. ಅವಳ ಸರ್ವಾಂಗವು ಕಂಪಿಸುತಿತ್ತು. ಲಕ್ಷ್ಮಿಗೆ ಈ ತೆರ ದೀರ್ಘ ಮೂರ್ಛೆ ಬರಲು ಏನು ಕಾರಣವಿದ್ದೀತೆಂಬದೂ ಹೊಳೆಯಲಿಲ್ಲಾಕೆಗೆ.

'ಡಾಕ್ಟರರನ್ನಾದರೂ ಕರೆತರುವದು ಒಳ್ಳೇದಿತ್ತು! ಬಾಣಂತಿ ಇನ್ನೂ ಎಚ್ಚೆತ್ತಿಲ್ಲ! ನಾನು ಮಾಡುವಷ್ಟು ಉಪಚಾರ ಮಾಡಿ ನೋಡಿದೆ! ಅದರಿಂದೇನೂ ಉಪಯೋಗವಾಗಲಿಲ್ಲ! ನೈ ವಿಪರೀತ ಕಾದಿದೆ! ಒಂದೇ ಸವನೆ ಬಡಬಡಿಸುತ್ತಾಳೆ! ಶ್ರಾವವಂತೂ ಮಿತಿಮೀರಿದೆ.' ಎಂದು ಸೂಲಗಿತ್ತಿ ದೇವೇಂದ್ರನೊಡನೆ ಬಹು ಕನಿಕರದಿಂದ ಉಸುರಿದಳು.

ತನ್ನ ಮನೋಸಾಮ್ರಾಜ್ಯ ಕ್ಷಣಾರ್ಧದಲ್ಲೇ ನಾಶವಾಯಿತಲ್ಲಾ? ಎಂಬ ಚಿಂತೆಯಲ್ಲೇ ಮಗ್ನನಾಗಿ ಮುಖ ತಗ್ಗಿಸಿಕೊಂಡು ಕುಳಿತ ದೇವೇಂದ್ರ ಸೂಲಗಿತ್ತಿಯಂದದನ್ನು ಕೇಳಿಲ್ಲವೋ, ಕೇಳಿದ್ದರೂ ಕೇಳದವನಂತೆ ನಟಿಸಿದನೋ ತಿಳಿಯದು. ಅಂತೂ ಆತ ಮುಚ್ಚಿದ ತುಟಿಗಳನ್ನು ಬಿಚ್ಚಲಿಲ್ಲ. ಕೂತಲ್ಲಿಂದ ಕದಲಲಿಲ್ಲ. ಅದರಿಂದ ಸೂಲಗಿತ್ತಿ ಕಳವಳಗೊಂಡು ಮತ್ತೊಮ್ಮೆ ಮುನ್ನಿನಂತೆ ಉಸುರಿದಳು.

ಸೂಲಗಿತ್ತಿಯ ಉದ್ದಾಮ(?)ತನದ ಬಗ್ಗೆ ದೇವೇಂದ್ರ ಅತಿಶಯ ರೇಗಿದ. 'ನೋಡೋಣ ನಾಳೆ! ಬಿದ್ದಿರಲಿ ಹಾಗೇ!! ನಿನ್ನ ಕೆಲಸ ನೀನು ನೋಡು!!! ನಿನಗೇಕೆ ಈ ಅಧಿಕ ಪ್ರಸಂಗತನ?' ಎಂದು ಹಾರಿಕೆಯ ಉತ್ತರವಿತ್ತು ಸೂಲಗಿತ್ತಿಯನ್ನ ಗದ್ದರಿಸಿದ. ಪಾಪ! ನಿರುಪಾಯಳಾದ ಬಡ ಸೂಲಗಿತ್ತಿ ಏನು ತಾನೇ ಮಾಡ್ಯಾಳು? ನಿರುತ್ತರಳಾಗಿ ಇಳಿಮೋರೆಯಿಂದ ಒಳನಡೆದಳು.

ಡಾಕ್ಟರ್ ಮಸೂರಿಯವರು ಹೆರಿಗೆಯ ಔಷಧಿ ಕೊಟ್ಟು ದೇವೇಂದ್ರನನ್ನು ಕಳುಸಿದ್ದರಷ್ಟೇ! ಅಷ್ಟರಲ್ಲಿ ಅವರಿಗೊಂದು ಅಗತ್ಯದ ಭೆಟ್ಟಿಗಾಗಿ ಕರೆ ಬಂತು. ಭೆಟ್ಟಿಗೆ ಹೋದವರು ಸುಮಾರು ಎರಡು ತಾಸಿನ ಮೇಲೆ ಅಲ್ಲಿಂದ ಹಿಂದಿರುಗಿದರು. ಬರಬರುತ್ತಾ ದೇವೇಂದ್ರ ಒಯ್ದ ಔಷಧದ ನೆನಪಾಯಿತವರಿಗೆ. ದೇವೇಂದ್ರನ ಹೆಂಡತಿ ಹಡೆದಿರುವಳೋ ಇಲ್ಲವೋ ನೋಡೇ ಹೋಗೋಣವೆಂದಾಲೋಚಿಸಿ ಡಾಕ್ಟರರು ದೇವೇಂದ್ರನ ಮನೆಯ ಎದುರು ಬರುತ್ತಲೇ, ದೇವೇಂದ್ರ ಭಿನ್ನ ಮನಸ್ಕನಾಗಿ ಜಗುಲಿಯ ಮೂಲೆಯೊಂದರಲ್ಲಿ ತಲೆ ತಗ್ಗಿಸಿ ಕುಳಿತದ್ದನ್ನು ಕಂಡರು. ಅದರಿಂದ, ಡಾಕ್ಟರರು, ಏನೋ ಪ್ರಮಾದವಾಗಿರಬೇಕೆಂದು ಭಾವಿಸಿಕೊಂಡರು. 'ದೇವೇಂದ್ರಾ, ಹೆರಿಗೆಯಾಗಿಲ್ಲೇನೋ ಇನ್ನೂ?' ಎಂದೆನ್ನುತ್ತ ಡಾಕ್ಟರರು ಪಡಸಾಲೆಯನ್ನೇರಿದರು.

"COLD-KILL" (REGD)
The latest unrivalled and unfailing alopathic remedy to cure colds. Daily use prevents colds and other Respiratory diseases.
Annas Twelve Only.
THREE POSTAGE FREE.
SAMPLE AS. FOUR
"COLD-KILL" HOUSE,
UDIPI, (India)

ತನ್ನ ವಿಚಾರಗಳಲ್ಲೇ ತಲ್ಲೀನನಾಗಿದ್ದ ದೇವೇಂದ್ರ, ಡಾಕ್ಟರರು ಅಷ್ಟು ಸನಿಹ ಬಂದು ಮೇಲಿನಂತೆ ಪ್ರಶ್ನಿಸಿದರೂ ಅರಿವಿಲ್ಲದವನಂತಿದ್ದ. ಫಕ್ಕನೆ ಎಚ್ಚತ್ತವನಂತೆ ಘಾಬರಿಯಿಂದ 'ಆಂ... ತಾವು... ಏನು?...' ಎನ್ನುತ್ತಾ ತಬ್ಬಿಬ್ಬಾದವನಂತೆ ಉಸುರಿದ.

'ಔಷಧ ಕೊಟ್ಟೆಯಾ? ಹೆರಿಗೆ ಆಯಿತೋ?' ಎಂದು ಪುನಃ ಪ್ರಶ್ನಿಸಿದರು ಡಾಕ್ಟರರು.

'ಆಂ... ಹೌದು. ನಿಮ್ಮ ಔಷಧ ಕೊಟ್ಟ ಮುಕ್ಕಾಲು ತಾಸಿನಲ್ಲೇ ಹೆರಿಗೆಯಾಯಿತು. ಆದರೇನು? ನನ್ನ ಆಶೆ ಎಲ್ಲಾ ಮಣ್ಣುಗೂಡಿತು. ಹೂಂ....,' ಎಂದು ಕೆಳಮೋರೆ ಮಾಡಿ ಅಳತೊಡಗಿದ ದೇವೇಂದ್ರ.

ದೇವೇಂದ್ರನ ಪ್ರಲಾಪದಿಂದ ಬಹು ದಿಗಿಲು ಪಟ್ಟರು- ಡಾಕ್ಟರರು. ಅವರಿಗೆ ದೇವೇಂದ್ರನ ಅಳುವಿನ ನಿಜ ಕಾರಣ ತಿಳಿಯಲಿಲ್ಲ. 'ಅಂದರೆ? ಬಾಣಂತಿ ಕ್ಷೇಮದಿಂದ ಇಹಳಷ್ಟೇ?' ಎಂದು ಪ್ರಶ್ನಿಸಿದರು.

'ಅಲ್ಲಾ, ಗಂಡಾಗುವದೆಂದು ಬಹು ಆಶೆ ಪಟ್ಟಿದ್ದೆ. ನನ್ನ ಆಶೆ ಮಣ್ಣುಗೂಡಿತು. ಹೆಣ್ಣಾಯಿತು....' ಇನ್ನೂ ಏನೇನನ್ನೋ ಹೇಳುವದರಲ್ಲಿದ್ದ ದೇವೇಂದ್ರ.

ಅಷ್ಟರಲ್ಲಿ ಸೂಲಗಿತ್ತಿ ಹೊರಬಂದಳು. 'ಇವರಿಗೆ ಹಿಡಿದಿದೆ ಹುಚ್ಚು. ಗಂಡಂತೆ ಗಂಡು. ಗಂಡೋ? ಹೆಣ್ಣೋ? ದೇವರು ಕೊಟ್ಟದ್ದರಲ್ಲೇ ಸಮಾಧಾನ ಪಡೆಯಬೇಕೆಂಬುದಿಲ್ಲವರಿಗೆ. ಬಾಣಂತಿ ಮೂರ್ಛೆ ಹೋಗಿ ಒಂದು ತಾಸಾಯಿತು! ಜ್ವರವಂತೂ ಅತಿಶಯ ಕಾಯುತ್ತಲಿದೆ! ಬಡಬಡಿಸುತ್ತಾಳೆ! ಸ್ರಾವವೂ ಮಿತಿಮೀರಿದೆ! ಅದರಿಂದ, ಡಾಕ್ಟರರನ್ನು ಕರೆತನ್ನಿರೆಂದು ಬೇಡಿದೆ; ಕಾಡಿದೆ; ಕೇಳೊಲ್ಲರಿವರು. ನನ್ನನ್ನೇ ಗದರಿಸಿದರು; ಹಾಗೇ ಬಿದ್ದಿರಲೆಂದರು; ಬಾಣಂತಿ ಸುಖವಾಗಿದ್ದರೆ ಮುಂದಾದರೂ ಗಂಡು ಜನಿಸುವದು, ಎಂದು ಯೋಚಿಸಲಿಲ್ಲಿವರು. ಇವರಂತಹ ಹುಚ್ಚು ಸ್ವಭಾವದ ಜನ, ನಾನೆಲ್ಲೂ ಕಾಣೆ! ಎಂದು ದೇವೇಂದ್ರನ ಪರಿವೆ ಹಿಡಿಯದೆ ಇದ್ದುದನ್ನು ಇದ್ದ ಹಾಗೆ ಡಾಕ್ಟರರೊಡನೆ ಉಸುರಿದಳು ಸೂಲಗಿತ್ತಿ.

ಅಕಾರಣವಾಗಿ ಯಾರ ಮೇಲೂ ರೇಗಿ ಅರಿಯದ ದಯಾಳು ಸ್ವಭಾವದ ಡಾಕ್ಟರರು, ಸೂಲಗಿತ್ತಿಯಾಡಿದ ಮಾತು ಕೇಳಿ ದೇವೇಂದ್ರನ ಮೇಲಿನ ಕೋಪದಿಂದ ಕಿಡಿಕಿಡಿಯಾದರು. ಅವರ ಕಂಗಳು ಕೆಂಪೇರಿದವು. ಮೈಯೆಲ್ಲ ನಡುಗತೊಡಗಿತು. 'ದೇವೇಂದ್ರಾ? ನೀನೇನು ಮನುಷ್ಯನೋ? ಮರವೊ?' ಎಂದಿಷ್ಟೇ ಹೇಳಿ ಸರಕ್ಕನೇ ಸೂತಿಕಾಗೃಹಪ್ರವೇಶಿಸಿದರು, ಡಾಕ್ಟರರು ನೇರವಾಗಿ.

ನಿಶ್ಚೇಷ್ಟಳಾಗಿ ಬಿದ್ದ ಬಾಣಂತಿ-ಲಕ್ಷ್ಮಿಯನ್ನು ಪರಿಕಿಸಿದರು. ನಾಡಿ ಹಿಡಿದು ನೋಡಿದರು. ಬಹುಹೊತ್ತು ನಿರೀಕ್ಷಿಸಿದರು. ಎಲ್ಲೆಲ್ಲಿಯೂ ನಿರಾಶೆಯೇ ಕಂಡಿರಬೇಕವರಿಗೆ. ಖಿನ್ನವದನರಾಗಿ ಡಾಕ್ಟರರು ಹೊರಬಂದರು.

"ನಿನ್ನ ಹುಚ್ಚು 'ಗಂಡಿನಾಶೆಯೇ' ಅವಳ ಈ ಅಂತಿಮ ಅವಸ್ಥೆಗೆ ಕಾರಣವಾಗಿರಬೇಕು. ಇದೀಗ ಅವಳಿಗೆ ನೂರ ಆರು ಡಿಗ್ರಿ ಜ್ವರವಿದೆ; ಬಡಬಡಿಸುತ್ತಾಳೆ; ನಿಶ್ಚೇಷ್ಟಳಾಗಿರುತ್ತಾಳೆ; ಅವಳಿಗೆ ಪ್ರಸೂತಿ ವೇದನೆಯೊಟ್ಟಿಗೆ ಅದಾವುದೋ ಮನೋವೇದನೆಯೂ ಬೆರೆತಿರಬೇಕು. ಮಿದಿಳು ಜ್ವರದಂತೆ ಭಾಸವಾಗುತ್ತದೆ. ನಾಡಿಗಳ ಬಡಿತ ಮಂದವಾಗುತ್ತಾ ನಡೆದಿದೆ. ನನಗಂತೂ ಅವಳ ಸ್ಥಿತಿ ನಿರಾಶಾಮಯವಾಗಿ ತೋರುತ್ತದೆ. ನೀನೇನಾದರೂ ನಿನ್ನ ಹುಚ್ಚು ಆಶೆ ವಿಫಲವಾದದ್ದರಿಂದ ಅವಳಿಗೆ ತಾಗುವಂತಹ ಚುಚ್ಚು ಮಾತುಗಳನ್ನಾಡಿದ್ದಿಯಾ? ಅದರಿಂದವಳು ಮನನೊಂದಿರಬೇಕೆಂದು ತೋರುತ್ತದೆ. ಅಲ್ಲವೇನೇ ದೇವೇಂದ್ರಾ?" ಎಂದು ಡಾಕ್ಟರರು ಅಧಿಕಾರ ವಾಣಿಯಿಂದ ಪ್ರಶ್ನಿಸಿದರು. ದೇವೇಂದ್ರ ಯಾವುದಕ್ಕೂ ಉತ್ತರ ಕೊಡಲಿಲ್ಲ.

ಡಾಕ್ಟರರು ಬಹು ಹೊತ್ತು ಯೋಚಿಸಿದರು. ಕಡೆಯಲ್ಲೊಮ್ಮೆ ತಮ್ಮ ಕೈ ಪೆಟ್ಟಿಗೆ ತೆರೆದರು. ಅದರೊಳಗಿನ ಅವೆಷ್ಟೋ ಔಷಧದ ಸೀಸೆಗಳನ್ನೆತ್ತಿ ನೋಡಿದರು. ಅಂತೂ ಒಂದು ಡೋಜ

ಜಾಹೀರಾತಿನಲ್ಲಿ ಹೇಳಿರುವ ಗುಣಗಳು ಇಲ್ಲದೆ ಹೋದಲ್ಲಿ ಹಣ ವಾಪಾಸು.

## ಮಂತ್ರಶಕ್ತಿಯ ಉಂಗುರ

ಈ ಆಶ್ಚರ್ಯಕರವಾದ ಮಂತ್ರಶಕ್ತಿಯ ಉಂಗುರವು ತುಂಬಾ ಪ್ರಯಾಸದಿಂದ ವಿದ್ಯುತ್ ಮತ್ತು ಆಕರ್ಷಕ ಶಕ್ತಿಯುಳ್ಳ ಪದಾರ್ಥಗಳಿಂದಲೇ ತಯಾರಿಸಿದೆ. ಈ ವಿಚಿತ್ರ ಉಂಗುರದಲ್ಲಿ ಆಶ್ಚರ್ಯಕರವಾದ ಮಂತ್ರ ಶಕ್ತಿಯಿದೆ. ಭೂತ, ಭವಿಷ್ಯತ್, ಹಾಗೂ ವರ್ತಮಾನದ ವಿಷಯಗಳನ್ನೆಲ್ಲ ಸುಲಭವಾಗಿ ತಿಳಿಯಬಹುದು. ಸತ್ತವರೊಡನೆ ಇಲ್ಲವೆ ಇದ್ದರೊಡನೆ ಎಣಿಸಿದಾಗ ಭೇಟಿ. ಸಾವಿರಾರು ಮೈಲುಗಳ ಅಂತರದಲ್ಲಿರುವ ವಿಷಯಗಳನ್ನು ತಿಳಿದುಕೊಳ್ಳುವದು, ನಿಧಿಯನ್ನು ತಿಳಿಯುವದು, ಸೋಡ್ತಿಯಲ್ಲಿ ಗೆಲುವಿನ ಟಿಕೇಟು ನಂಬರು ತಿಳಿಯುವದು ರೋಗಿಯ ರೋಗದ ಗುಟ್ಟು, ಮುದ್ರೆಯೊತ್ತಿದ ಲಕೋಟೆಯಲ್ಲಿರುವ ಕಾಗದದ ವಿಷಯ ತಿಳಕೊಳ್ಳುವದು, ಗುಪ್ತ ನಿಧಿ, ಗುಪ್ತ ಪ್ರಶ್ನೆಗಳ ಉತ್ತರ, ಇಂತಹ ಸಾವಿರಾರು ಆಶ್ಚರ್ಯಕರವಾದ ವಿದ್ಯಮಾನಗಳನ್ನು ಈ ಉಂಗುರದಿಂದ ತಿಳಿಯಬಹುದು. ಸಲಹೆಗಳನ್ನು ಉಂಗುರದೊಂದಿಗೆ ಕಳುಹಿಸುವೆವು. ಪುಕ್ಕಟೆ ದೊರೆಯುವ ಪುಸ್ತಕಕ್ಕಾಗಿ ಬರೆಯಿರಿ.

**A. V. Asram, Chicacole.**

ಔಷಧ ತಯಾರಿಸಿಕೊಂಡು ಪುನಃ ಸೂತಿಕಾಗೃಹ ಹೊಕ್ಕರು. ಬಾಣಂತಿ-ಲಕ್ಷ್ಮಿಗೆ ಔಷಧ ಕುಡಿಸಲೆತ್ನಿಸಿದರು. ಸಹಾಯಕ್ಕೆಂದು ಸೂಲಗಿತ್ತಿಯನ್ನೂ ಕರೆದರು. ಲಕ್ಷ್ಮಿಯ ಹಲ್ಲು ಸಾಲುಗಳು ಒಂದಕ್ಕೊಂದು ಕೂಡಿ ಹೋಗಿದ್ದವು. ಅದೆಷ್ಟು ಪ್ರಯತ್ನ ಪಟ್ಟರೂ ಔಷಧ ಕುಡಿಸಲು ಸಾಧ್ಯವಾಗಲಿಲ್ಲವರಿಂದ. ಆದರಿಂದ ನಿರುಪಾಯರಾದ ಡಾಕ್ಟರರು ಔಷಧವನ್ನೊಗೆದರು. ನಿರಾಶೆಯ ಬಿಸಿಯುಸಿರುಗರೆದರು.

ಡಾಕ್ಟರರ ಮನಸ್ಸು ಲಕ್ಷ್ಮಿಯನ್ನು ಹೇಗಾದರೂ ಬದುಕಿಸಲೇ ಬೇಕೆಂಬ ನಿರ್ಧಾರದಿಂದ ಕೂಡಿತ್ತು. ಅದರಿಂದವರು ಮತ್ತೂ ಯೋಚಿಸಿದರು. ಸ್ಟೋವ್ ಉರಿಸಿದರು. ಚುಚ್ಚೋಣದ ಉಪಕರಣಗಳನ್ನು ಕಾಯಿಸಿದರು. ಯಾವುದೋ ಔಷಧದ ಟ್ಯೂಬ ಒಂದರೊಳಗೆ ಪೂರ್ಣ ಔಷಧಿಯನ್ನು ಚುಚ್ಚುನಲಿಕೆ (ಸಿರಂ)ನಲ್ಲಿ ಸೇರಿಸಿಕೊಂಡರು. ಆ ಚುಚ್ಚುನಲಿಕೆ ಕೈಯಲ್ಲಿ ತಗೊಂಡು ಪುನಃ ಒಳಹೊಕ್ಕರು. ಲಗುಬಗೆಯಿಂದ ಚುಚ್ಚುವದಕ್ಕೆಂದು ಬಾಣಂತಿಯ ಕೈ ಎತ್ತಿದರು. ಲಕ್ಷ್ಮಿಯ ಮೈ ಬಿಸಿಯಾರುತ್ತ ಬಂದಿತ್ತು. ನಾಡಿ ಹಿಡಿದರು; ಬಡಿತ ತಡೆದಿತ್ತು. ಡಾಕ್ಟರರು ಬೆಚ್ಚಿ ಬಿದ್ದಂತಾದರು. ಅದರ ಕೈಯೊಳಗಿನ ಚುಚ್ಚುನಲಿಕೆ ಕೈತಪ್ಪಿ ಕೆಳಬಿತ್ತು. ಬಿದ್ದುದೇ ಒಡೆದು ಚೂರು ಚೂರಾಯ್ತು.

ವಿಷಣ್ಣವದನರಾಗಿ ಡಾಕ್ಟರರು ಹಿಂದಿರುಗಿದರು. ಪಾಷಾಣದೋಪಾದಿಯಲ್ಲಿ ಕುಳಿತ ದೇವೇಂದ್ರನನ್ನು ದುರದುರನೆ ಕೆಂಗಣ್ಣಿನಿಂದ ನೋಡಿದರು. ಕಿಡಿಕಿಡಿಯಾಗಿ ಹಾರಾಡಿದರು. ಏನೂ ನುಡಿಯದಾದರು. "ಥೂ, ನರಾಧಮಾ, ಗಂಡಿನಾಶೆಯ ಹುಚ್ಚಿನಿಂದಾಗಿ, ಹೆಂಡತಿಯನ್ನು ಯಮಪುರಿಯ ದಂಡೆ ಸೇರಿಸಿದ ನೀನು, ಖಂಡಿತವಾಗಿಯೂ ದ್ವಿ-ಪಾದ ಪಶು!" ಎಂದುದ್ಗರಿಸಿ ನಡೆದುಬಿಟ್ಟರು.

---




ಸಿಹಿಮೂತ್ರವನ್ನು ಹೇಗೆ ನಿವಾರಿಸುವದೆಂಬ ಗುಟ್ಟೀಗ ರಟ್ಟಾಗಿದೆ. ಉತ್ತರ ಅಮೇರಿಕಾದ ಸಾವಿರಾರು ಮೂಲ ನಿವಾಸಿಗಳು ಆಧುನಿಕ ನಾಗರಿಕತೆಯ ಈ ವ್ಯಾಧಿಯ ಪೀಡೆಯನ್ನೇ ಅರಿಯರು. ಏಕೆ? ಅವರು ಉಷ್ಣವಲಯದಲ್ಲಿ ಬೆಳೆಯುವ ಅತ್ಯಪೂರ್ವವಾದೊಂದು ಗಿಡಮೂಲಿಕೆಯನ್ನು ಭಟ್ಟಿ ಇಳಿಸಿ ಕುಡಿಯುತ್ತಿರುವುದರಿಂದಲೇ ಈ ರೋಗದಿಂದ ಮುಕ್ತರಾಗಿರುವರೆಂದು ವಿಜ್ಞಾನವು ಸಿದ್ಧಪಡಿಸಿದೆ. ಈ ವನೌಷಧಿಯು ಸಿಹಿಮೂತ್ರವನ್ನು ಗುಣಪಡಿಸುವುದಲ್ಲದೆ ಅದರ ವಿಷವನ್ನು ನಿಶ್ಶೇಷವಾಗಿ, ಪುನಃ ಬಾರದಂತೆ ದೇಹದಿಂದೋಡಿಸಿ ಬಿಡುತ್ತದೆ.

ಈ ಅಮೂಲ್ಯ ಔಷಧವು ಶುದ್ಧ ಹಾಗು ಪುಡಿಯ ರೂಪದಲ್ಲಿ ಕೊಪಾಲ್ಟ್ರಾ ಎಂದು ಕರೆಯಲ್ಪಡುತ್ತದೆ. ಯುರೋಪು ಖಂಡದಲ್ಲೆಲ್ಲ ಜಯಶೀಲವಾಗಿ ಪ್ರಯೋಗಿಸಲ್ಪಟ್ಟು ಈಗಷ್ಟೇ ಹಿಂದುಸ್ಥಾನದ ವ್ಯಾಧಿಪೀಡಿತರಿಗೆ ದೊರಕಿಸಲ್ಪಟ್ಟಿದೆ.

ಸಿಹಿಮೂತ್ರ ಪೀಡಿತರು ಈಗ ದೀರ್ಘಾಯುರಾರೋಗ್ಯವನ್ನು ಅನುಭವಿಸಬಲ್ಲರು. ಇನ್‌ಸುಲಿನನ್ನು ಪಯೋಗಿಸುವವರಿಗೂ ಕೊಪಾಲ್ಟ್ರಾವು ವರಪ್ರದಾನ ಸದೃಶವಾದುದು. ಇದಕ್ಕೆ ಖರ್ಚು ಮತ್ತೂ ಕಡಿಮೆ, ಸುಲಭ ಸೇವ್ಯವಾದುದು, ಮತ್ತು ಸರ್ವತ್ರ ಗುಣಕಾರಿಯು. ನಿಮ್ಮ ವ್ಯಾಧಿಯು ಮಿತಿಮೀರುವ ವರೆಗೆ ಕಾಯಬೇಡಿರಿ- ಈಗಲೇ ಕೊಪಾಲ್ಟ್ರಾವನ್ನು ಪಯೋಗಿಸತೊಡಗಿರಿ.

ಬಹುಮೂತ್ರಕ್ಕೆ ಉಪಯೋಗಿಯಾದ ಔಷಧಿಯೆಂದು ಕೊಪಾಲ್ಟ್ರಾವು ಪ್ಯಾರೀಸಿನ ಔಷಧನಿಯಂತ್ರಕ ನೇಶನಲ್ ಲೆಬರೇಟರಿಯಲ್ಲಿ ನಂ. 1662-1 ರನ್ವಯ ರಿಜಿಸ್ಟರು ಮಾಡಲ್ಪಟ್ಟಿದೆ. ಪೂರಾ ಒಂದು ತಿಂಗಳ ಔಷಧಕ್ಕೆ ರೂ. 10. ಎಲ್ಲ ಔಷಧ ವ್ಯಾಪಾರಿಗಳಲ್ಲೂ ದೊರೆಯುತ್ತದೆ. ಈ ವಿಷಯ ಸರ್ವ ಅನುಭವಗಳನ್ನೊಳಗೊಂಡ ನಲ್ವತ್ತು ಪುಟಗಳ "ಸಿಹಿಮೂತ್ರ, ಅದರ ಕಾರಣಗಳು ಮತ್ತು ನಿವಾರಣೆ" ಎಂಬ ಹೊತ್ತಗೆಯು ಧರ್ಮಾರ್ಥವಾಗಿ ದೊರೆಯುತ್ತದೆ.




# COPALTRA & CO., LTD.,

**81, New Bhatwadi Street, BOMBAY 4.**

STOCKISTS

| | | |
|---|---|---|
| **Hubli Pharmacy** | **Gadag Pharmacy** | **T. N. Natraj & Co,** |
| **HUBLI.** | **GADAG.** | **MYSORE.** |

## ಕಾಲಿನಿಂದ ಬರೆಯುವ ವಿದ್ಯಾರ್ಥಿ

ಪ್ರಕೃತಿಯು ಅವನನ್ನು ಅಸಹಾಯನಾಗಿ ಮಾಡಿದ್ದರೂ ಅವನು ಮಾತ್ರ ತನ್ನ ಪೂರ್ಣ ಶಕ್ತಿಯನ್ನುಪಯೋಗಿಸಿ ಪ್ರಕೃತಿಯೊಡನೆ ಹೋರಾಡುತ್ತಿದ್ದಾನೆ.

ಗಡಿನಾಡಿನಲ್ಲಿರುವ ಹುಡುಗನೊಬ್ಬನ ವಿಚಿತ್ರ ಕಥೆಯಿದು. ಮುಂದಿನ ವರ್ಷ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತುಕೊಳ್ಳಲು ಅವನು ಸಕಲ ಸಿದ್ಧತೆಗಳನ್ನು ಮಾಡುತ್ತಿದ್ದಾನೆ.

ಬಾಪ್ಟ್ಸಿ ಗವರ್ನಮೆಂಟ್ ಹೈಸ್ಕೂಲಿನಲ್ಲಿ ಕಲಿಯುತ್ತಿರುವ ಆ ವಿದ್ಯಾರ್ಥಿ ಇತರ ಹುಡುಗರಿಗಿಂತ ಬುದ್ಧಿವಂತನಾಗಿರುವುದಲ್ಲದೆ ಅವನಷ್ಟು ಸುಂದರವಾದ ಅಕ್ಷರಗಳನ್ನು ಸಮಸ್ತ ಶಾಲೆಯಲ್ಲಿ ಯಾರೂ ಬರೆಯುವುದಿಲ್ಲವಂತೆ.

ಆ ಶಾಲೆಯ ಕಲಾಧ್ಯಾಪಕರ ಹೇಳಿಕೆಯಂತೆ ಬಲಗಾಲಿನಲ್ಲಿ ಅವನು ಬಿಡಿಸುವ ಚಿತ್ರಗಳು ಬಹಳ ಸುಂದರವಾಗಿವೆಯಂತೆ.

ಕಾಲಿನಿಂದಲೇ ಅವನು ಆಹಾರ ತಿನ್ನುತ್ತಾನೆ. ಸೊಂಟಕ್ಕೆ ಬಟ್ಟೆ ಬಿಗಿಯುತ್ತಾನೆ.

ಕೈಯಿಲ್ಲದಿದ್ದರೇನು? ಅಭ್ಯಾಸ ಬಲದಿಂದ ಯಾವ ಅಂಗವನ್ನಾದರೂ ಕೈಯಾಗಿ ಉಪಯೋಗಿಸಲು ಸಾಧ್ಯವಿಲ್ಲವೆ?

೦ ೦ ೦

# ಈ ವಿಚಿತ್ರ ವಿಶ್ವದಲ್ಲಿ

## ನಿಗೂಢ ಆಲದ ಮರ

ದರ್ಭಾಂಗಾ ಜಿಲ್ಲೆಯ ಸಮಸ್ತಿಪುರದ ೧೧ ಮೈಲು ದೂರವಿರುವ ಊರೊಂದರಲ್ಲಿ ಇತ್ತೀಚೆಗೆ ಒಂದು ವಿಚಿತ್ರ ಘಟನೆಯು ಕಂಡು ಬಂತು.

ಜೂನ್ ೧೬ರಂದು ಸುಮಾರು ೨೦೦ ವರ್ಷದಿಂದ ಬದುಕಿಕೊಂಡಿರುವ ಆಲದ ಮರವೊಂದರ ಬುಡದಲ್ಲಿ ದೊಡ್ಡ ಬೆಂಕಿ ಕಾಣಿಸಿಕೊಂಡಿತು. ಈ ಆಲದ ಮರದ ಬೀಳಲುಗಳು ಕಾಂಡದಷ್ಟೇ ದೊಡ್ಡದಾಗಿರುವುದರಿಂದ ಆ ಸ್ಥಳವು ದೊಡ್ಡ ವೃಕ್ಷ ಸಮೂಹದಂತೆ ಕಾಣಿಸುತ್ತದೆ.

ಬೆಂಕಿಯ ಜ್ವಾಲೆಯು ಸುಮಾರು ೩೦ ಅಡಿ ಎತ್ತರದ ವರೆಗೆ ಕಾಣಿಸಿಕೊಂಡಿತು. ಊರವರು ಮರಳು ನೀರುಗಳಿಂದ ಬೆಂಕಿಯನ್ನಾರಿಸಲು ಎಷ್ಟು ಪ್ರಯತ್ನಿಸಿದರೂ ಬೆಂಕಿ ಒಂದೇ ಸವನೆ ಭುಗಿ ಭುಗಿಲೆಂದು ಉರಿಯತೊಡಗಿತು. ನೂರಾರು ಕೊಂಬೆಗಳು ಬಿದ್ದುವು. ಇದಕ್ಕೆ ಸಿಡಿಲು ಕಾರಣವೆಂದು ಹೇಳೋಣವೆ? ಇಲ್ಲ- ಅಂದು ಮಳೆ ಮೋಡಗಳೇ ಇರಲಿಲ್ಲ.

ಇನ್ನೂರು ವರ್ಷಗಳ ಹಿಂದೆ ಅದೇ ಮರದ ಬಳಿಯಲ್ಲಿ ಒಬ್ಬ ರಾಣಿಯು 'ಸತಿ'ಗಾಹುತಿಯಾಗಿದ್ದಳಂತೆ. ಈ ಕತೆಯಿಂದಾಗಿ ಆಲದ ಮರದ ಅಗ್ನಿಯ ಕಥೆಯ ನಿಗೂಢತೆಯು ಮತ್ತಷ್ಟು ಹೆಚ್ಚಿದೆ.

೦ ೦ ೦



ಜನರಲ್ ಫ್ರೇಂಕೊನ ಸ್ಪೈನಿನಲ್ಲಿ ಜರ್ಮನಿಯವರು ಸುಳ್ಳು ನೋಟುಗಳನ್ನು ಪ್ರಚಾರಗೊಳಿಸಿ ದೊಡ್ಡ ಗೊಂದಲವುಂಟುಮಾಡಿರುವರು.

## ಕಪಾಲಗಳ ದೋಣಿ

ಬಂಗಾಲದ ಮಿಡ್ನಾಪುರ ಗ್ರಾಮದಲ್ಲಿ ವೃತ್ತಾಚಾರಿ ಅಧ್ಯಾಪಕರೊಬ್ಬರು ಹೀಗೆ ಬರೆದಿದ್ದಾರೆ: ಸ್ಥಳೀಯ ಹೈಸ್ಕೂಲಿನ ಸಮೀಪದಲ್ಲಿ ಚಾರಿತ್ರಿಕ ಶೋಧನೆಗಾಗಿ ನೆಲವನ್ನಗೆದಾಗ ಒಂದು ವಿಲಕ್ಷಣ ದೋಣಿಯಲ್ಲಿ ೨೫ ಕಪಾಲಗಳು ಕಾಣಿಸಿಕೊಂಡವು. ಈ ವಠಾರದಲ್ಲಿ ಕಾಸಿಜಾರ್ ಪರಗಣದ ರಾಜರು ವಾಸಿಸಿ ಕೊಂಡಿದ್ದರಂತೆ. ಶೋಧನೆಗಳು ನಡೆಯುತ್ತಿವೆ.

## ಹಾಲು!

ರಾಯರಿಗೆ ಹಾಲು ನೀರಾದುದನ್ನು ಕಂಡು ಸಿಟ್ಟು ಬಂತು. ರಾಯರಿಗೆ ಸಮಾಧಾನ ವೀಯುತ್ತಾ ಹಾಲಿನವ ಹೇಳಿದ: ದೇವ್ರೂ, ಹುಲ್ಲಿಲ್ಲದೆ ದನಗಳೆಲ್ಲಾ ಕಣ್ಣೀರು ಸುರಿಸುತ್ತಿವೆ. ಏನು ಮಾಡ್ಲಿ" ರಾಯರಂದರು:'ಅದು ಸರಿ ಆದ್ರೆ ನಿನ್ನ ದನದ ಕಣ್ಣೀರು ಹಾಲಿಗೆ ಬೀಳದಂತೆ ನೋಡಯ್ಯಾ! ಹಾಲು ಕಣ್ಣೀರಿನಷ್ಟು ತೆಳ್ಳಗಾಗಿದೆ.

# ರಾಷ್ಟ್ರದ ಯಶಸ್ಸಿಗಾಗಿ ತನುವಿನ ದಾನ

## ಬ್ರಿಟಿಷ್ ತರುಣಿಯರ ಸ್ವಾರ್ಥತ್ಯಾಗ



ಯುದ್ಧದ ಗೊಂದಲದೊಡನೆ ಪ್ರಣಯದ ಗದ್ದಲವೂ ಹೆಚ್ಚಿರುವುದೇಕೆ? ಇದೀಗ ಇಂಗ್ಲೆಂಡಿನ ಮಧ್ಯ ವಯಸ್ಸಿನ ಮೊದ್ದು ಮನುಷ್ಯರು ಕೇಳುತ್ತಿರುವ ಪ್ರಶ್ನೆ.

ಅವರ ಪ್ರಶ್ನೆಯೇನೂ ನಿರಾಧಾರವಾದುದಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಎಂದಿಗಿಂತಲೂ ನಿರ್ಭೀತವಾಗಿ ತರುಣ ತರುಣಿಯರು ಪ್ರಣಯ ನಾಟಕಗಳಲ್ಲಿ ಒಂದೇ ಸವನೆ ಅಭಿನಯಿಸುತ್ತಿದ್ದಾರೆ. ಏಕೆ? ತರುಣ ತರುಣಿಯರಿಗಲ್ಲದೆ ಮಧ್ಯ ವಯಸ್ಸಿನ ವ್ಯಕ್ತಿಗಳಿಗೆ ಈ ಪ್ರಶ್ನೆಗೆ ಉತ್ತರವೇ ದೊರಕುತ್ತಿಲ್ಲ.

ಇಂಗ್ಲೆಂಡಿನ ತರುಣರು ತಮ್ಮ ಪಿತೃಭೂಮಿಯ ಸ್ವಾತಂತ್ರ್ಯ ರಕ್ಷಣೆಗಾಗಿ ಒಂದೇ ಸವನೆ ಸೈನ್ಯಕ್ಕೆ ಸೇರುತ್ತಿದ್ದಾರೆ. ಗೃಹಜೀವನದ ಸವಿಯನ್ನು ತೊರೆದು, ತಾರುಣ್ಯದ ಮಾಧುರ್ಯವನ್ನುಳಿದು ಮುಂಚೂಣಿಗೆ ಮುನ್ನಡೆಯುವ ಸ್ವಾರ್ಥತ್ಯಾಗೀ ಯುವಕರಿಗೆ ತರುಣಿಯರು ತಮ್ಮ ಕೈಲಾದ ಸೇವೆಯನ್ನು ಮಾಡಬೇಡವೇ?

ಈ ದೃಷ್ಟಿಯಿಂದ ಇಂಗ್ಲೆಂಡಿನ ತರುಣಿಯರು ತಮ್ಮ ಕೈಲಾದಷ್ಟು ಮಟ್ಟಿಗೆ ತರುಣರಿಗೆ ಪ್ರಣಯಾನಂದವನ್ನೀಯುತ್ತಾರೆ. ಆದುದರಿಂದಲೇ ಇಂಗ್ಲೆಂಡಿನಲ್ಲಿ ಇಂತಹ ದೃಶ್ಯಗಳು ಹೆಚ್ಚುತ್ತಿರಲು ಕಾರಣ. ಈ ದೃಶ್ಯಗಳನ್ನು ಕಂಡು–ಏನಿದು "ಯುದ್ಧಕಾಲದ ಮಕ್ಕಳು" ಎಂಬ ಜಾತಿಯೊಂದು ಬೇರಾಗಬಹುದೆ? ಎಂದು ಪ್ರಶ್ನಿಸುವವರಿದ್ದಾರೆ.

ಇದಕ್ಕನ್ನುತ್ತಾರೆ ಅಲ್ಲಿಯ ತರುಣಿಯರು ಮಧ್ಯ ವಯಸ್ಸಿನ ಜನರು ಲೈಂಗಿಕ ವಿಚಾರಗಳಿಗೆ ಕೊಡುವಷ್ಟು ಪ್ರಾಮುಖ್ಯತೆಯನ್ನು ಬೇರಾವುದಕ್ಕೂ ಕೊಡುವುದಿಲ್ಲ. ತರುಣ ತರುಣಿಯರು ಚುಂಬನಾಲಿಂಗನಗಳನ್ನು ಮೆಚ್ಚುವುದಿದ್ದರೂ ಅದಕ್ಕೆ ದೊಡ್ಡ ರೂಪು ಕೊಟ್ಟು ಮಧ್ಯ ವಯಸ್ಸಿನವರಂತೆ ಗೊಂದಲ ಮಾಡುವುದಿಲ್ಲ.

ಮಧ್ಯ ವಯಸ್ಸಿನವರು ಈಗಿನ ತರುಣ ತರುಣಿಯರನ್ನು ಕಾಣುವಾಗ ಅವರಿಗೆ ತಮ್ಮ ತಾರುಣ್ಯದ ದಿನಗಳ ನೆನಪಾಗುತ್ತದೆ. ಸ್ವಾಭಾವಿಕವಾಗಿ ಅಂತಹ ಜನರು ಈಗಿನ ಕಾಲವನ್ನು ಬೇಕೆಂದೇ ಹಳಿಯ ತೊಡಗುತ್ತಾರೆ.

"ತಾರುಣ್ಯವೇ ಪ್ರಣಯಕ್ಕೆ ಹೇಳಿಸಿದ ಕಾಲ. ರಾಷ್ಟ್ರಕ್ಕಾಗಿ ಹೋರಾಡುವ ಯುವಕರಿಗೆ ಅಂತಹ ಆನಂದವನ್ನು ಒದಗಿಸುವುದು ರಾಷ್ಟ್ರಾಭಿಮಾನವಿರುವ ಪ್ರತಿಯೊಬ್ಬ ತರುಣಿಯ ಕರ್ತವ್ಯ. ಯುದ್ಧಕಾಲದಲ್ಲಿ ಪ್ರತಿಯೊಂದೂ ಅವಸರದಲ್ಲಿಯೇ ನಡೆಯಬೇಕಾಗುತ್ತದೆ. ಹಾಗೆಯೇ ಇಂದಿನ ಇಂಗ್ಲೆಂಡಿನಲ್ಲಿ ಪ್ರಣಯವು ನಾಗಾಲೋಟದಿಂದ ಮುಂದಡಿಯಿಡ ತೊಡಗಿದೆ.

"ಖಾಕಿ ಅಥವಾ ನೀಲ ತೊಡಿಗೆಯನ್ನು ತೊಟ್ಟ ಪ್ರತಿಯೊಬ್ಬ ಯುವಕನಿಗೆ ಪ್ರೇಮವನ್ನು ತೋರಿಸುವುದು ಸರ್ವರ ಕರ್ತವ್ಯ. ಅವರು ರಾಷ್ಟ್ರದ ಅರ್ಥಾತ್ ಸ್ತ್ರೀಯರ ಸ್ವಾತಂತ್ರ್ಯಕ್ಕಾಗಿ ಹೋರಾಡುವವರು. ಆದುದರಿಂದ ಅಂಥವರಿಗೆ ಸ್ತ್ರೀಯರು ತಮ್ಮ ಪಾಲಿನ ಸುಖವನ್ನೀಯಲೇ ಬೇಕು." ಎಂದು ಮರಿಯೆಲ್ ಎಂಬ ಯುವತಿ ಹೇಳಿದ್ದಾಳೆ.

ಯುದ್ಧದಲ್ಲಿ ಮೊತ್ತ ಮೊದಲು ನಾಶವಾಗುವ ಮಾನವ ಜಾತಿಯ ಅಂಶವೆಂದರೆ ಯುವಕರು. ಅಂತಹ ಯುವಕರ ಮನಸ್ಸನ್ನು ತಣಿಸುವುದು ಅವಶ್ಯವಲ್ಲವೇ? ವಸ್ತುಸ್ಥಿತಿಯು ಹೀಗಿರುವುದರಿಂದ ತರುಣಿಯರು ಯುದ್ಧದೇವತೆಯ ಕೈಯಲ್ಲಿರುವ ಯುವಕರಿಂದ ಒಂದಿಷ್ಟಾದರೂ ಸುಖ ಪಡೆಯುವುದು ಸಹಜವಲ್ಲವೇ?

ಗೆಳೆಯರ ತಂಡಕ್ಕೆ ಸದಸ್ಯರಾಗಿರಿ

# ಮುಂಬಯಿಯ ಪಾಪಕೂಪ



ರಾಜಶೇಖರ

## ಭಾಗ ೯. ಶ್ರೀಮಂತರು ಮತ್ತು ಹಿಂದೂ ಸಮಾ

ಪ್ರಪಂಚದಲ್ಲಿ ನೂರಾರು ವಿಚಿತ್ರಗಳು ನಡೆದುಹೋಗಿವೆ, ನಡೆದು ಹೋಗುತ್ತಿವೆ, ಮುಂದಕ್ಕೆ ನಡೆಯಲೂ ಬಹುದು. ಒಬ್ಬೊಬ್ಬರು ಒಂದೊಂದು ವಸ್ತುವನ್ನು ವಿಚಿತ್ರವೆನ್ನುತ್ತಾರೆ. ನನಗೆ "ಮುಂಬಯಿ ಪಾಪಕೂಪ"ವು ಒಂದು ವಿಚಿತ್ರ.

ನಾನು ಈ ಲೇಖನಮಾಲೆಯನ್ನು ೧೯೩೯ನೇ ಇಸವಿ ಜೂನ್ ತಿಂಗಳಲ್ಲಿಯೇ ಬರೆಯುತ್ತಿದ್ದೆನು. ಮುಂಬಯಿಯಲ್ಲಿ ನನಗೆ ಪರಿಚಿತರಾದ ಕನ್ನಡಿಗರು ಬಹಳವಿರಲಿಲ್ಲ. ಇತರ ಮತಸ್ಥರು ಬೇಕಾದಷ್ಟಿದ್ದರು. ಅವರಲ್ಲೊಬ್ಬ ಶ್ರೀಮಂತ ಮಹಾಶಯನು ನನ್ನ ಲೇಖನದಲ್ಲಡಗಿರುವ ಕೆಲವು ವಿಷಯಗಳನ್ನು ತಿಳಿಯಲಪೇಕ್ಷಿಸಿದನು.

ಅವನ ಅಭಿಲಾಷೆಯಂತೆ ಎಲ್ಲವನ್ನೂ ಆತನಿಗೆ ಹಿಂದೀ ಭಾಷೆಯಲ್ಲಿ ಹೇಳಿದ ನಂತರ, ಅವನು ಕಿರುನಗುವನ್ನು ನಗುತ್ತಾ ಹೇಳಿದನು. "ನೋಡಪ್ಪಾ ರಾಜು! ಹ್ಯಾಗಿದ್ದರೂ ನೀನು ಕತೆಗಾರ, ಒಂದಕ್ಕೊಂದು ಜೋಡಿಸಿ, ಬರೆದು ಬಿಟ್ಟೆ ಅನ್ನು. ಎಲ್ಲಾದರೂ ಇದೆಯೇ? ಏನು ಕತೆ? ನಾನು ಮುಂಬಯಿ ನಗರದಲ್ಲಿ ಮುವತ್ತಾರು ವರ್ಷಗಳಿಂದ ಜೀವಿಸುತ್ತಿದ್ದೇನೆ. ನನಗೆ ಇಂಥಾ ವಿಚಿತ್ರಗಳ್ಯಾವವೂ ತೋರಲಿಲ್ಲ! ಹೋಗಲಿ. ಆ ನಿನ್ನ ಲೇಖನದಲ್ಲಿ ಹೇಳುವ ವೇಶ್ಯೆಯರು ಒಂದು ವೇಳೆ ಇದ್ದರೂ, ಅವರೆಲ್ಲಾ ನಿನಗೆ ಜೀವನ ಚರಿತ್ರೆಯನ್ನು ಹೇಳಿಕೊಡುತ್ತಾರೆಯೇ? ಏನೋ ಬರೆಯುಪ್ಪಾ ಬರೆ! ನನಗೇನಾಗಬೇಕಾಗಿದೆ," ಅಂದ.

ಅವನ ಹೇಳಿಕೆಗೆ ಸಮಾಧಾನ ಹೇಳುವ ಗೋಜಿಗೆ ನಾನು ಹೋಗಲಿಲ್ಲ. ಹೋಗಿದ್ದರೆ ಪ್ರಯೋಜನವೇನೂ ಆಗುತ್ತಿರಲಿಲ್ಲ. ನಾನು ಬರುತ್ತೇನೆಂದು ಅವನಿಂದ ಬೀಳ್ಕೊಂಡು ಹೊರಬಿದ್ದೆ.

"ನಮಸ್ಕಾರ,......."ಎದುರಾದ ಮತ್ತೊಬ್ಬ

"ನಮಸ್ಕಾರ.........ಯಾರು ನೀವು!...."



ಬೊಂಬಾಯಿಯ ಸುಪ್ರಸಿದ್ಧ 'ಹೇಂಗಿಂಗ್ ಗಾರ್ಡನ್'
ಪ್ರತಿ ಸಾಯಂಕಾಲ ಇದರ ಹತ್ತಿರ ನಡೆಯುತ್ತಿರುವ ಅನೇಕ ಗುಪ್ತ
ಪ್ರೇಮ ದೃಶ್ಯಗಳನ್ನು ನೋಡಬಹುದು.

"ನಾನೇ, ತಾವು ಹೋಗಿದ್ದೀರಲ್ಲಾ ಆ ಶ್ರೀಮಂತರು, ಅವರ ಹತ್ತಿರ ನಾನು ಗುಮಾಸ್ತೆಯಾಗಿದ್ದೇನೆ. ನನ್ನಪ್ಪನೂ ಗುಮಾಸ್ತೆಯಾಗಿದ್ದ... ಸರಿ, ತಮ್ಮ ಕೆಲಸ ಪೂರೈಸಿತೇ........? ಒಂದು

ನ ಬರೆದಿದ್ದೆ,
ಹೋಗಿದ್ದೆ ಅ
"ಏನಾ
. "ಸಿಕ್ಕು
ಮಾತನ್ನು
ಬಾಯಿಹಾಕಿ

ಯನ್ನು ನೆನಸಿ
"ಸತ್ಯವಾ
ಬೊಂಬಾಯಿನ
ದೇವತೆಯೊಂದು

ದ್ದರೆ,...
ತ್ತೀನೆ
ಆ
ಎಂದು
ಮಾಡಿ
ವಿಚಿತ್ರ
ಕತ್ತಿಗೆ
ೀಟಲಿಗೆ
ನಲ್ಲಿಯೇ
ುಬಿಟ್ಟ.
ತಪ್ಪಿಸಿ
"ಏನೂ
ು ಲೇಖ
ರಲಿಕ್ಕಾಗಿ
ು ನನ್ನ
ಮಧ್ಯೆ
ಹೇಳು
ಮಾಡಿ!
ಯಾರಿಗಾ
ಗುಟ್ಟಾ
ದಪ್ಪಾ!
ಬಾಯಿಗೆ
ೋದೀತು
ವಿರಲಿ!...
ತ್ತ ಕೆಲಸ
ಕೊಡು
ಂದ ಆ
ನಿನಗೆ
ನಪ್ಪಾ"
ನ ಕತೆ
ಯಾಹೆ!"
ು ಪೂಜ್ಯ

ಅಂತೂ ಅವನಿಂದ ಬೀಳ್ಕೊಳ್ಳುವದಷ್ಟೇ ನನಗೆ ಬೇಕಾಗಿದ್ದುದರಿಂದ, ಆ ಗುಟ್ಟಾದ ಸಮಾಚಾರವೊಂದನ್ನು ತಿಳಿದು ಹೋಗೋಣವೆಂದು ಅವನ ಸತ್ಯ ಆಣೆಗಳಿಗೆಲ್ಲಾ ಒಪ್ಪಿದ ನಂತರ "ಬನ್ನಿ" ಎಂದು ನನ್ನನ್ನು ಕರೆದುಕೊಂಡು ಹೊರಟ. ಹೋಗುವಾಗ ರಸ್ತೆಯಲ್ಲಿ ತನಗೆ ಆರು ಮಕ್ಕಳೂ, ಒಂದು ಹೆಂಡತಿಯೂ, ಒಬ್ಬಳು ಮುದಿತಾಯಿಯೂ, ಒಬ್ಬಳು ವಿಧವೆ ಅತ್ತಿಗೆಯೂ... ಯಾರ್ಯಾರೋ ಎಲ್ಲಾ ಇದ್ದಾರೆಂದು ಹೇಳುತ್ತಾ ತಾನೀಗ ಹೇಳಲು ಹೊರಟಿರುವ ಗುಟ್ಟನ್ನು ನಾನು ಯಾರ ಹತ್ತಿರವಾದರೂ ಬಾಯಿಬಿಟ್ಟರೆ, ತನ್ನ ಗತಿಯು ದೇವರೇ ಗತಿಯಾಗಿ ಬಿಡುತ್ತದೆಂದೂ, ಏನೋ ಹೊಟ್ಟೆಯಪಾಡಿಗೆ ಈ ಪರಿಪಾಟಲು ಪಡುತ್ತಿದ್ದಾನೆಂದೂ ಮೊದಲಾಗಿ ನನಗೆ ಮಂದಟ್ಟುಮಾಡಿ, ಹೇಳುತ್ತಿದ್ದನು. ರಸ್ತೆಯು ಸಾಗಿತ್ತು!

"ಅದೋ—ಅಲ್ಲಿ ನೋಡಿ ಮೂರನೆಯ ಮಹಡಿ! ಆ ಹಸರು ಪರದೆ ಕಿಟಕಿಗೆ ಇಳೀ ಬಿಟ್ಟಿದ್ದಾರೆ ನೋಡಿ ಆ ಮನೆಯಲ್ಲಿದ್ದಾಳೆ..." ಆ ಮನುಷ್ಯನು ಕೈತೋರಿಸುತ್ತಾ ಹೇಳಿದ.

"ಯಾರು?" ಆಶ್ಚರ್ಯದಿಂದ ನಾನು ಕೇಳಿದೆನು.

"ಅ... ಅದೇ.... ನಮ್ಮ ಧನಿಗಳ......."

ಓ! ಸರಿ! ಹಾಗದರೆ ಧನಿಗೆ ವಿವಾಹವಾಗಿ ಎರಡು ಮಕ್ಕಳಿದ್ದಾರಲ್ಲ. ಹೀಗಿದ್ದೂ........ ಇಟ್ಟುಕೊಂಡಿದ್ದಾರೆಯೇ?"

"ಇದ್ದರೇನಾಯಿತು ಬಿಡ್ರಿ! ಗೊತ್ತಿದೆಯೇ? ಅವರ ಹತ್ತಿರ ಅರುವತ್ತೇಳು ಲಕ್ಷ ರೂಪಾಯಿಗಳಿವೆ. ಏಳು ಬಿಲ್ಡಿಂಗ್‌ಗಳಿವೆ. ಇಪ್ಪತ್ತು ಜನ ಕಾರಕೂನರಿದ್ದಾರೆ. ನೌಕರರೆಷ್ಟೋ ದೇವರೇ ಬಲ್ಲ...." ಅವನು ಹೇಳುವದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಕೆಲವೇ ಗಂಟೆಗಳ ಹಿಂದೆ ಆ ಶ್ರೀಮಂತನು ನನ್ನ ಲೇಖನಗಳೆಲ್ಲಾ ಬರೇ ಸುಳ್ಳಿನ ಕತೆಯೆಂದು ಅಲ್ಲಗಳೆದಿದ್ದನಲ್ಲದೆ "ನನಗೆ ರುಜುವಾತು ಮಾಡಿ ಕೊಡುವೆಯಾ?" ಎಂದೂ ಕೇಳಿದ್ದ. ಆದರೆ ನನ್ನೊಡನೆ ಇರುವ ಮನುಷ್ಯನಾದರೋ ತೀರ ವ್ಯತಿರಿಕ್ತವಾಗಿ ಹೇಳುತ್ತಿದ್ದಾನೆ. "ನಂತರ..." ನಾನು ಕೇಳಿದೆ.

"ನಂತರ, ಅಷ್ಟೇ,...ವರು ಬಹಳ ಒಳ್ಳೆಯವರು. ನೀವು ಹೋಗಿ ಅವರಲ್ಲಿ ಕೇಳಿಕೊಳ್ಳಿ...."

"ಏನಂತಾ?" ಕುತೂಹಲದಿಂದ ಪ್ರಶ್ನಿಸಿದೆನು.

"ಅದೇ, ಅದೆಂತಾದ್ದೋ ಬರೆದಿದ್ದೀರಿ ಅಂದಿರಲ್ಲಾ....ಅವರು ಧನಿಗೆ ಹೇಳಿದರೆ ಸಾಕು. ಕೂಡಲೇ ನಿಮಗೆ ಸಿಕ್ಕಿಹೋಗುತ್ತೆ...." ಅಂದ.

"ಸರಿಯಪ್ಪಾ! ಆ ಮೇಲೆ ಫಜೀತಿಗಿಟ್ಟುಕೊಂಡರೆ?"

"ಏನೂ ಆಗುವದಿಲ್ಲ ಬಿಡ್ರಿ........ ಅವರು ಬಹಳ ಒಳ್ಳೆಯವರು....ಅವರು ಹೇಳಿದಾಗೆ ಧನಿಗಳು ಕೇಳುತ್ತಾರೆ. ವಿಚಾರ ಹ್ಯಾಗಾಯಿತು ಗೊತ್ತೇ? ಒಂದು ದಿವಸ..........ಆ! ಈಗ ಗೊತ್ತಾಯಿತೇ?

ಸರಿ ನನಗೆ ಗೊತ್ತಾಯಿತು. ವಾಚಕರಿಗೆ ಗೊತ್ತಾಗಲಿಲ್ಲ. ಗೊತ್ತುಮಾಡುವ ಇಚ್ಛೆಯೂ ನನಗಿಲ್ಲ. ಆದರೆ ಇಷ್ಟುಮಾತ್ರ ತಿಳಿದುಕೊಳ್ಳಿ. ನಾನು ಬರೆಯುತ್ತಿರುವುದೊಂದು ಸತ್ಯ. ಸತ್ಯದಿಂದ ಭಟ್ಟಿಇಳಿಸಿದ ತಿಳಿಯಾದ ಸತ್ಯ. ಹಿಂದೂ ಸಮಾಜದ ಭಯಂಕರ ಅತ್ಯಾಚಾರ. ಧನಿಕರ ಸ್ವಾರ್ಥಪರತೆಯ ಪರಮಾವಧಿ. ನಾನು ಬರೆದದ್ದಕ್ಕಾಗಿ ನೀವಿದನ್ನು ಓದಿ ನಿಮ್ಮ ಪರಮ


# ಮಿತ್ರ ಸಮಾಜ

## ಹುಬ್ಬಳ್ಳಿ

**ಬ್ರಾಹ್ಮಣರ ಸುಪ್ರಸಿದ್ಧ ಭೋಜನಾಲಯ.**

ಪ್ರಯಾಣಿಕರಿಗೂ ಇತರರಿಗೂ ಎಲ್ಲ ಬಗೆಯ ಸೌಕರ್ಯಗಳೂ ಸಿಗುವುವು. ಇಳಿದುಕೊಳ್ಳಲು ಉತ್ತಮ ವ್ಯವಸ್ಥೆಯಿರುತ್ತದೆ.

ಮಾರ್ಕೇಟ್,
ಹುಬ್ಬಳ್ಳಿ.

ಕೆ. ಪದ್ಮನಾಭ,
ಮಾಲಕರು.

ಪಾವನವಾದ ನೇತ್ರದಿಂದ ಎರಡು ಅಶ್ರುಬಿಂದುಗಳನ್ನು ತೆಗೆದು ಭೂದೇವಿಗೆ ಅರ್ಪಿಸಿ, ನಿರ್ಭಾಗ್ಯಳಾದ ಭೂದೇವಿಯು ಅನಂತ ಪಾಪಗಳನ್ನು ಹೊತ್ತು ಭಾರದಿಂದ ಬಳಲಿ ಬೆಂಡಾಗಿ ಹೋಗಿದ್ದಾಳೆ.

ನಾನು ಕಂಡ ಶ್ರೀಮಂತನು ನನ್ನ ಲೇಖನವನ್ನು ಕುತೂಹಲದಿಂದ ಕೇಳಲಿಕ್ಕೆ ಇಚ್ಛಿಸಿದ್ದರಲ್ಲಿ ಅರ್ಥವಿಲ್ಲದೇ ಇರಲಿಲ್ಲ. ಮುಂಬಯಿ ಪಾಪಕೂಪದಲ್ಲಿ ಅವನಾಡುತ್ತಿದ್ದ ಪಾರ್ಥದ ಗಂಧವು ಅದರಲ್ಲಿ ಸೇರಿಕೊಂಡಿದೆಯೋ ಎಂದು ಪರಾಂಬರಿಸಲಿಕ್ಕಾಗಿ ನನನ್ನು ಆದರ ಸತ್ಕಾರಗಳಿಂದ ಬರಮಾಡಿಕೊಂಡಿದ್ದ. ಆದರೆ ರವಿ ಕಾಣದ್ದು ಕವಿ ಕಂಡ ಎಂಬ ನಾಣ್ನುಡಿಯು ಸುಳ್ಳಾದೀತೇ?

ಅವನು ಆಗರ್ಭ ಶ್ರೀಮಂತನೇನೋ ಅಹುದು. ತನ್ನ ಶ್ರೀಮಂತಿಕೆಯ ಅನಂತ ಸುಖವನ್ನು ಉಂಡೇ ಈ ಲೋಕದಿಂದ ತೆರಳಲಿರುವನೆಂಬಂತೆಯೇ ಅವನ ವೈಭವಾದಿಗಳು ಒಂದನ್ನೊಂದು ಮೀರುವಂತಿದ್ದವು. ಅವನು ಇಟ್ಟುಕೊಂಡಿದ್ದ - - - - ಯ ಸೌಕರ್ಯಕ್ಕಾಗಿ;

(೧). ಅವಳಿಗೆ ಸುಂದರವಾದ ಭವನದ ಮೂರು ಮಹಡಿಯ ಮೇಲೆ, ಐದು ಕೋಣೆಗಳಿರುವ ಒಂದು ಮನೆ. ಬಾಡಿಗೆ ೧೫೦. ರೂ.

(೨). ಅವಳಿಗೆ ತಿರುಗಾಡಲಿಕ್ಕಾಗಿ ೨೨೦೦೦. (ಇಪ್ಪತ್ತೆರಡು ಸಾವಿರ) ರೂಪಾಯಿ ಬೆಲೆಬಾಳುವ ಒಂದು ಮೋಟಾರು.

(೩). ಅವಳ ಅನುಕೂಲತೆಗಾಗಿ, ಒಬ್ಬ ಡ್ರೈವರ್, ಒಬ್ಬ ಸೇವಕ, ಒಬ್ಬಳು ದಾದಿ, ಒಬ್ಬ ಅಡಿಗೆಯವ - - ಇನ್ನಾ ರ್‍ಯಾರೋ ನನಗೆ ತಿಳಿಯದು.

(೪). ಅವಳ ಖರ್ಚಿಗಾಗಿ, ತಿಂಗಳಿಗೆ ೯೦೦ ರೂ. ಗಳು. ಒಂದನೇ ತಾರೀಕಿನಲ್ಲಿ ಅವಳ ಹತ್ತಿರ ತಂದು ಕೊಟ್ಟು ಹೋಗುವದು.

(೫). ಅವಳ ತಾಯಿ ಮತ್ತು ಅಕ್ಕನೋ ಯಾರೋ, ಅಂತೂ, ಅವರಿಗೊಂದು ವಾಸಕ್ಕೆ ಬೇರೆ ಮನೆ.

(೬). ಅವಳ ತಾಯಿ ಮತ್ತಿತರರ ಸೌಕರ್ಯಕ್ಕಾಗಿ ೫೦೦೦ ರೂ. ಬೆಲೆ ಬಾಳುವ ಒಂದು ಮೋಟಾರು.

(೭). ಅವಳ ತಾಯಿ ಮೊದಲಾದವರಿಗೆ ಒಬ್ಬ ಡ್ರೈವರ್, ಇಬ್ಬರು ಸೇವಕರು.

(೮). ಅವಳ ತಾಯಿಯ ಖರ್ಚಿಗಾಗಿ, ತಿಂಗಳಿಗೆ ೫೦೦ ರೂಪಾಯಿಗಳು.

ಹಾಳಾಯಿತು ಬಿಡಿ! ಯಾರಿಗೆ ಬೇಕಾಗಿದೆ ಈ ಬಜೆಟ್. ಅಂತೂ ಶ್ರೀಮಂತಿಕೆಯ ಒಂದು ಮುಖವು ಈ ರೀತಿಯಿಂದ ನರ್ತನ ಮಾಡುತ್ತಿದ್ದ ಸಮಯದಲ್ಲಿ ಇನ್ನೊಂದು ಮುಖವೋ?

ಆ ಶ್ರೀಮಂತನ ಪತ್ನಿಯು ಗಂಡನಿಗಿಂತ ಮೂವತ್ತೊಂದು ವರ್ಷಕ್ಕೆ ಚಿಕ್ಕವಳು. ಅವಳ ವಯಸ್ಸು ೨೦. ಎರಡು ಮಕ್ಕಳು ಬೇರೆ. ತನ್ನ ಗಂಡನು ಪ್ರಸಿದ್ಧ- - - ಎಂದು ಮಾತ್ರ ಅವಳಿಗೆ ಗೊತ್ತು. ಅಷ್ಟೇ ಸಾಕಾಗಿದೆ. ಅವಳಿಗೆ. ದಿನ ಬೆಳಗಾಗುತ್ತಲೇ ಏಳುತ್ತಾಳೆ. ಮಕ್ಕಳ ಪೋಷಣೆ, ದೇವರ ಪೂಜೆ, ಗಂಡನಿಗೆ ತಿಂಡಿ, ನೌಕರ ಚಾಕರನ್ನು ಆಯಾ ಕೆಲಸಕ್ಕೆ ಕಳುಹಿಸುಹದು, ಸರಿ. ಅದೋ! ಸೂರ್ಯಾಸ್ತಮಾನವಾದನು. ‘‘ರಾಮ ರಾಮ ದೇವಾದಿ ದೇವ ನನಗೂ ನನ್ನ ಗಂಡನಿಗೂ ನನ್ನ ಮಕ್ಕಳಿಗೂ ಸುಖವನ್ನು ಕೊಡೆ’’ಂದು ಹೇಳಿ ಮಲಗಿ ನಿದ್ದೆಹೋಗುತ್ತಾಳೆ. ಹೀಗೆಯೋ ನಡೆಯಬಹುದು.

ನಾನೇನು ಶ್ರೀಮಂತರನ್ನು ಹಳಿಯುತ್ತಿಲ್ಲ. ದೇಶದ ಆರ್ಥಿಕ, ಮತ್ತು, ಔದ್ಯೋಗಿಕದ ಅಡಿಪಾಯದಂತಿರುವ ಶ್ರೀಮಂತರನೇಕರು ಮೃಗವಾಗಿರುವುದಕ್ಕಿಂತ ಮಾನವರಾಗಿದ್ದರೆ ಎಷ್ಟು ಚೆನ್ನಾಗಿರುತ್ತೆಂದು ವಿಷಾದಿಸುತ್ತಿದ್ದೇನೆ ಅಷ್ಟೆ! ನಾನು ನೋಡಿದ ನೂರಾರು ವಿಚಿತ್ರ ಶ್ರೀಮಂತರುಗಳಲ್ಲೊಬ್ಬರ ಕತೆಯನ್ನು ನಿಮಗೆ ಹೇಳುತ್ತೇನೆ.

—ಅವನು ಶ್ರೀಮಂತ ಯುವಕ—

ಅವರ ಸಮಾಜದಲ್ಲಿ ವಿವಾಹವಾಗುವಾಗ ವಧುವಿಗೆ ಎರಡು ಸಾವಿರದಿಂದ ಹಿಡಿದು ೩-೪ ಸಾವಿರ ರೂಪಾಯಿ


ಫೋನೋಟೋನ್ ಆಸಿಡ್
ಎಂಬುದೇ ಹಳೇ ರಿಕಾರ್ಡುಗಳ ವೈದ್ಯ
ಇದನ್ನು ಹೊಸ ರಿಕಾರ್ಡುಗಳಿಗೆ ೧೫ ದಿವಸಗಳಿಗೆ ಒಂದು ಸಲ ಹಾಕಿದರೆ ರಿಕಾರ್ಡುಗಳು ಎಂದಿಗೂ ಕೆಡುವುದಿಲ್ಲ.
ಮೈಸೂರು ದೇಶದ ಸೋಲ್ ಡಿಸ್ಟ್ರಿಬ್ಯೂಟರ್ಸ್
ಸೀತಾಫೋನ್ ಕಂಪೆನಿ
ಅವಿನ್ಯೂರೋಡ್ ಬೆಂಗಳೂರು ಸಿಟಿ.
ಮತ್ತು
ಬ್ರಾಂಚು ೭೩೩ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಗಳನ್ನು ಕೊಟ್ಟು ವಿವಾಹವಾಗುವದು ಪದ್ಧತಿ. ಇರಲಿ, ಹಿಂದೂ ಸಮಾಜದ ವಿಚಿತ್ರ ಪದ್ಧತಿಗಳನ್ನು ಕಟ್ಟಿಕೊಂಡು ನಮಗೇನಾಗಬೇಕಾಗಿದೆ. ಅಂತೂ, ಆ ಶ್ರೀಮಂತ ವಿವಾಹವಾದ. ಒಂದೆರಡು ಮಕ್ಕಳೂ ಆಯಿತು. ಏನೋ ದೈವಲೀಲೆಯಿಂದ ಹೆಂಡತಿಯು ತೀರಿಕೊಂಡಳು.

ಹೆಂಡತಿ ಇಲ್ಲದಿದ್ದರೇನು? ಮುಂಬಯಿಯಲ್ಲಿ ಹಣವೊಂದಿದ್ದರೆ, ಹೆಂಡತಿಗೆ ಹೋಲುವ ಆ ಹೆಂಗಸು ಜಾತಿಯನ್ನು ವರ್ಷಗಟ್ಲೆ ಸರಬರಾಯಿ ಮಾಡಬಲ್ಲೆನೆಂದು ನಾನು ಚೇಲೆಂಜ್ ಮಾಡುತ್ತೇನೆ ಅಂತೂ ನಮ್ಮ ಪತ್ನೀವಿಯೋಗಿ ಶ್ರೀಮಂತನು "ಮುಂಬಯಿ ಪಾಪಕೂಪ"ಕ್ಕೆ ಕಾಲಿಕ್ಕಿದ. ಆದರೆ ಅದಿವನ ಗುರುಹಿರಿಯರಿಗೆ ತಿಳಿದು ಹೋಯಿತು. ಕೂಡಲೆ ಅವನ ವಿವಾಹ ಮಾಡಲು ತೊಡಗಿದರು. ಎರಡನೆಯ ವಿವಾಹವೆಂದರೆ ಸ್ವಲ್ಪ ತೊಂದರೆಯೇ ಅವರ ಸಮಾಜದಲ್ಲಿ. ಹುಡುಗ ಹೇಗಿದ್ದಾನೆ. ಹಲ್ಲುಗಳು ಎಲ್ಲಾ ಚೆನ್ನಾಗಿವೆಯೇ? ಕೂದಲೂ ಕಪ್ಪಗಿದೆಯೇ? ಮೊದಲಾಗಿ ಪ್ರಶ್ನಿಸುತ್ತಾರಂತೆ. ಹಾಳಾಯಿತು ಇವರ ಮನೆ. ರೂಪಾಯಿ ಬೆಳ್ಳಗಿಲ್ಲವೇ? ಅಂತೂ ಎರಡನೆಯ ಮದುವೆಯೂ ಆಯಿತು. ಒಂದು ಮಗುವೂ ಆಯಿತು. ಕಾಲವೂ ಉರುಳಿತು.

"ಏನೇ? ಯಾವಾಗ ನೋಡಿದರೂ ಜೋಳಿಕಾಳು ಸಾರೇ ಮಾಡುತ್ತಿಯಲ್ಲೇ? ಸ್ವಲ್ಪ ಪಲ್ಯನಾದರೂ ಮಾಡೇ?" ಎಂದು ನೀವು ನಿಮ್ಮ ಪತ್ನಿಗೆ ಹೇಳುತ್ತಿರಲು ಏನು ಕಾರಣ? ಉಂಡದ್ದೇ ಉಂಡು ನೀವು ಬದಲಾವಣೆಯನ್ನಪೇಕ್ಷಿಸುಪಿರಿ. ಹಾಗೆಯೇ ನಮ್ಮ ಶ್ರೀಮಂತನು ಕೂಡ. ಮುಂಬಯಿ ಪಾಪಕೂಪ. ಹೊಸ ಹೊಸ ಪಲ್ಯಕ್ಕಾಗಿ ಹೋಗುತ್ತಿದ್ದರೆ ಅವನದದು ತಪ್ಪೇ? ಅವನು ದಿನಂಪ್ರತಿಯೂ ವೇಶ್ಯಾ ವಸತಿಯಲ್ಲಿ ಅಡ್ಡಾಡಿ ಬರುವದು ವಾಡಿಕೆಯಾಗಿತ್ತು. ಯಾವದಾದರೊಂದು ವೇಶ್ಯಾ ಗೃಹದಲ್ಲಿ ಹೊಸ ಮುಖವೊಂದು ಕಂಡರೆ ಸರಿ ಅಲ್ಲಿ ಅವನು ಗಿರಾಕಿಯಾಗುತ್ತಿದ್ದ. ಹೀಗೆಯೇ ಕಾಲವು ಉರುಳುತ್ತಿತ್ತು. ಲೀಲಾಮಯನಾದ ಪರಮಾತ್ಮನಾದರೋ ಆಗುತ್ತಿರುವ ಲೀಲೆಯಿಂದ ಸಂತುಷ್ಟನಾಗದೆ ಅವನ ಎರಡನೆಯ ಹೆಂಡತಿಯನ್ನೂ ಪರಲೋಕಕ್ಕೆ ಕರೆದುಕೊಂಡನು.



ಬಹಾಮದ ಗವರ್ನರರಾಗಿ ಆರಿಸಲ್ಪಟ್ಟಿರುವ ವಿಂಡ್ಸರಿನ ಡ್ಯೂಕ್ ಮತ್ತು ಡಚೆಸ್‌ರವರು

ಪತ್ನೀಹೀನನಾದ ನಮ್ಮ ಶ್ರೀಮಂತನು ವೇಶ್ಯಾಗೃಹಲೋಲನಾಗುವನೆಂಬ ಭಯದಿಂದ ಅವನ ಗುರು ಹಿರಿಯರು ಮೂರನೆಯ ಮದುವೆಗೆ ತೊಡಗಿದರು. ಅಲ್ಲಿಗೆ ಅವನು ಮಧ್ಯಾಹ್ನವನ್ನು ದಾಟಿದ್ದನು. ಅಂದರೆ ಮಧ್ಯ ವಯಸ್ಕನಾಗಿದ್ದನು. ಮಧ್ಯ ವಯಸ್ಕನಿಗೆ ಮದುವೆಯೆಂದರೆ? ಹ್ಯಾಗೂ ಯಾವನೋ ಒಬ್ಬ ಬಡ ಮುದುಕನ ಮಗಳನ್ನು ಅವರ ಜೀವಿತದಲ್ಲೆಲ್ಲಾ ಸಾಕಿಸಲಹುವುದೇ ಮೊದಲಾದ ಕರಾರಿನ ಮೇಲೆ ವಿವಾಹವೆಂಬ ವ್ಯಾಪಾರವು ಮುಗಿಯಿತು. ಅಸ್‌ಚಿ! ಮುದುಕನು ಮಗಳು ಕಡ್ಡಿಯಂತೆ! ಚೆನ್ನಾಗಿಲ್ಲ! ಹ್ಯಾಗೂ ಹೆಸರಿಗೊಂದು ಪತ್ನಿ ಇದ್ದಾ


# ಕೊಕ್ಕೋಕ ಕಳಾಶಾಸ್ತ್ರ



64 ರಹಸ್ಯ ಚಿತ್ರಪಠಗಳು ಸಹ ರೂ. 1.

ಇದರಲ್ಲಿ ಸ್ತ್ರೀಪುರುಷರನ್ನು ಪ್ರೀತಿಸುವ ರಹಸ್ಯಗಳು, ಮುದ್ದಿಡುವ ವಿಧಗಳು, ಆಲಿಂಗನ ಮಾಡುವ ರೀತಿಗಳು, ಕನ್ಯೆಗಳ ಪ್ರೇಮ, ಮತ್ತು ಸಂಯೋಗಕಾಲದ ಮರ್ಮಗಳು, ಶೃಂಗಾರ ರಹಸ್ಯಗಳು, ನಕ್ಷೆಗಳು ಸಹ ಹೇಳಿವೆ. ಇದುವರೆಗೆ ಇಂಥಾ ಬಹಿರಂಗವಾದ ಪುಸ್ತಕವು ಯಾರಿಂದಲೂ ಪ್ರಚುರಿಸಲ್ಪಡಲಿಲ್ಲ.

264 ಪುಟಗಳುಳ್ಳ ದೊಡ್ಡ ರಹಸ್ಯ ಪುಸ್ತಕ. ಕ್ರಯ ರೂ. 1. ಪೋಸ್ಟು ಚಾರ್ಜು 5ಆಣೆ.

**ಸರಸ್ವತಿ ಬುಕ್ ಡಿಪೋ,** ಅರುಣಾಚಲ ಮೊದಲಿ ಬೀದಿ, (A)*G.T.* ಮದರಾಸ್

ಳೋ ಇಲ್ಲವೋ? ಮಕ್ಕಳೂ ಆಯಿತು. ಕಾಲವೂ ಸಾಗಿತು.

ಅವನೊಮ್ಮೆ ನನಗೆ ಭೇಟಿಯಾದ. ಅಲ್ಲೇ! ವೇಶ್ಯಾ ವಸತಿಯಲ್ಲಿ!

"ಓಹೋ, ಏನು ಸಾಹುಕಾರರೇ! ಚೆನ್ನಾಗಿದ್ದೀರಾ? ಅಪರೂಪವಾಗಿಬಿಟ್ಟಿರುವಿರಲ್ಲಾ!"

"ಇದ್ದೇನಯ್ಯಾ ಚೆನ್ನಾಗಿ! ಏನು ಕತೆಗಿತೆ ಎಲ್ಲಾ ಬರೆಯುತ್ತಿರುವೆಯೆಂದು ಕೇಳಿದೆ, ಇದೇನು ಇಲ್ಲಿ! ಮದುವೆ ಮಾಡಿಕೊಳ್ಳಲಿಲ್ಲೇಕೆ"— ಅಬ್ಬಾ ಆ ಸಾಹುಕಾರನ ಧೈರ್ಯವೇ?

"ಬಿಡಿ ಸಾಹುಕಾರರೇ! ರಸ್ತೆಯಲ್ಲಿ ಹೋಗುತ್ತಿರಲೂ ಆಗದೇ?"

'ಅಲ್ಲಾ ಹಾಗೇ ಕೇಳಿದೆ—"

"ಏನು ಹೆಂಡತಿ ಮಕ್ಕಳೆಲ್ಲಾ ಚೆನ್ನಾಗಿದ್ದಾರೆಯೇ ಸಾಹುಕಾರರೇ?"

"ಅರೇ ನನ್ನ ಹೆಂಡತಿಗೆ ಬಹಳ ಕಾಯಿಲೆ ಕಾಣಪ್ಪ! ಅದೆಂತಾದೋ T. B. ಯೋ ಏನು ಹಾಳೋ! ಹತ್ತು ಹದಿನೈದು ದಿವಸದಿಂದ ಅನ್ನ ನೀರು ಮುಟ್ಟಲಿಲ್ಲ! ಏನು ಗ್ರಹಚಾರವೋ! ಆಗಲಿ ಬರುತ್ತೇನೆ. ಹೊತ್ತಾಯಿತು. "ಅಂದು ಆ ಶ್ರೀಮಂತನು ಹೊರಟು ಹೋದ.

ಹತ್ತು ದಿವಸಗಳ ಮೇಲೆ ಆ ಶ್ರೀಮಂತ ಹೊತ್ತಾರೆಯ ಹೊತ್ತಿನಲ್ಲಿ ಅವನ ವ್ಯಾಪಾರದ ಮಂಡಿಯಲ್ಲಿ ಭೇಟಿಯಾದ.

"ಏನೋ ರಾಜು! ಚೆನ್ನಾಗಿದ್ದಿಯಾ? ಆ ಹೊತ್ತು ಅಲ್ಲಿಗ್ಯಾಕೆ ಬಂದಿದ್ದೆ, ನಿಜ ಹೇಳೋ! ಯಾವಳನ್ನಾದರೂ ಗಂಟಾಕ್ಕೊಂಡಿದ್ದಿಯೋ?"

"ಬಿಡಿ ಸಾಹುಕಾರರೇ ಏನು ಹುಡುಗಾಟಿಕೆ! ಹೇಳಿದ ಹಾಗೆ, 'ನಿಮ್ಮ ಪತ್ನಿಯವರು ಈಗ ಸುಖವಾಗಿದ್ದಾರೆಯೇ?"

"ಅರೇ ನನ್ನ ಹೆಂಡತಿ ತೀರಿಹೋದಳಪ್ಪಾ!"

"ಯಾವಾಗ ಸಾಹುಕಾರರೇ?"

"ಈಗ, ಒಂದು ಗಂಟೆಯಾಯಿತು. ಶ್ರವವನ್ನು ಸೂಸಾಪುರಕ್ಕೆ ಕೊಂಡು ಹೋಗುತ್ತಿದ್ದಾರೆ......... ಏ! ಆ ಸಾಮಾನವನ್ನು ಕೆಳಗಿಡೋ. ಸಾಹುಕಾರನು ತನ್ನ ನೌಕರನಿಗೆ ಆಜ್ಞಾಪಿಸಿದ.

ಏನು ಹಾಳು ಪ್ರಪಂಚವೋ! ಅವನ ಹೆಂಡತಿ ಅಲ್ಲಿ ಸತ್ತು ಬಿದ್ದಿದ್ದರೆ, ಇಲ್ಲಿ ಏನು ಇತರರೊಡನೆ, ಹರಟೆ ಕೊಚ್ಚುತ್ತಾ ಇದ್ದಾನೆ ಭೂಪ. ಹೆಂಡತಿ ಎಂದರೆ ಅದೇನೋ ಒಂದು ಕುರಿ ಎಂದು ಭಾವಿಸಿರಬಹುದು ಆ ಶ್ರೀಮಂತ. ಅವನಿಗೇನು ದಿನ ಒಂದಕ್ಕೆ ನಾಲ್ಕು ಹೆಂಡತಿಗಳನ್ನು ಬರೇ ಇಪ್ಪತ್ತು ರೂಪಾಯಿಗಳಿಗೆ ಮುಂಬಯಿ ಪಾಪಕೂಪದಿಂದ ಕೊಂಡುಕೊಳ್ಳಬಲ್ಲ. ಬೇಕಾದರೆ ಹೆಂಡತಿ ಎಂದರೆ ಅವನ ದೃಷ್ಟಿಕೋನದಲ್ಲಿ ಅದಕ್ಕಿಂತ ಹೆಚ್ಚಿರಲಿಲ್ಲ.

ಹತ್ತು ದಿವಸಗಳ ಮೇಲೆ ಆ ಶ್ರೀಮಂತ ನನಗೆ ಭೇಟಿಯಾದ.

'ಏನು ಸಾಹುಕಾರರೇ ಚೆನ್ನಾಗಿದ್ದೀರೋ? ಏನು ಅಪರೂಪವಾಗಿದ್ದೀರಲ್ಲ!'

'ಬಿಡುವಿಲ್ಲಯ್ಯಾ ರಾಜು! ಮನೆಯವರೆಲ್ಲಾ ಊರಿಗೆ ಹೋಗಿದ್ದಾರೆ. ಎರಡು ಮೂರು ದಿವಸವಾಯಿತ ಮಂಡಿಯಲ್ಲಿ ಕೆಲಸ ಬಹಳ!'

'ಯಾಕೆ ಊರಿಗೆ ಹೋದರು, ಈ ಸಮಯದಲ್ಲಿ?-!' ನಾನು ಸ್ವಲ್ಪ ಆ ದಿಂದ ಕೇಳಿದೆ.

'ಗೊತ್ತಿಲ್ಲವೇನಯಾ? ನ ಮದುವೆ ಏರ್ಪಾಡಿಗೆ!'

ಸರಿ! ಆ ಶ್ರೀಮಂತನ ನಾಲ್ಕನೆಯ ಮದುವೆಗಾಗಿ, ವಧುವಿನ ಅನ್ವೇಷಣೆ ಹೋಗಿದ್ದರಾಗಲೇ! ಹೆಂಡತಿಯು ಸತ್ತು, ಇನ್ನೂ ಅವಳ ಮಾಂಸಖಂ ಗಳು ಎಲುಬಿನಿಂದ ಬಿಡುಗಡೆ ಹೊ ದಿರಲಾರದು, ಆಗಲೇ ಮದುವೆ!

ಹತ್ತು ದಿವಸಗಳ ಮೇಲೆ ಆ ಸಾಹು ಕಾರ ಪುನಃ ಭೇಟಿಯಾದ.

'ಏನೋ ರಾಜು! ಎಲ್ಲೆಲ್ಲಾ ಹುಡು ಕಿದನಲ್ಲೋ ನಿನ್ನ. ಸರಿ, ಮದುವೆ ಬಂದು ಬಿಡಪ್ಪ ಬರುವ ತಿಂಗಳ ಒಂಭತ್ತನೆಯ ತಾರೀಕಿಗೆ ಮದುವೆ... ಹುಡುಗಿ ಚೆನ್ನಾಗಿದ್ದಳಂತೆಯೋ,....ಹದಿ ನೇಳು ವರ್ಷವಂತೆ.... ಹಿ! ಹಿ! ಹಿ! ಆ ಸಾಹುಕಾರ ಹಲ್ಲು ಕಿರಿಯುತ್ತಾ ಹೊರಟು ಹೋದ.

(೩೦ನೇ ಪುಟ ನೋಡಿರಿ)




FOR
SCIENTIFIC EYE GLASSES
VISIT
E. S. OPTICAL CO.,
NEW MARKET FRONTAGE. BANGALORE CITY.
OUR DARK ROOM TEST PERFECTION BIFOCALS
AND SHAPED GLASSES FOR WRIST WATCHES
*A SPECIALITY.*

# ವಾರದ ಭವಿಷ್ಯ

ತಾರೀಕು ೨೧-೭-೧೯೪೦ರಿಂದ ೨೭-೭-೧೯೪೦ರ ವರೆಗೆ.

ಜ್ಯೋತಿಷ್ಕರು.
ಬಾಲಭಾಸ್ಕರರು.

## ಮೇಷ:

ಮಿತ್ರರಂತೆ ಸೋಗುಹಾಕಿಕೊಂಡು ನಿಮ್ಮಲ್ಲಿನ ಗುಟ್ಟನ್ನು ರಟ್ಟುಮಾಡಲು ಬಯಸುವರು ನಿಮ್ಮ ವಿರೋಧೀ ಜನರು. ಕೈಯ್ಯಲ್ಲಿನ ಧನವು ಖರ್ಚಾಗಿ ಹೊಸತಾಗಿ ಸಾಲಮಾಡಬೇಕಾಗುವ ಪ್ರಸಂಗವೊದಗುವುದರಿಂದ ಮನಸ್ಸಿನ ಸ್ವಾಸ್ಥತೆಯು ಉಳಿಯಲಾರದು. ಕಜ್ಜಿ ಹಣ್ಣು ವಗೈರೆಗಳಿಂದ ದೇಹ ಪೀಡೆಯೂ ತಾಪಜ್ವರ ಉದರ ರೋಗಗಳೂ ಆಗಾಗ ಪೀಡಿಸುತ್ತಲೇ ಇರುವವು. ಆದರೂ ಆತ್ಮೀಯರ ಮತ್ತು ಕುಟುಂಬಿಕರ ಸಹಾನುಭೂತಿಯು ತುಂಬಾ ಇರುವುದು. ನೌಕರಿ, ವ್ಯಾಪಾರ ವಹಿವಾಟುಗಳ ಮೂಲಕ ತಕ್ಕಮಟ್ಟಿನ ಧನ ಸಂಪಾದಿಸುವಿರಿ. ದೇಶಾಟನದಿಂದಲೂ ಸಮೀಪ ಬಂಧುಗಳ ವಿಯೋಗದಿಂದಲೂ ಮನೋವೇದನೆಯು ಹೆಚ್ಚಲಿದೆ. ತಾ. ೨೧, ೨೨, ೨೩ ಮತ್ತು ೨೭ ಈ ದಿನಗಳಲ್ಲಿ ಇಷ್ಟಸಿದ್ಧಿಯಿಂದಲೂ ಮಿತ್ರರ ಸಮಾಗಮದಿಂದಲೂ ಧನ ಲಾಭದಿಂದಲೂ ಸಂತುಷ್ಟರಾಗುವಿರಿ. ಬರುವ ವಾರದಲ್ಲಿ ಇಂದಿಗಿಂತ ಸ್ವಲ್ಪ ಕಷ್ಟವೇ ಹೆಚ್ಚಲಿದೆ.

## ವೃಷಭ:

ಉದ್ಯೋಗ ಸಾಹಸ ಧೈರ್ಯ ಬುದ್ಧಿ ಶಕ್ತಿ ಪರಾಕ್ರಮ ಇವು ಆರೂ ಮನುಷ್ಯಸಾಧೀನವಾದರೂ ದೈವಾಯತ್ತವಾದುವುಗಳನೇದು ಇದ್ದೇ ಇರುವುದು. ಸದ್ಯ ನೀವು ಪುರುಷಸಾಧ್ಯವಾದ ಷಡುಪಾಯಗಳನ್ನು ಉಪಯೋಗಿಸಲು ಶಕ್ತರಿರುವಿರಿ. ಉಪಯೋಗಿಸುವಿರಿ. ಆದರೆ ದೈವವೇನೋ ನಿಮಗೆ ಪ್ರತಿಕೂಲವಾಗಿಯೇ ನಿಂತಿರುವುದು. ಆದಕಾರಣ ಹೆಚ್ಚಿನ ಕಾರ್ಯಗಳಲ್ಲಿ ಕೈಗೆ ಬಂದ ತುತ್ತು ಬಾಯಿಗೆ ಸಿಗದು ಎಂಬಂತಾಗುವುದು. ಮನೋರೋಗವು ಹೆಚ್ಚಾಗಿ ಬಾಧಿಸುತ್ತಿದ್ದರೂ ಮೇಲಿಂದ ಮೇಲೆ ಶೋಕನಿಕರಗಳು ನಿಮ್ಮನ್ನು ಬಂದು ಸೇರಲಿವೆ. ಬಹು ಮುಖ್ಯವಾದ ಖರ್ಚುವೆಚ್ಚಗಳು ನಿಮ್ಮ ಬೆಂಬಿಡದಿದ್ದರೂ ಶ್ರಮವಹಿಸಿ ದುಡಿಯುತಕ್ಕ ನಿಮಗೆ ಆರ್ಥಿಕ ಅಡಚಣೆಯುಂಟಾಗದು. ಸಮಯದ ಬೆಲೆಯನ್ನರಿತ ನೀವು ವೃಥಾ ಕಾಲಯಾಪನೆ ಮಾಡಲಾರಿರಿ. ತಾ. ೨೧, ೨೭ ಈ ಎರಡು ದಿನಗಳು ಅನಾರೋಗ್ಯ ಮತ್ತು ಅತಿವ್ಯಯಕಾರಿಗಳಾಗಿವೆ. ಮುಂದಿನ ವಾರ ಇಂದಿನಷ್ಟು ಒಳ್ಳಿತಾಗಿರದು.


ವಿದ್ಯೆದ ತಾದಿ

ಹಳ್ಳಿಯ ಟೊಳ್ಳು ಜೀವನವನ್ನು ಮನಸ್ಸಿಗೆ ನಾಟುವಂತೆ ಚಿತ್ರಿಸಿದ

**ತುಳು ನಾಟಕ**

ಬೆಲೆ ೦-೬-೦

**ತುಳುನಾಡ್ ಪ್ರೆಸ್**

**ಉಡುಪಿ**


## ಮಿಥುನ:

ತಾನು ಸಾಯಬೇಕು ಸ್ವರ್ಗ ಪಡೆಯಬೇಕು ಎಂಬೀ ಗಾದೆಯನ್ನು ನೀವು ಕೇಳಿರುವಿರಷ್ಟೆ. ಸದ್ಯ ಇದೇ ಪರಿಸ್ಥಿತಿಯು ನಿಮಗೆ ಬಂದೊದಗಿರುವುದು. ಯಾವ ಅಲ್ಪಕಾರ್ಯವೇ ಆಗಿರಲಿ, ನೀವಾಗಿ ಮುಂದಾದರೇನೇ ನಿಮ್ಮಿಷ್ಟದಂತೆ ಫಲಪ್ರಾಪ್ತಿಯಾಗಲು ಸಂಶಯವಿಲ್ಲ. ಆದರೆ ಅದೊಂದು ಮನಶ್ಚಾಂಚಲ್ಯವೂ ಔದಾಸೀನ್ಯವೂ ನಿಮ್ಮ ಕಾರ್ಯಗಳಿಗೆ ವಿಘ್ನರೂಪವಾಗಿರುವುದು. ಯಾವುದೇ ಸದುದ್ಯೋಗವನ್ನು ಕೈಗೊಳ್ಳಲು ಈ ಕಾಲವು ತುಂಬಾ ಅನುಕೂಲವಾಗಿದೆಯೆನ್ನಲಡ್ಡಿಯಿಲ್ಲ. ದೈವಕೃಪೆಯೂ ಗುರುಹಿರಿಯರ ಅನುಗ್ರಹವೂ ಸಾಕಷ್ಟಿರುವುದರಿಂದ ನೌಕರಿ ಭಾಗದಲ್ಲಾಗಲಿ ವ್ಯಾಪಾರೀ ವೃತ್ತಿಯಲ್ಲಾಗಲಿ ಕೆಡುಕೆನಿಸದು. ಶ್ರೇಯಃಕಾಂಕ್ಷಿಗಳು ರಾಜಕೀಯ ವಿಚಾರದಲ್ಲಿ ಕೈಯಿಕ್ಕದಿರುವುದೊಳ್ಳಿತು. ತಾ. ೨೧. ೨೨. ೨೩. ಈ ಮೂರು ದಿನಗಳಲ್ಲಿ ಉಷ್ಣ ಪಿತ್ಥ ಸಂಬಂಧದ ವಿಕಾರಗಳು ತಲೆದೋರಬಹುದು. ಮುಂದಿನ ವಾರ ತಕ್ಕ ಮಟ್ಟಿನ ಶ್ರೇಯಃಕಾರಿಯಾಗಿದೆ.

## ಕರ್ಕಾಟಕ:

“ಸಂಘೇ ಶಕ್ತಿಃ ಕಲೌ ಯುಗೇ” ಪ್ರಾಚೀನ ಯುಗಗಳಲ್ಲಿ ಒಬ್ಬಂಟಿಗರಾಗಿಯೇ ಮಹತ್ಕಾರ್ಯವನ್ನು ಸಾಧಿಸಲು ಶಕ್ತರಾಗಿದ್ದರೂ ಈ ಕಲಿಯುಗ

ದಲ್ಲಿ ಓರ್ವನಿಂದ ಅದಾವ ಕೆಲಸವನ್ನೂ ಸಾಧಿಸಲು ಶಕ್ಯವಿಲ್ಲ. ಆದ್ದರಿಂದಲೇ ಈ ಕಾಲದಲ್ಲಿ ಸಂಘಶಕ್ತಿಯು ಮುಖ್ಯವಾದುದೆಂದು ಹಿರಿಯರನ್ನುವರು. ಪ್ರಕೃತದ ಗ್ರಹಮಾನರೀತ್ಯಾ ಕುಟುಂಬಿಕರಾಗಲಿ ಬಂಧುವರ್ಗದವರಾಗಲಿ ಮಿತ್ರಪಕ್ಷದವರಾಗಲಿ ಯಾರೊಬ್ಬರೂ ನಿಮ್ಮ ಸಹಾಯಕ್ಕಿಲ್ಲವು. ವಿಧಿಯೂ ಬಹಳ ದುರ್ಬಲವಾಗಿರುವುದು, ಆದ ಕಾರಣ ಯಾವೊಂದು ಕ್ಷುಲ್ಲಕ ಕಾರ್ಯವನ್ನೆಸಗಲೂ ನಿಮ್ಮಿಂದ ಶಕ್ತಿ ಸಾಲದು. ದೇಹದಲ್ಲಿ ದಿನೇ ದಿನೇ ಆಯಾಸವೂ ಆಲಸ್ಯವೂ ಹೆಚ್ಚುತ್ತಿರುವಂತೆ ಭಾಸವಾಗುವುದು. ಧನಾಭಾವದಿಂದ ಮುಂದೇನು ಮಾಡಬೇಕೆಂದು ಹೊಳೆಯದ ನಿಮಗೆ ವಾರದ ಆದ್ಯಂತ ದಿನಗಳು ಕಿಂಚಿನ್ಮನಶ್ಶಾಂತಿದಾಯಕಗಳಾಗಿವೆ. ಬರುವ ವಾರದಲ್ಲಿ ಕೊಂಚ ಸುಧಾರಣೆ ಹೊಂದತಕ್ಕ ಚಿಹ್ನೆಗಳಿವೆ.

## ಸಿಂಹ:

ನೌಕರಿ ಉದ್ಯಮಾದಿಗಳಲ್ಲೂ ವ್ಯಾಪಾರಾದಿಗಳಲ್ಲೂ ನೀವೆಣಿಸಿದಷ್ಟು ಪ್ರತಿಫಲ ಸಿಗದೆ ಮುನಾಫೆಗಿಂತಲೂ ಖರ್ಚೇ ಅಧಿಕವಾಗಿ ಸಂಭವಿಸುವಂತಿದೆ. ಜನ್ಮಪತಿಯಾದ ರವಿಯೂ ಧನಲಾಭಪನಾದ ಬುಧನೂ ಭಾಗ್ಯಪತಿಯಾದ ಕುಜನೂ ಒಟ್ಟಿಗೆಲ್ಲರೂ ವ್ಯಯಸ್ಥಾನವನ್ನು ಹೊಂದಿರೋಣದರಿಂದ ದೇಹದಲ್ಲಿ ದೌರ್ಬಲ್ಯವೂ ವಿಶೇಷವಾದ ಹಣದ ಅಡಚಣೆಯೂ ಪ್ರಾಪ್ತವಾಗುವಂತಿದ್ದರೂ ಭಾಗ್ಯಸ್ಥ ಗುರುವಿನ ಮತ್ತು ಲಾಭಸ್ಥ ಶುಕ್ರನ ಕೃಪೆಯಿಂದಾಗಿ ಅದರಿಂದ ಪಾರಾಗುವಿರಿ. ಮಿತ್ರರ ಸಹಾಯದಿಂದಲೂ ಸ್ವಶಕ್ತಿಯಿಂದಲೂ ಜನತೆಯಲ್ಲಿ ಪೂಜ್ಯತೆಯನ್ನು ಹೊಂದುವಿರಿ. ಸ್ತ್ರೀ ನಿಮಿತ್ತವಾಗಿ ಕಲಹವೂ ಕೆಲವೊಂದು ವಿಭಾಗದಲ್ಲಿ ಶತ್ರುಗಳಿಂದ ಪರಾಜಯವೂ ಪ್ರಾಪ್ತವಾಗಲಿದೆಯಾದ ಕಾರಣ ತಾ. ೨೪ರಿಂದ ೨೭ರ ವರೆಗಿನ ದಿನಗಳಲ್ಲಿ ಬಹಳ ಜಾಗರೂಕತೆಯಿಂದಿರಬೇಕಾಗುವುದು. ಮೇಲಿನ ವಾರವು ಇಂದಿಗಿಂತ ಉತ್ತಮವಿದ್ದೀತು.

## ಕನ್ಯಾ:

ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ ಯತ್ನೇ ಕೃತೇ ಯದಿ ನ ಸಿದ್ಧ್ಯತಿ ಕೋತ್ರ ದೋಷಃ- ಎಂದು ಭರ್ತೃಹರಿಯು ಹೇಳಿದಂತೆ ನಮ್ಮ ಅದೃಷ್ಟವೇ ಚೆನ್ನಾಗಿಲ್ಲ. ನಾವೇನು

ಜಾಗ್ರತೆ ! ಜಾಗ್ರತೆ !

ದೇಶವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ವಿಶ್ವಪ್ರಶಂಸನೀಯವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವದನ್ನು ಕಂಡು, ಈ ಹೆಸರಿನಲ್ಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಡ್ರೆಸನ್ನು ನೋಡಿ ತೆಗೆದುಕೊಳ್ಳಿರಿ.

**ನಕಲಿ ಮಾಲಿಗೆ ಮೋಸಹೋಗಬೇಡಿರಿ!**

# ದ್ರಾಕ್ಷಾಮೃತ

**ಪಂಡಿತ ಜವಾಹಿರಲಾಲ ನೆಹರೂ ಬಂದಗ ಹುಬ್ಬಳ್ಳಿ ವಸ್ತು ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ, ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ**

ಒಂದೇ ಸವನಾಗಿ ೫೦ ವರ್ಷದ ಅನುಭವದಿಂದ, ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ದೇಶೀ ಯಂತ್ರಗಳ ಮೂಲಕ ತಯಾರಾಗುವ,

**ಶಕ್ತಿಯ ಮೇಲೆ ಮೊದಲನೇ ತರದ ಟಾನಿಕ್**

ಇದರ ಸೇವನೆಯಿಂದ ರಕ್ತಶುದ್ಧಿಯಾಗುವುದು, ಶೌಚ ಸಾಫವಾಗಿ ಪಚನಕ್ರಿಯೆ ಬೆಳೆಯುವುದು, ಕಣ್ಣು ಕೈ ಕಾಲು ಉರಿಯೋಣ ಮೊದಲಾದ ಉಷ್ಣ ಮತ್ತು ಪಿತ್ತವಿಕಾರಗಳು ನಾಶವಾಗುವವು. ಸ್ತ್ರೀಯರಿಗೆ ಮುಟ್ಟುದೋಷದಿಂದಾದ ಸರ್ವ ರೋಗ ನಿವಾರಣೆಯಾಗಿ ಸಂತತಿ ಧಾರಕವಾಗುವದು. ಅಂತೂ ಇದು ಬಾಲ-ವೃದ್ಧ-ಸ್ತ್ರೀ ಪುರುಷರಿಗೆ ಅತಿ ಉಪಯುಕ್ತವಾಗಿದೆ.

**ಕ್ರಯ ೧ ಬಾಟ್ಲಿ ರೂ. ೧-೪-೦**

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೋ, ಪೋಷ್ಟ್- ನಿಪ್ಪಾಣಿ, ಜಿಲ್ಲಾ ಬೆಳಗಾಂವ.
ಮಂಗಳೂರು ಸ್ಟೋಕಿಸ್ಟರು:- ಕೆನರಾ ಮೆಡಿಕಲ್ ಸಪ್ಲೈಸ್ ಲಿಮಿಟೆಡ್
ಉಡುಪಿ ಸ್ಟೋಕಿಸ್ಟರು:- ಪೈ ಫಾರ್ಮಸಿ, ಉಡುಪಿ. ಬೆಂಗಳೂರು:-ಸೀತಾರಾಮ ಪೈ ಬ್ರದರ್.
ಮೈಸೂರು:- ಟಿ. ಸಿ. ನಟರಾಜ, ಮತ್ತು ಮೋಡರ್ನ್ ಫಾರ್ಮಸಿ.

ಮಾಡಲಿ ಎಂದು ತಲೆಗೆ ಕೈಹಿಡಿದು ಕುಳಿತುಕೊಳ್ಳದೆ ಕಾರ್ಯಾಸಕ್ತರಾಗಿರಿ. ಇಂದಲ್ಲವಾದರೆ ನಾಳೆಯಾದರೂ ನಿಮ್ಮ ಮನದಾಕಾಂಕ್ಷೆಯು ಸಫಲವಾಗದಿರದು. ಕೆಲಸಮಾಡತಕ್ಕ ಉತ್ಸಾಹವೂ ಶಕ್ತಿಯೂ ಸಾಕಷ್ಟು ಬುದ್ಧಿ ಕೌಶಲವೂ ನಿಮಗಿರುವುದು. ಲಾಭಸ್ಥಾನವು ಗ್ರಹರಿಂದ ತುಂಬಿಕೊಂಡಿರುವುದರಿಂದ ಹಣದ ತೊಂದರೆಯೇನೂ ಉಂಟಾಗದು. ಕೋರ್ಟು ವಗೈರೆಗಳ ಕಾರ್ಯಗಳಲ್ಲಿ ಯಶಸ್ಸೂ ಲಾಭವೂ ದೊರೆಯಲಿದೆ. ಆಕಸ್ಮಿಕ ಪ್ರವಾಸದಿಂದ ಕೆಲವೊಂದು ಕಷ್ಟನಷ್ಟಗಳಿಗೆ ಗುರಿಯಾಗುವ ಸಂಭವವಿದೆ. ಸದ್ಯಕ್ಕೆ ಮಿತಭಾಷಿತ್ವವು ಶ್ರೇಯಸ್ಕರವಿದೆ. ತಾ. ೨೧. ೨೭. ಪ್ರತಿಕೂಲ. ಬರುವ ವಾರ ಕೊಂಚ ಹೀನಸ್ಥಿತಿಯಲ್ಲಿದೆ.

## ತುಲಾ:—

ಸದ್ಯ ನಿಮಗೆ ಯಾವ ತಂಟೆ ತಕರಾರುಗಳಿಲ್ಲದಿದ್ದರೂ ಶನೈಶ್ಚರನ ಕಾಟ ಬೇರೆ ತಪ್ಪುವಂತಿಲ್ಲ. ಒಂದಲ್ಲೊಂದು ಕಿರುಕುಳವು ನಿಮ್ಮ ಶರೀರಕ್ಕೆ ಸದಾ ಇದ್ದೇ ಇರುವುದು. ಅನಿರೀಕ್ಷಿತವಾಗಿ ಅನಿಷ್ಟಗಳೂ ಅಟನವೂ ಪ್ರಾಪ್ತವಾಗಬಹುದು. ಕೆಲವೊಂದು ವೇಳೆ ಸ್ವೇಷ್ಟಸಿದ್ಧಿಗೋಸ್ಕರ ಯಾವ ನಿಂದಿತ ಕರ್ಮವನ್ನು ಮಾಡಲುಕೂಡ ನಿಮ್ಮ ಮನಸ್ಸು ಹಿಂಜರಿಯದು. ರಿಪು ದಮನದಿಂದಲೂ ಕಾರ್ಯ ಸಿದ್ಧಿಯಿಂದಲೂ ಪ್ರಸನ್ನಚಿತ್ತರಾಗುವಿರಿ. ನೌಕರಿವಾಣಿಜ್ಯ ಮೊದಲಾದವುಗಳಲ್ಲಿ ಇಚ್ಛಾಧಿಕವಾಗಿ ಫಲಪ್ರಾಪ್ತಿಯಾಗುವುದರಿಂದ ಆರ್ಥಿಕ ಸಂಪತ್ತು ಬಹ್ವಂಶ ಸುಧಾರಿತವಾಗುವುದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನೀವು ಗೃಹಸುಖವನ್ನು ಅನುಭವಿಸಲಿರುವಿರಿ. ತಾ. ೨೪ ರಿಂದ ವಾರಾಂತ್ಯದ ವರೆಗಿನ ದಿನಗಳು ಉತ್ತಮವಿರುವುದರಿಂದ ದೇಹಾರೋಗ್ಯ, ಧನ ವಸನಾದಿಗಳ ಲಾಭ ಸ್ಥಾನಮಾನಗಳೂ ಲಭಿಸಲಿವೆ. ಬರುವ ವಾರ ಇಂದಿನಷ್ಟು ಅನುಕೂಲವಾಗಿರದು.

## ವೃಶ್ಚಿಕ:—

"ಕ್ಲೇಶ ಲಬ್ಧ ಮಧಿಕಾದರದಂ ತು" ಕಷ್ಟಪಟ್ಟು ಬೆವರು ಸುರಿಸಿ ದುಡಿದ ವಸ್ತುಗಳಲ್ಲಿ ನರನಿಗೆ ಹೆಚ್ಚಿನ ಆದರಾಭಿಮಾನಗಳು ಇರತಕ್ಕುದು ಸ್ವಾಭಾವಿಕವೇ. ಈ ತೆರನಾದ ಧನಾದಿಗಳು ಅಪವ್ಯಯವಾದರೆ ಯಾರಿಗೆ ತಾನೆ ಸಂಕಟವಾಗಲಿಕ್ಕಿಲ್ಲ. ನೀವೀವಾರದಲ್ಲಿ ಇಂತಹ ಸಂಕಟಗಳಿಗೆ ಸಿಲುಕಿ ಹೆಚ್ಚಿನ ಮನೋವ್ಯಥೆಯನ್ನು ಹೊಂದುವಿರಿ. ಈ ಮಾನಸಿಕ ಅಶಾಂತಿಯು ಪರಿಣಾಮವಾಗಿ ಶರೀರದಲ್ಲಿ ಅಶಕ್ತಿಯೂ ಮುಖದಲ್ಲಿ ಕಾಂತಿವಿಹೀನತೆಯೂ ಉಂಟಾಗುವುದು. ಒಂದೆಡೆಯಲ್ಲಿ ಹಗೆಯುವರಿಂದ ನಾನಾ ತರದ ಕಷ್ಟ ನಷ್ಟಗಳು ಒದಗಲಿವೆ. ಗುರುಹಿರಿಯರಲ್ಲಿ ಗೌರವಭಾವವನ್ನಿಡದಿರುವದರಿಂದ ಅವರ ಆಗ್ರಹಕ್ಕೂ ಗುರಿಯಾಗಲಿರುವಿರಿ. ಆದರೂ ತಾ. ೨೧, ೨೭ ಈ ಎರಡು ದಿನಗಳ ಮಟ್ಟಿಗೆ ಧನಲಾಭವೂ ಗೃಹಸುಖವೂ ತೃಪ್ತಿಕರವಾಗಿರುವುದರಿಂದ ಸ್ವಲ್ಪ ಮಟ್ಟಿನ ನೆಮ್ಮದಿ ಹೊಂದುವಿರಿ- ಮುಂದಿನವಾರ ಕೊಂಚ ಸುಧಾರಿಸುವಿರಿ.

## ಧನು:—

ಪಂಚಮಸ್ಥಾನದಲ್ಲಿ ನೀಚ ಶನಿಯೂ ಅಷ್ಟಮದಲ್ಲಿ ನೀಚ ಕುಜನೂ ಮತ್ತು ರವಿಯೂ ಇರೋಣದರಿಂದ ಆತ್ಮೀಯರಲ್ಲಿ ಮನಸ್ತಾಪ, ವಿರೋಧಿಗಳಿಂದ ಧನ ಮಾನಗಳಿಗೆ ಹಾನಿ, ಸೋದರಜಗಳ, ಸ್ತ್ರೀಜನರಿಂದ ವಿರೋಧ, ಆಕಸ್ಮಿಕ ಅಪಘಾತಾದಿ ನಾನಾ ಅನರ್ಥಗಳು ಸಂಭವಿಸುವಂತಿವೆಯಾದರೂ ಸ್ವರಾಶಿಪತಿಯಾದ ಗುರುವಿನ ವಿಶೇಷ


50 ವರ್ಷಗಳಿಂದ ಜಗತ್ಪ್ರಸಿದ್ಧ ಶಕ್ತಿವರ್ಧಕ:—

# ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನ ಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯವನ್ನು ಧಾರಾಳವಾಗಿ ವೃದ್ಧಿಗೊಳಿಸಿ, ದೇಹಕ್ಕೆ ನೂತನ ಶಕ್ತಿ, ಸ್ಫೂರ್ತಿ ಆನಂದ, ಉತ್ಸಾಹಗಳನ್ನು ಉಂಟುಮಾಡುವುವು.

ಡಬ್ಬಿ 1ರ ಕ್ರಯ: ರೂ. 1.

# ರಮಣವಿಲಾಸಿನಿ ವಟಿಕ

ಕಾಮಶಕ್ತಿ ಹೆಚ್ಚಿಸಿ ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟುಮಾಡಲು ನಿಶ್ಚಿತ ಮತ್ತು ನಿರಪಾಯಕರ ಔಷಧಿ.

ಡಬ್ಬಿ 1ರ ಕ್ರಯ: ರೂ.1.

ಮದನಮಂಜರಿ ಫಾರ್ಮಸಿ, 184 ಚೈನಾ ಬಜಾರ್, ಮದ್ರಾಸು.
ಬೆಂಗಳೂರು:— ಆರ್ಯನ್ ಮೆಡಿಕಲ್ ಸ್ಟೋರ್ಸ್, 72 ಚಿಕ್ಕಪೇಟೆ.
ಮೈಸೂರು ಏಜೆಂಟರು: ಟಿ. ಸಿ. ನಟರಾಜ & ಕೊ.

ದೃಷ್ಟಿಯು ನಿಮ್ಮ ಮೇಲಿರುವುದರಿಂದ ದೇಹಕಣ್ಣಿನವರೆಗೆ ಅಪಾಯವನ್ನು ಸಂಭವಿಸದು. ಮಾತ್ರವಲ್ಲ ನೆಲ್ಲಿಂದ ಆಪತ್ತುಗಳು ಬಹುತೇಕ ಶಾಂತರೀತಿಗೆ ಬರಲಿವೆ. ವಿದ್ಯಾಬುದ್ಧಿಗಳಲ್ಲಿ ಸಾಹಸ್ಯ ಶಕ್ತರಿರುವುದರಿಂದ ಮಿತವ್ಯಯಿಗಳಾಗಿ ಉತ್ಪತ್ತಿಗೆ ತಕ್ಕುದಾಗಿಯೇ ಖರ್ಚು ಮಾಡಲೆಳಸುವಿರಿ. ತಾ. ೨೨. ೨೩. ಹೊರತಾಗಿ ಇತರ ದಿನಗಳು ಶುಭಕಾರಿಗಳಾಗಿಲ್ಲ. ಬರುವವಾರದಲ್ಲಿ ಇಂದಿಗಿಂತ ಉತ್ತಮ ದಿನಗಳನ್ನು ಕಾಣಲಿರುವಿರಿ

## ಮಕರ:

ಮಳೆಗಾಲದ ಅಮಾವಾಸ್ಯೆಯ ಕಾರಿರುಳಲ್ಲಿ ದಾರಿತಪ್ಪಿ ಮಧ್ಯಾಟವಿಯಲ್ಲಿ ಸಿಕ್ಕಿಬಿದ್ದ ಪಾಂಥನಂತಾಗಿದೆ ನಿಮ್ಮೀ ಕಾಲದ ಅವಸ್ಥೆ. ಮನದಲ್ಲಿ ನಿರಾಶೆಯ ಕಾರ್ಮೋಡಗಳು ಸುಳಿದಾಡಹತ್ತಿವೆ. ಅಧೀರವಾದ ನಿಮ್ಮ ಮನಸ್ಸು ಯಾವ ಕಾರ್ಯವನ್ನೂ ಸತತವಾಗಿ ಮುಂದರಿಸಲು ಬಿಡಲೊಲ್ಲದು. ಬಂಧುವರ್ಗದವರಿಂದ ಸಹಾಯದ ಬದಲು ಅನಿಷ್ಟಾಪಾಯಗಳೇ ಹೆಚ್ಚುತ್ತಿವೆ. ದೇಹಾಲಸ್ಯ ಕುಟುಂಬ ಕಲಹ ಪ್ರಿಯಜನರ ವಿಯೋಗ ಪ್ರವಾಸಾದಿಗಳಿಂದ ಕ್ಷಣ ಕ್ಷಣಕ್ಕೂ ದುಃಖಪರಂಪರೆಗಳು ಹೆಚ್ಚುತ್ತಾ ಬರುವವು. ಉತ್ಪತ್ತಿಯು ಇನಿತೂ ಇಲ್ಲದೆ ನಾನಾ ರೀತಿಯ ಖರ್ಚುವೆಚ್ಚಗಳು ಸಂಭವಿಸುತ್ತಿರುವುದರಿಂದ ಹಣಕ್ಕಾಗಿ ಬಗೆಬಗೆಯ ಪರಿತಾಪ ಪಡುವಿರಿ. ಹಗೆಯವರು ದಶದಿಕ್ಕುಗಳಿಂದಲೂ ನಿಮ್ಮನ್ನು ಸರ್ವಾತ್ಮನಾಪೀಡಿಸಲು ಬದ್ಧಕಂಕಣರಾಗಿರುವಂತಿದೆ. ತಾ. ೨೨. ೨೩. ೨೬. ಈ ದಿನಗಳು ಅತೀವ ದುಷ್ಟವಿರುವುದರಿಂದ ಎಷ್ಟು ಜಾಗರೂಕರಾಗಿದ್ದರೂ ಅದು ಅಲ್ಪವೆಂದೇ ಹೇಳಬಹುದು. ಮುಂದಿನ ವಾರದಲ್ಲೂ ಶುಭ ಚಿಹ್ನೆಗಳಿಲ್ಲ.

## ಕುಂಭ:

ಅಪ್ಪುದಂತೆ ಕೊನೆಗೊಂಡಲಿದ್ದ ಕಾರ್ಯಗಳೂ ಕೆಲವನ್ನು ದೈವತಂತ್ರದಿಂದ ವಿಪರೀತವಾಗುವವು. ಈ ಭಾಗದಲ್ಲಿ ನಿಮ್ಮ ಆಲಸ್ಯವಾ ಅಜಾಗ್ರತೆಯಾಗಲಿ ಕಾರಣವಾಗುವಾತಿಲ್ಲ. ಸಂಕಲ್ಪಸಿದ್ಧಿಗೋಸುಗ ಸ್ಥಳಾಂತರಕ್ಕೆ ಹೋಗಬೇಕಾಗಿಯೂ ಬರುವುದು. ಕಾರ್ಯವಿಜಯದಿಂದಲೂ, ದೇಹಾರೋಗ್ಯದಿಂದಲೂ, ಪ್ರತಿಸ್ಪರ್ಧಿಗಳ ಮರ್ದನದಿಂದಲೂ ಉಂಟಾದ ವಿಜಯದುಬ್ಬರದಿಂದ ಸದಾ ಹರ್ಷಚಿತ್ತರಾಗುವಿರಿ. ನೌಕರಿಗಳು ಅಧಿಕಾರಿಗಳ ಕೃಪೆಗೆ ಪಾತ್ರರಾಗಿ ಹೆಚ್ಚಿನ ಸ್ಥಾನವನ್ನು ಹೊಂದುವರು. ಬಹುಮುಖದಿಂದ ಧನಾಗಮವಾಗುವುದರಿಂದ ಹಣದ ಚಿಂತೆಯು ಈಷತ್ತೂ ಇರದು. ನೂತನ ಕಾರ್ಯಾರಂಭಗಳಿಗೆ ತಾ. ೨೨, ೨೩, ೨೬ ಇವು ಅತ್ಯುತ್ತಮಗಳಾಗಿವೆ. ಮುಂದಿನ ವಾರದಲ್ಲಿ ಇನ್ನೂ ಉತ್ತಮವಿದೆಯೆಂದರೂ ತಪ್ಪಾಗದು.

## ಮೀನ:

ನೆನೆಸಿದ ಕಾರ್ಯವನ್ನು ಕಾರ್ಯರೂಪಕ್ಕೆ ತರಲು ಯತ್ನಿಸುವಿರಿ. ಆವು ಕೆಲವು ಆರ್ಥಿಕ ದುರವಸ್ಥೆಯಿಂದಲೂ ಇನ್ನೂ ಕೆಲವು ಶತ್ರುಗಳ ವಿಘ್ನಗಳಿಂದಲೂ ಕೊನೆಗಾಣದೆ ಹೋಗಬಹುದು. ಅಂತೂ ನಿಮ್ಮ ಕಷ್ಟಕ್ಕೆ ತಕ್ಕ ಫಲವು ಸಿಕ್ಕಿಯೇ ತೀರುವುದು. ಮಿತ್ರವರ್ಗದವರಿಂದ ಕೂಡಿ ಕೆಲ ಸಮಯವನ್ನು ಸುಖದಿಂದ ಕಳೆಯುವಿರಾದರೂ ದೇಹಾಲಸ್ಯ, ಹಣದ ಅಡಚಣೆ ಸಂಸಾರದಲ್ಲಿನ ಕಾಹಿಲೆ ವಗೈರೆ ತಾಪತ್ರಯ ಮೊದಲಾದುವುಗಳು ನಿಶ್ಚಿಂತೆಯಿಂದಿರಲು ಬಿಡಲೊಲ್ಲವು. ಕಷ್ಟಜೀವಿಗಳಿಗೂ ನೌಕರಿ ಜನರಿಗೂ ಆಯಾಧಿಕವಾಗಿ ಖರ್ಚು ಸಂಭವಿಸುವದು. ರಾಜಕೀಯದಲ್ಲಿ ಪ್ರತಿಕೂಲಗಳು ಹೆಚ್ಚಲಿವೆ. ತಾ. ೨೧. ೨೪. ೨೫. ೨೬ ಈ ದಿನಗಳಲ್ಲಿ ಈಪ್ಸಿತ ವಸ್ತುಗಳ ಭೋಗದಿಂದ ಸಂತೃಪ್ತರಾಗುವಿರಿ. ಮೇಲಿನ ವಾರದಲ್ಲಿ ಕೊಂಚ ಅನಿಷ್ಟವೇ ಹೆಚ್ಚೆನ್ನಬಹುದು


ಕಮನೀಯವಾದ ಕೇಶಕಲಾಪ, ತಂಪಾದ ಮೆದುಳು, ಶುಭ್ರ ನೇತ್ರಗಳು,

— ಇವುಗಳನ್ನು ಹೊಂದಲು —



Regd. Trade Mark.

# ಆಮಲಕೀ ತೈಲ

**ಆಯುರ್ವೇದದಲ್ಲಿ ಮಂಗಲಕರವೆಂದು ಆಜ್ಞಾಪಿಸಲ್ಪಟ್ಟಿರುವ ಆಮಲಕಿಯೇ ಇದರ ಪ್ರಧಾನ ಉಪಾದಾನವಾಗಿದೆ.**

ಇದರ ಕ್ರಮವಾದ ಉಪಯೋಗವು ಕೂದಲುದುರುವುದು, ದೃಷ್ಟಿ ಮಂದವಾಗುವುದು, ಮೆದುಳಿನ ಉಷ್ಣಾಧಿಕ್ಯದಿಂದ ನಿದ್ರಾಭಂಗ ಇತ್ಯಾದಿಗಳನ್ನು ನಾಶಗೊಳಿಸುವುದು. ಇದು ಅನೇಕ ಮಹನೀಯರ ಪ್ರಶಂಸೆ ಪಡೆದಿದೆ.

**SWADESHI OUSHADHI BHANDARA** *(Regd.)*

**Kunjal, P. O. Brahmavar, S. K.**

*Stockists*— **General Supplies Limited, Udipi.**

**Navabharatha Book Depot, Udipi.**

# " ಗೆಳೆಯರ ತಂಡ "

ಸ್ಥಾಪನೆ: ೧೯೩೪

ಾರ ೯೧

ಸದಸ್ಯರು ೨೬೬

**ಅಖಿಲ ಕರ್ನಾಟಕದಲ್ಲಿ ಹಬ್ಬಿರುವ ಏಕಮಾತ್ರ ಮಿತ್ರಮಂಡಲಿ.**

ಯ ಗೆಳೆಯರೆ,

ಪುನಃ ಹಾಡಿದ ಪಲ್ಲವಿಯನ್ನೇ ಡಬೇಕಾಗಿದೆ.

ತಂಡದ ಶಾಖೆಗಳನ್ನು ತೆರೆಯುವ ಾರದಲ್ಲಿ ಹೆಚ್ಚಿನವರು ಆಸಕ್ತಿ ನ್ನು ವಹಿಸುತ್ತಿಲ್ಲವೆಂದು ಹೇಳಲು ಷಾದವಾಗುತ್ತಿದೆ.

ಉತ್ತರಾರ್ಧದ ವರ್ಗಣಿಯನ್ನು ರದ ಮಿತ್ರರು ಸಕಾಲದಲ್ಲಿ ಕಳುಹಿಸ ಡದಿರುವುದು ಇನ್ನೊಂದು ವಿಷಯ. ಯುದ್ಧಾರಂಭಿಸಿದಂದಿನಿಂದ ಪರಸ್ಪರ ಪತ್ರವ್ಯವಹಾರದ ಪ್ರಗತಿಯೂ ಪ್ರಶಂಸನೀಯವಾಗಿಲ್ಲ.

ಆದುದರಿಂದ ಎಲ್ಲರೂ ತಂಡದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಬೇಕಾಗಿ ಕೋರುತ್ತೇನೆ.

ಇತಿ ತಮ್ಮ 'ಗೆಳೆಯ

---

## ಗೆಳೆಯರ ತಂಡದ ಹೊಸ ಸದಸ್ಯರು.

೨೬೬. ಶ್ರೀ. ಡಿ. ಯನ್. ಸೀತಾರಾಮ ಶೆಟ್ಟಿ, ಓಡಿಯನ್ ಮತ್ತು ನ್ಯೂ ಥಿಯೇಟರುಗಳ ಸ್ಟೋರ್ ಸುಪರಿಂಟೆಂಡೆಂಟರು. ಸೀತಾ ಫೋನ್ ಕಂಪೆನಿ, ಬೆಂಗಳೂರು ಸಿಟಿ.

ತಮ್ಮ ಸದಸ್ಯತನದ ಸಂಖ್ಯೆ ೨೬೬.

---

೨೧೬. ಶ್ರೀ. ಬಿ. ಆರ್. ಗಫೂರ್, C/o ಸತ್ಯಶೋಧನ ಪುಸ್ತಕ ಭಂಡಾರ ಬೆಂಗಳೂರು.

ತಮ್ಮ ಉತ್ತರಾರ್ಧದ ವರ್ಗಣಿ ನಾಲ್ಕಾಣೆ ಕೈಸೇರಿದೆ

---

WHEN IN BOMBAY STAY AT

**SHARADA BHAVAN**

[HIGH CLASS VEGETARIAN BOARDING & LODGING]



Opp. G. I. P. Ry. STATION,

**MATUNGA**

BOMBAY 19.

OFFERS ALL CONVENIENCES AMIDST A HOMELY ATMOSPHERE AT MODERATE TERMS

ಬೊಂಬೈಯಲ್ಲಿ ಶ್ರೇಷ್ಠ ವರ್ಗದ ವಸತಿ ಗೃಹ

**ಶಾರದಾ ಭವನ**

ಊಟ ವಸತಿಗಳ ಸರ್ವ ಆಧುನಿಕ ಸೌಕರ್ಯಗಳಿಂದ ಕೂಡಿದ ಹೋಟೆಲ್

B. RAGHAVENDRA RAO

*PROPRIETOR.*



# ಹಿಟ್ಲರನ ಮಹಾ ಕನಸು !

## ರಷ್ಯ ಬ್ರಿಟನುಗಳನ್ನು ಮುರಿಯದಿದ್ದರೆ ಐರೋಪ್ಯ ಯಜಮಾನಿಕೆ ಅಲಭ್ಯ.

ಹೆರ್ ಹಿಟ್ಲರನು ಸಮಗ್ರ ಯುರೋಪನ್ನು ತನ್ನಾಧೀನಪಡಿಸಿಕೊಳ್ಳಲು ಯತ್ನಿಸುತ್ತಿದ್ದಾನೆ. ಆದರೆ ಅವನ ಯೋಜನೆ ಹೇಗೆ ನಡೆಯುತ್ತಿದೆ?

ಈಗ ಯುರೋಪಿನ ಕೊರಳು ಹಿಟ್ಲರನ ಕೈಯ್ಯಲ್ಲಿದೆ. ಇಟೆಲಿಯು ಅವನ ವಿಧೇಯ ಸೇವಕನಂತಿದೆ. ಸ್ಪೈನು ನಾಝಿಗಳ ಮುಷ್ಟಿಯೊಳಗಿದೆ. ಸ್ವಿಝರ್ಲೇಂಡ್ ಮತ್ತು ಸ್ವೀಡ ಜರ್ಮನಿಯ ಕೃಪೆಯೊಳಗಾಗಿ ಹಂಗೇರಿಗೆ ಜರ್ಮನಿಯನ್ನು ವಿರೋಧಿಸುವುದೇ ಪ್ರಯಾಸವಾಗಿದೆ. ಈ ಯುರೋಪಿನ ಪ್ರತಿಯೊಂದು ರಾಷ್ಟ್ರ ಜರ್ಮನಿ ಕೇಳಿದ್ದನ್ನು ಕೊಡುತ್ತಿದೆ.

**ಬಾಲ್ಕನ್, ರಷ್ಯ**

ಯುರೋಪನ್ನು ತನ್ನಿಚ್ಛೆಯಂ


# The Jaya Karnataka Banking & Trading Co., Ltd.

**KALLIANPUR, S. K.**

## ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ ನಗಗಳ ಈಡಿನ ಮೇಲೆ ಪಡೆದ ಸಾಲಗಳ ಬಡ್ಡಿ ಬಾಕಿ ಮಾಡಿ, ಅಸಲು ಬಡ್ಡಿ ಹಣಗಳ ವಸೂಲು ಕುರಿತು ರಿಜಿಸ್ತ್ರಿ ನೋಟೀಸುಗಳನ್ನು ಕೊಟ್ಟರೂ 1ನೇ ಮತ್ತು 2ನೇಯವರು ಮೃತಪಟ್ಟಿರುತ್ತಾರಾಗಿಯೂ ಉಳಿದವರು ಊರಲ್ಲಿ ಇಲ್ಲವಾಗಿಯೂ ಕೂಡಾ ಕಾರಣಗಳನ್ನು ಕಾಣಿಸಿ ನೋಟೀಸುಗಳು ವಾಪಾಸು ಬಂದಿರುವುದರಿಂದ ಸದರಿಯವರಿಂದ ಈ ಕೆಳಗೆ ವಿವರಿಸಿದಂತೆ ಬೇಂಕಿಗೆ ಬರತಕ್ಕ ಅಸಲು ಬಡ್ಡಿ ವ ಖರ್ಚು ಸಮೇತ ಸದ್ರಿ ನಗಗಳ ವಾರಿಸುದಾರರಾಗಲೀ ಯಾ ನಗಗಳನ್ನು ಈಡಿಟ್ಟವರಾಗಲೀ ತಾ. 8ನೇ ಅಗೋಸ್ತು 1940ರ ಒಳಗೆ ಬೇಂಕಿಗೆ ಬಂದು, ತಮ್ಮ ಹಕ್ಕನ್ನು ರುಜುಪಡಿಸಿ ನಗಗಳ ಬಾಬತು ಅಸಲು ಬಡ್ಡಿ ಸಮೇತ ಐವೇಜನ್ನೂ ಮತ್ತು ಈ ನೋಟೀಸು ಖರ್ಚು ಕೂಡಾ ವಸೂಲು ಕೊಟ್ಟು, ನಗಗಳನ್ನು ವಾಪಾಸು ಪಡಿಯದಿದ್ದಲ್ಲಿ ಸದರಿ ನಗಗಳನ್ನು ಇದೇ ಇಸವಿ ಬರುವ ಅಗೋಸ್ತು ತಿಂಗಳ ತಾ. 13ನೇ ಮಂಗಳವಾರ ಅಪರಾಹ್ನ ಘಂಟೆ 1ರಿಂದ 2ರ ವರೆಗೆ ಬಹಿರಂಗವಾಗಿ ಏಲಂ ಮಾಡಿ, ಹುಟ್ಟಿಬಂದ ಐವಜನ್ನು ಬಹಾ ಸಾಲಗಳಿಗೆ ಜಮಾ ಬರದು, ಏನಾದರೂ ಬಾಕಿ ಆಗಬಹುದಾದ ಐವೇಜಿಗೆ ಸಮ್ಮಂಧಪಟ್ಟವರ ಮೇಲೆ ದಾವಾ ಮಾಡಲಾದೀತು—ಯೋಗ್ಯ ಬೆಲೆ ಬಾರದಿದ್ದಲ್ಲಿ ಸಮ್ಮಂಧಪಟ್ಟ ನಗಗಳನ್ನು ಬೇಂಕಿಗೆ ಯುಕ್ತ ಕಂಡ ಯಾವುದಾದರೂ ಒಂದು ದಿನ ಪುನಃ ನೋಟೀಸು ಕೊಡದೇನೇ ಸದ್ರಿ ಬೇಂಕಿನ ಆಫೀಸಿನಲ್ಲಿ ಏಲಂ ಮಾಡಲಾದೀತೆಂದು ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

| ಜಂಜರಾ ನಂಬ್ರ | ಸಾಲಗಾರರ ಹೆಸರು, ವಿಳಾಸ ವಗೈರೆ | ಸಾಲದ ನಂಬ್ರ / ಈಡಿಟ್ಟ ತಾರೀಕು | ಬಡ್ಡಿ ಬಾಕಿ ಆದ ತಾರೀಕು | ಅಸ್ಲು ರೂಪಾ |
|---|---|---|---|---|
| 1. | ಮಾರ್ಸೆಲ್ ಸೋಜ, ಮಿಂಗೇಲ್ ಸೋಜರ ಮಗ, ಹಾವಂಜಿ ಕುದ್ರು, ಪೋಸ್ಟು ಕಲ್ಯಾಣಪುರ. | 197/37 / 30—3—37 | 30—3—'38 | 16—0—0 |
| 2. | ಟ. ಬಿ. ವಿಟ್ಠಲ ಹೆಗ್ಡೆ, ತೋನ್ಸೆ ಬೊಮ್ಮಯ್ಯ ಹೆಗ್ಡೇರ ಮೊಮ್ಮಗ, ಮೂಡುತೋನ್ಸೆ ಗ್ರಾಮ, ಪೋಸ್ಟು ಕಲ್ಯಾಣಪುರ. | 511/38 / 29—8—38 | 29—8—'38 | 18—0—0 |
| 3. | ಅಬ್ದುಲ ರಹಿಮಾನ್ ಸಾಹೇಬ್, ಶಾಬುದ್ದೀನ್ ಇಸ್ಮಾಯಿಲ್ ಸಾಹೇಬರ ಮಗ, ಪಡುಕುದ್ರು, ಪಡುತೋನ್ಸೆ, ಪೋಸ್ಟು ಕೆಮ್ಮಣ್ಣು. | 215/37 / 5—4—37 | 5—4—'37 | 2—8—0 |
| 4. | ತಿಮ್ಮ ಬೆಲ್ಚಾಡ, ಬಾಬ ಬೆಲ್ಚಾಡನ ಅಳಿಯ, ಮುರ್ತೆಕಸುಬು, ದೆಬ್ಬೆಟ್ಟು, ಮೂಡತೋನ್ಸೆ ಗ್ರಾಮ, ಪೋಸ್ಟು ಕಲ್ಯಾಣಪುರ. | 314/38 / 4—6—38 | 4—6—'38 | 5—0—0 |
| 5. | ಕೂಸ ವೆಂಕಟ, ಕೂಸ ನಂದಿಯ ಮಗ, ಪಕ್ಕ ಬೆಟ್ಟು, ಪೋಸ್ಟು ಕಲ್ಯಾಣಪುರ. | 447/38 / 30—7—'38 | 30—7—'38 | 4—0—0 |

OFFICE OF THE BANK
Kallianpur, S. K.
*13th July 1940.*

(*Sd*). ***M. V. Pais,***
***Manager.***

ವಶ್ಯಗೊಳಿಸಬೇಕಾದರೆ ಹಿಟ್ಲರನು ಲ್ಯಾಂಡನ್ನು ಹತೋಟಿಯಲ್ಲಿಟ್ಟುಕೊ ಬೇಕು. ಹಾಗೆ ಮಾಡಬೇಕಾದರೆ ರ್ಮನಿಯು ರಷ್ಯದೊಡನೆ ಹೋರಾ ಬೇಕಾಗುತ್ತದೆ.

ಇಟಲಿ ಜರ್ಮನಿಗಳು ಯುಗೊ ಸ್ಲೇವಿಯವನ್ನು ಜಪರಿಸಿದಾಗ ರಷ್ಯ ಅದರೊಡನೆ ಒಂದು ವಾಣಿಜ್ಯ ಪ್ಪಂದವನ್ನು ಮಾಡಿ ಸರ್ವಾಧಿಕಾರಿ ಬೆದರಿಕೆಯನ್ನು ನಿಲ್ಲಿಸಿತು.

ರುಮಾನಿಯವು ನಾಝಿ ಪಕ್ಷಕ್ಕೆ ಸೇರುವುದೆಂಬುದು ನಿಜವೆಂದು ಕಂಡಾಗ ರಷ್ಯವು ಬೆಸ್ಸರಾಬಿಯವನ್ನು ನುಂಗಿತು.

ಅಂತೂ ಹಿಟ್ಲರನ ಯೋಜನೆ ಜಾರಿಗೆ ಬರಬೇಕಾದರೆ ಅವನು ಯಾವುದಾದರೊಂದು ದೊಡ್ಡ ರಾಷ್ಟ್ರದೊಡನೆ ಹೋರಾಡಬೇಕಾಗುತ್ತದೆ. ಅದಾವುದು? ಒಂದೋ ಟರ್ಕಿ, ಇಲ್ಲದಿದ್ದರೆ ರಷ್ಯ, ಹೀಗಾಗದಿದ್ದರೆ ಹಿಟ್ಲರನ ಕನಸು ನನಸಾಗುವುದಿಲ್ಲ. ಆದುದರಿಂದ ಹಿಟ್ಲರನು ಇಂಗ್ಲೆಂಡಿನ ಮೇಲೆ ಧಾಳಿಯಿಟ್ಟು ನಂತರ ರಷ್ಯದ ಮೇಲೆ ನುಗ್ಗಿ ಬಳಿಕ ಯುರೋಪನ್ನು ಕೈವಶಪಡಿಸುವ ಯೋಚನೆ ಮಾಡಬಹುದು.

ಬ್ರಿಟನ್ ಮತ್ತು ರಷ್ಯವನ್ನು ಮುರಿದರೆ ಹಿಟ್ಲರನ ಕನಸು ಸತ್ಯವಾಗಬಹುದು. ಇಲ್ಲದಿದ್ದರೆ—?

**ತಿದ್ದುಪಡಿ**

ಅಂತರಂಗದ ಚಲಚ್ಚಿತ್ರಾಂಕದಲ್ಲಿ ಮಿಸ್ ಅಮೀನಳ ಚಿತ್ರದ ಕೆಳಗೆ 'ಶೋಭನಾಸಮರ್ಥ'ಎಂದು ಬರೆಯಲಾಗಿತ್ತು. ಅದು ಮಿಸ್ ಅಮೀನಾ ಎಂದಾಗಬೇಕಿತ್ತು.

# ಶ್ರೀ. ಚಂದ್ರಕಲಾ ಸ್ಪರ್ಧೆ ನಂ. 43ರ

**ಕೆನರಾ ಬ್ಯಾಂಕಿನಲ್ಲಿ ಮೊಹರಾಗಿದ್ದ ಸರಿಯಾದ ಉತ್ತರ ಮತ್ತು ಬಹುಮಾನ ಪಡೆದವರು.**

**ಎಡದಿಂದ ಬಲಕ್ಕೆ:—** 1. ಶಿವ. 3 ಜಯ. 5. ನಯನ. 8. ಯಮ. 10. ಸತ. 11. ದನ. 12. ಕ್ರೂರ. 13. ವನ. 15. ಶುಕ. 17. ಅಜರ. 19. ಪಕ್ಷಿ. 20. ಮಾನ.

**ಮೇಲಿನಿಂದ ಕೆಳಕ್ಕೆ:—** 2. ವನ. 3. ಜನ. 4. ಜಯ. 6. ಯಕ್ಷ. 7. ಹಿತ 9 ಮದನ 10. ಪರಶು. 13. ವಸ್ತು. 14. ರಾಜ. 16 ಕವಿ. 17. ಅಕ್ಷಿ. 18. ರಮಾ.

## ಬಹುಮಾನ ಪಡೆದವರು

ಸರಿಯಾದ ಉತ್ತರವು ಯಾರಿಂದಲೂ ಬರಲಿಲ್ಲವಾದ್ದರಿಂದ ಒಂದು ತಪ್ಪಿನ ಉತ್ತರವನ್ನು ಕಳುಹಿಸಿದ 6 ಜನರಿಗೆ ತಲಾ ರೂ. 13—5—4 ಯಂತೆ ಕೊಟ್ಟಿರುತ್ತೆ. M. S. ರಾಮಚಂದ್ರರಾವ್, ಬೆಂಗಳೂರು. ಶ್ರಿ. ಸಾವಿತ್ರಮ್ಮ, ಮೈಸೂರು. H. ಶ್ಯಾಮರಾವ್, ದಾವಣಗೆರೆ. N. S. ಶ್ರೀಕಂಠಯ್ಯ, ಮಂಗಳೂರು. K. ಶ್ರೀಪಾದರಾವ್, ಚಿಕ್ಕಮಗಳೂರು. N. ಗಿರಿಯಪ್ಪ, ಶಿವಮೊಗ್ಗ. ಎಲ್ಲರಿಗಿಂತಲೂ ಹೆಚ್ಚಿಗೆ ಕೂಪನ್ನು (58) ಕಳುಹಿಸಿದ, N. ಗಿರಿಯಪ್ಪ ಇವರಿಗೆ ಸ್ಪೆಷಲ್ ಬಹುಮಾನ, ರೂ. 10 ಕೊಡಲಾಗಿದೆ.

ಎರಡು ತಪ್ಪಿನ ಉತ್ತರವನ್ನು ಕಳುಹಿಸಿದ 18 ಜನರಿಗೆ ತಲಾ, 2—8—0 ಯಂತೆ ಕೊಟ್ಟಿರುತ್ತೆ. P. ರಂಗಾಚಾರ್. M. ಶ್ಯಾಮರಾವ್. ಶ್ರೀ. ಶಾರದಾಬಾಯಿ. N S. ರಾವ್, ಮಂಗಳೂರು M. ರಾಮರಾವ್. M. ಕೃಷ್ಣರಾವ್. ಶ್ರಿ. ಶಕುಂತಳಾಬಾಯಿ. N. ಕೃಷ್ಣಪ್ಪ. ಶ್ರಿ. ಕಾವೇರಮ್ಮ. ಶ್ರೀ. ರಾತಮ್ಮ, ಮೈಸೂರು. ಮಾಧವ ಪೈ ಮಂಗಳೂರು. N. K. ಮೂರ್ತಿ. N. K. ರಾಜಚಾರ್. ನರಸೀಪುರ, ಶ್ರಿ ಅಲಮೇಲಮ್ಮ, ಮದರಾಸು ಸೀತಾರಾಮ ಪೈ, ಅದೋನಿ. A. S. ಬಸಪ್ಪ. ಚಿತ್ರದುರ್ಗ. B. K. ಆರಾಧ್ಯ, ರಾಣಿಬೆನ್ನೂರು. C. ನಾಗಪ್ಪ. ಬಳ್ಳಾರಿ.

ಮೂರು ತಪ್ಪಿನ ಉತ್ತರವನ್ನು ಕಳುಹಿಸಿದ, 44 ಜನರಿಗೆ ತಲಾ ರೂ. 1ರಂತೆ ಕೊಟ್ಟಿರುತ್ತೆ. ಶ್ರೀ. P. ಕಮಲಮ್ಮ. S. ಸದಾಶಿವರಾವ್. M. ಮರಿರಾವ್. ಶ್ರಿ. ಸುಶಿಲಾ ಬಾಯಿ. N. S. ಶ್ರೀಪತಿ. M. ರಾಮರಾವ್. B. ಬಸಪ್ಪ. ಶ್ರಿ. ಮೀನಾಕ್ಷಮ್ಮ M. S. ಶಿವರುದ್ರಪ್ಪ. ಶ್ರಿ. ರಾಜಾಮಣಿ, ಬೆಂಗಳೂರು. H. S. ರಾಮುಸ್ವಾಮಿ. S. ರಾಮಾಚಾರ್. M. ಕೋದಂಡಪಾಣಿ. A. ಸೀನಪ್ಪ S. ಕಾಶೀಪತಿ. ಶ್ರೀ. ಚಂದ್ರವದನ. M. ಸಾಂಬಶಿವಯ್ಯ. K. ಕೃಷ್ಣರಾವ್. D. K. ಬಸವಯ್ಯ, ಮೈಸೂರು. A. S. ಚಂದ್ರಶೇಖರ, ಚಿಕ್ಕಮಗಳೂರು. ಸೌ. ಸುಬ್ಬಲಕ್ಷ್ಮಮ್ಮ, ಕ್ಯಾತನಹಳ್ಳಿ. N. ರಾಮನಾಥ ಪೈ, ಮಂಗಳೂರು. ಶ್ರಿ. ಕಮಲಮ್ಮ. N. ಗೋವಿಂದ ಶೆಟ್ಟಿ, ಮದ್ರಾಸ್. M. K. ರಾಜರಾವ್. K. ನಾಗರಾಜ ರಾವ್, ಕೋಲಾರ. S. ಕೃಷ್ಣಮೂರ್ತಿ. ಶ್ರಿ. ರಾಜಮ್ಮ, ಕಡೂರು. H. ಶ್ರಿನಿವಾಸಚಾರ್. H. ನರಸಿಂಗರಾವ್ ಹಾಸನ. N. D. ಶ್ರೀನಿವಾಸ ಮೂರ್ತಿ, ಹರಿಹರ. ವೆ. ಸುಬ್ಬಾಭಟ್ಟ, ದಾವಣಗೆರೆ. C. ಪಶುಪತಿ, ಚಿಂತಾಮಣಿ. D. S. ಬಸಪ್ಪ ತುಮಕೂರು. K. ಆನಂದರಾವ್, ಮೂಡಗೆರೆ. S. ಶ್ರೀಕಂಠಯ್ಯ, ಶಿಡ್ಲಘಟ್ಟ. B. ಸಿದ್ಧನಂಜಪ್ಪ. ತಾಡಪತ್ರಿ. A. S. ಭಾಸ್ಕರಯ್ಯ, ಬಳ್ಳಾರಿ. ಶ್ರಿ. ರತ್ನಮ್ಮ, M. ರುದ್ರಪ್ಪ. ಭದ್ರಾವತಿ. S. K. ನಾಗಯ್ಯ, ಗೌರಿಬಿದನೂರು, H. ಪದ್ಮನಾಭಯ್ಯ, ಹುಬ್ಬಳ್ಳಿ. C. S. ಮಲ್ಲಾರಾಧ್ಯ, ಹಾವೇರಿ. ಶ್ರಿ. ಶಾರದಮ್ಮ. ಅರಸೀಕೆರೆ.

ಮೇಲ್ಕಂಡ ಬಹುಮಾನವನ್ನು ತಾ. 5—8 – 40ರ ನತರ ರವಾನಿಸಲಾಗುತ್ತೆ. ಮ್ಯಾ. ಚಂ. ಸ್ಪ.

# ಮುಂಬಯಿಯ ಪಾಪಕೂಪ!

(೩೩ ನೇ ಪುಟದಿಂದ)

ನೀವು ನಂಬಿದರೆ ನಂಬಿ ಬಿಟ್ಟರೆ ಬಿಡಿ, ನನಗದರಿಂದೇನೂ ಆಗ ಬೇಕಾಗಿಲ್ಲ. ಆ ಶ್ರೀಮಂತನ ಪತ್ನಿಯರು ಒಂದರ ಹಿಂದೊಂದರಂತೆ ಸಾಯುತ್ತಿರುವದೇಕೆಂದು ನಿಮಗೆ ಗೊತ್ತೇ? ಬಿಡಿ, ಗೊತ್ತು ಮಾಡುವ ಗೋಜಿಗಾದರೂ ಹೋಗುವಿರೇಕೆ? ಪರಮ ಪಾವನವಾದ ಹಿಂದೂ ಸಮಾಜದ ದುರ್ಗಂಧವು ಮತ್ತೊಮ್ಮೆ ವಿಶ್ವದಲ್ಲಿ ಹರಡದಿರಲಿ.

ತಿಂದು ತಿಂದು ಕೋಣನ ಹಾಗೆ ಬೆಳೆದಿರುವ ಆ ಶ್ರೀಮಂತನು, ನಾಲ್ಕೋ ಐದೋ ಸಾವಿರ ರೂಪಾಯಿಗಳನ್ನು ಕೊಟ್ಟು, ಹದಿನೈದು ವರ್ಷದ ಎಳೆ ಬಾಲೆಯನ್ನು ತಂದು ತನ್ನ ಕಾಮ ಪಿಪಾಸೆಯನ್ನು ವನ್ಯ ಮೃಗದಂತೆ ತೀರಿಸಿಕೊಳ್ಳಲುದ್ಯುಕ್ತನಾದರೆ ಆ ಬಾಲೆಯು ಬದುಕುತ್ತಾಳೆಯೇ. ಅವಳ ತಂದೆ ತಾಯಿಗಳು ಅವಳನ್ನು ಮಾರಿದಾಗಲೇ ಅವಳ ಆಶೆಯನ್ನು ತೊರೆದಿರುತ್ತಾರೆ. ಪೂರ್ವದಲ್ಲಿ ನಮ್ಮ ದೇವಿಯಾದ ಚಂಡಿಕೆಗೆ ನರಬರಲಿಗಾಗಿ ಮಾನವರನ್ನು ಮಾರುತ್ತಿರಲಿಲ್ಲವೇ?

ನಾನು ಆ ಶ್ರೀಮಂತನ ನಾಲ್ಕನೇ ಪತ್ನಿಯನ್ನು ನೋಡಿದಾಗ ನನ್ನ ಕಣ್ಣಿನಿಂದ ನೀರು ಸುರಿಯುವದರ ಬದಲಾಗಿ ರಕ್ತವು ಕುದಿಯತೊಡಗಿತು. ಅವನ ಮಗಳಿಗಿಂತ ಎರಡೋ ನಾಲ್ಕೋ ವರ್ಷ ವಯಸ್ಸು ಹೆಚ್ಚಿರುವ ಆ ಬಾಲಿಯು ಇನ್ನೂ ಅವಳ ಗಂಡನ ಬಾಲಕರೊಡನೆ ಆಡುತ್ತಿರುತ್ತಾಳೆ. ಅವಳ ನಿರ್ದೋಷಯುಕ್ತ ಮುಖ ಕಮಲವು ಈ ಪ್ರಪಂಚದಲ್ಲಿ ಅವಳೋರ್ವ ಚಂಡಿಕೆಯ ನರಬಲಿ ಎಂದು ಅವಳಿಗೆ ಅರಿವಾದರೂ ಹ್ಯಾಗಾಗಬೇಕು. ಅಮೇರಿಕೆಯ ಮೇಯೋಳು ಹಿಂದೂ ಸಮಾಜದ ಮೇಲೆ ಛೀಮಾರಿ ಮಾಡಿದಾಗಲೂ ನಮಗೆ ನಾಚಿಕೆಯು ಬರಲಿಲ್ಲ. ನಾವು ಅಂಥವರು ಇಂಥವರೆಂದು ಓಬೀರಾಯನ ಹಳೇ ಕೊಳಲೂದುತ್ತಾ ನಮ್ಮ ಹಿಂದೂ ಧರ್ಮ ಪವಿತ್ರ ಧರ್ಮ, ಪಾವನ ಧರ್ಮವೆಂದು ಹೊಗಳುತ್ತಿರುವ ಹೊಗಳು ಭಟ್ಟರ ತಂಡವು ವಿನಾಶ ಹೊಂದಿದರೆ ಮಾತ್ರ ಆ ಧರ್ಮಕ್ಕೆ ಮೋಕ್ಷ. 'ನಾನು ಹಿಂದು, ನಾನು ಹಿಂದುಗಳ ಗುರು, ನಾನು ಹಿಂದುಗಳ ಅಧ್ಯಕ್ಷ, ನಾನು ಸಭೆಯ ಮೆಂಬರು' ಎಂದು ಜಂಭ ಕೊಚ್ಚಿಕೊಂಡು ಹುಂಜಗಳಂತೆ ಹೇಂಟೆಗಳ ಎದುರು ಕುಣಿಯಲಿವರಿಗೆ ನಾಚಿಕೆ ಬರುವದಿಲ್ಲವೇ? ಪ್ರಪಂಚದಲ್ಲೆಲ್ಲೂ ಕಾಣದ ವಿಚಿತ್ರ ರೀತಿಯು ನಮ್ಮ ಹಿಂದೂ ಸಮಾಜದಲ್ಲಿ ಕಾಣುತ್ತಿದೆ. ಮುದುಕನಿಗೆ ಚಿಕ್ಕ ಬಾಲಕಿಯನ್ನು ತಂದು ಕಟ್ಟುವದು ನಮ್ಮ ಹಿಂದೂ ಸಮಾಜಕ್ಕೂ ಅಂಗೀಕಾರ, ಆಳರಸರಿಗೂ ಅಂಗೀಕಾರ, ಚಿಕ್ಕ ಬಾಲಕಿಯೋರ್ವಳು ಆಜನ್ಮ ಪರಿಯಂತರ ಪತಿಹೀನೆಯಾಗಿರುವದೂ ಈ ಕಟುಕ ಸಭೆಗೆ ಅಂಗೀಕಾರ, ರಾಕ್ಷಸರಾದ ತಂದೆ ತಾಯಿಗಳು ಅರಿಯದ ಬಾಲಕಿಯನ ಮದುವೆಯ ಸೋಗು ಹಾಕಿ ಮಾರುತ್ತಿರುವದೂ ಪವಿತ್ರ ಪಾವನನೆನಿಸಿಕೊಂಡ ಹಿಂದು ಸಮಾಜಕ್ಕೆ ಅಂಗೀಕಾರ, ಗಂಡಸು ನೂರಾರು ಮದುವೆಯನ್ನು ಮಾಡಿಕೊಂಡರೆ, ಹೆಂಗಸು ಒಬ್ಬ ಗಂಡನಿಗಾಗಿ ಮುಂಡೆಯಾಗಿರಲೆಂದು ಹೇಳುತ್ತಿದೆ ಈ ಕಟುಕ ಸಮಾಜ. ಬಡವೆಯಾದ ಕನ್ನಿಕೆಯ ಮನೆ ಮಠ ಮಾರಿ ವರದಕ್ಷಿಣೆ ಎಂದು ಕಿತ್ತುಕೊಳ್ಳುತ್ತಿರುವ ಬಹಿರಂಗ ಸುಲಿಗೆಯೂ ಈ ಹಾಳು ಸಮಾಜಕ್ಕೆ ಅಂಗೀಕಾರ. ಧಿಕ್ಕಾರವಿರಲಿ ಈ ನಾಚಿಕೆ ಹೀನ ಸಮಾಜಕ್ಕೆ. ಅತ್ಯಾಚಾರಗಳನ್ನು ಒಂದರ ಹಿಂದೊಂದರಂತೆ ನಡೆಯಲೆಡೆಗೊಡುತ್ತಿರುವ ಈ ಹಾಳು ಸಮಾಜವು ಅಂತ್ಯ ಹೊಂದುವದೆಂದು ದೇವಾ! ನಾನು ಹೃತ್ಪೂರ್ವಕವಾಗಿ ಹಿಂದೂ ಸಮಾಜದ ಈ ದುಷ್ಟ ಪದ್ಧತಿಯ ಸರ್ವನಾಶವನ್ನು ಆಶಿಸುತ್ತೇನೆ.

---

ಶ್ರೀ|| ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್, ಬಿ.ಎ., ಯವರಿಂದ ಚಿತ್ರಿಸಲ್ಪಟ್ಟಿರುವ
**ನಾಟಕಗಳು**

**"ವ್ಯಾಮೋಹ"**
ವಿಷಮ ವಿವಾಹ, ಸಹವಾಸ ದೋಷ, ದುರಾಶೆ, ವಂಚನೆ, ನಿರ್ಲಜ್ಜೆ, ಇವುಗಳ ಪರಿಣಾಮವನ್ನು ಬಹು ಚೆನ್ನಾಗಿ ಚಿತ್ರಿಸಿರುತ್ತದೆ.
ಬೆಲೆ 0—8—0


**"ವಿಧಿ"**
ನಿಷ್ಕಲ್ಮಷ ಪಶ್ಚಾತ್ತಾಪದಿಂದ ಪಾಪಕ್ಕೆ ಪರಿಹಾರ ಉಂಟು; ತ್ಯಾಗದಿಂದ ಕೂಡಿದ ಜೀವನವೇ ಉತ್ತಮ ಜೀವನ; - ಇತ್ಯಾದಿ ಜೀವನ ತತ್ವಗಳನ್ನು ಸಮರ್ಥಿಸುವ ನಾಟಕ.
ಬೆಲೆ 0—8—0

**"ಲೋಭಿ"**
ಕಡುಲೋಭಿಯ ಕಠಿಣಸ್ವಭಾವಗಳ ಮೂ... ರ್ತಿಮತ್ತಾದ ಪಾತ್ರವನ್ನು ರಚಿಸಿ, ಚಿತ್ತಾ... ಕರ್ಷಕವಾದ ಶೈಲಿಯಿಂದ ಬರೆದಿರುತ್ತದೆ... ಎಲ್ಲರೂ ಓದಬೇಕಾದ ಪುಸ್ತಕ. [ಅ. 8

**"ಗ್ರಹಚಾರ"**
ಸಮಾಜದ ಶೋಕ ನಿವಾರಣೆ, ಶಾಂ... ಸ್ಥಾಪನೆ, ನವಯುಗದ ನವೀನ ಚೈತನ್ಯ... ಪುನರಾವಿರ್ಭಾವನೆ ಮೊದಲಾದುವುಗಳನ್ನು... ಹೃದಯಂಗಮವಾಗಿ ಚಿತ್ರಿಸಿರುವ ಹೊ... ತರದ ನಾಟಕ. [ಅ. 8

ಉಪಾಧ್ಯಾಯ ಬುಕ್ಕ್ ಡಿಪೋ, ಬೆಂಗಳೂರು ಸಿಟಿ, ನಂ. 13.

# ಸಮರಭೂಮಿಯ ಸಮಾಚಾರಗಳು



**ತಾ. ೨೨ ಜೂನ್, ೧೯೪೦**

ಜರ್ಮನಿ ಮತ್ತು ಇಟಲಿ ಸರಕಾರಗಳು ಹಾಕಿದ ಶರತ್ತುಗಳನ್ನು ಫ್ರೆಂಚ್ ಸರಕಾರವು ಒಪ್ಪಿದುದನ್ನು ತಿಳಿದು ಚರ್ಚಿಲ್ಲರು 'ಫ್ರೆಂಚ್ ಸಾಮ್ರಾಜ್ಯವೂ-ಫ್ರೆಂಚ್ ಜನಾಂಗವೂ – ಸಂಪತ್ತೂ ನಮ್ಮ ನಾಶದಲ್ಲಿ ಉಪಯೋಗ ಹೊಂದುವಂತಾಯಿತು' ಎಂದಿದ್ದಾರೆ.

ಜನರಲ್ ಡಿಗಾಲ್‌ರವರು ಲಂಡನಿನಲ್ಲಿ ಫ್ರೆಂಚ್ ರಾಷ್ಟ್ರೀಯ ಸಮಿತಿಯೊಂದನ್ನು ಸ್ಥಾಪಿಸಿ-ಪಿಟೇನ್ ಸರಕಾರಕ್ಕೆ ವಿರೋಧವಾಗಿ ಬ್ರಿಟಿಷರೊಡನೆ ಕೂಡಿ ಹೋರಾಡಲು ತೊಡಗಿದ್ದಾರೆ.

ಜರ್ಮನಿಯ ಮೇಲೆ ಹಾರಾಡ ಹೋದ ಬ್ರಿಟಿಷ್ ವಿಮಾನಗಳಲ್ಲಿ ಎರಡು ವಿಮಾನಗಳು ನಾಶವಾಗಿವೆ. ಈ ಹಾರಾಟದಲ್ಲಿ ಜರ್ಮನರ ಒಂದು ಹಡಗು ಮುಳುಗಿದೆ.

**ತಾ. ೨೩ ಜೂನ್, ೧೯೪೦**

ಜರ್ಮನರ ಶರತ್ತುಗಳು ಪ್ರಕಟವಾಗಿವೆ. ಎಲ್ಲಾ ಯುದ್ಧ ಸಾಧನಗಳೂ – ನೌಕಾಬಲವೂ ಜರ್ಮನಿಯ ಹಸ್ತಗತವಾಯಿತು. ಫ್ರಾನ್ಸು ಜರ್ಮನಿಯ ಅಧೀನವಾದಂತೆಯೇ ಇದೆ.

ಚರ್ಚಿಲ್ಲರ ಮಾತಿಗೆ ಉತ್ತರವಾಗಿ ಫ್ರೆಂಚ್ ಪ್ರಧಾನರಾದ ಮಾರ್ಶಲ್ ಪೀಟೆನರು 'ಚರ್ಚಿಲ್ಲರಿಗೆ ತಮ್ಮ ರಾಷ್ಟ್ರದ ಹಿತದೃಷ್ಟಿ ಮಾತ್ರ ಗೊತ್ತಿದೆಯಲ್ಲದೆ ನಮ್ಮ ಸುಖ ದುಃಖ ಅವರಿಗೇನು ಗೊತ್ತು? ನಾವು ಗೌರವದಿಂದಲೇ ಇದ್ದೇವೆ' ಎಂದಿದ್ದಾರೆ.

**ತಾ. ೨೪ ಜೂನ್ ೧೯೪೦.**

ಫ್ರೆಂಚರು ಇಟಲಿ-ಜರ್ಮನಿಗಳೊಡನೆ ಸಂಧಾನ ಮಾಡಿಕೊಂಡಿದುದರಿಂದ ಫ್ರಾನ್ಸಿನಲ್ಲಿ ಇಂದು ಯುದ್ಧವು ಕೊನೆಗೊಂಡಿತು.

ಇಂಗ್ಲೆಂಡಿನ ಅನೇಕ ಕಡೆ ವಿಮಾನ ಧಾಳಿಯೆಚ್ಚರಿಕೆ ಧ್ವನಿಯಾಗಿದೆ. ನಷ್ಟವಾದುದು ವರದಿಯಾಗಿಲ್ಲ.

ಕಂಪೀಡರ್ ಎಂಬ ಬ್ರಿಟಿಷ್‌ಯಾಚ್ ಹಡಗು ಮುಳುಗಿಸಲ್ಪಟ್ಟಿದೆ. ೨೦ಜನರು ಹತರಾಗಿರುವರೆಂದು ಹೇಳಲಾಗಿದೆ.

ಇಟಲಿಯ ಇನ್ನೊಂದು ಸಬ್‌ಮೆರಾಯಿನನ್ನು ಬ್ರಿಟಿಷರು ನಾಶಪಡಿಸಿದ್ದಾರೆ

ಇಟಲಿಯ ವಿಮಾನಗಳುಮಾಲ್ಟಾದ ಮೇಲೆ ಧಾಳಿ ನಡೆಯಿಸಿದುವು. ಒಂದು ಇಟಲಿಯ ವಿಮಾನವು ನಾಶವಾಗಿವೆ.


**ತಾರುಣ್ಯ ಮತ್ತು ಸೌಂದರ್ಯ**

ನಮ್ಮ ಕೆಳಗಿನ ಪುಸ್ತಕವನ್ನೋದಿದರೆ ಇವನ್ನು ಪಡೆಯಬಹುದು.

## ಕಾಮಶಾಸ್ತ್ರ

ಆಯುರಾರೋಗ್ಯ ಸಂಪದಭಿವೃದ್ಧಿಗಳಿಗೆ ಇದೊಂದು ತೋರ್ಗೈ.

ನೀವಿದನ್ನೋದಿಲ್ಲವಾದರೆ ನಮಗೊಂದು ಕಾರ್ಡು ಬರೆಯಿರಿ.

ಅಂಚೆವೆಚ್ಚವಿಲ್ಲದೆ ಧರ್ಮಾರ್ಥ ಬರುತ್ತದೆ.

**ಆತಂಕನಿಗ್ರಹ ಫಾರ್ಮಸಿ,**

**A ೬೪. ಚಿಕ್ಕಪೇಟೆ, ಬೆಂಗಳೂರು.**


ಬೊಂಬಾಯಿಯ ಬಳಿ ಗಸ್ತು ತಿರುಗುತ್ತಿದ್ದ 'ಪಠಾಣ್' ಎಂಬ ಹಡಗು ಮುಳುಗಿ ಹೋಗಿದೆ. ಶತ್ರುಗಳು ಮುಳುಗಿಸಿರಬಹುದೆಂದು ಹೇಳಲಾಗಿದೆ. ೫ ಜನರು ಮಡಿದರು.

**ತಾ. ೨೫ ಜೂನ್, ೧೯೪೦**

ಫ್ರಾನ್ಸು ಸೋತುದೇಕೆ ಎಂಬುದನ್ನು ಬ್ರಿಟಿಷ್ ಮುಖ್ಯ ಮಂತ್ರಿಗಳಾದ ಮಿ| ಚರ್ಚಿಲ್ಲರು ಈ ದಿನ ಕಾಮನ್ಸಿನಲ್ಲಿ ಹೇಳಿಕೆಯೀಯುತ್ತಾ ತಿಳಿಸಿದರು.

ಇಟಲಿ- ಫ್ರಾನ್ಸು ಒಪ್ಪಂದದ ಶರತ್ತುಗಳು ಪ್ರಕಟವಾಗಿವೆ. ಇದರಿಂದ ಫ್ರೆಂಚ್ ಸಾಮ್ರಾಜ್ಯ ಹಲವು ಬಂದರುಗಳೂ- ಇತರ ಹಲವು ಪ್ರದೇಶಗಳೂ ಇಟಾಲಿಯಾನರ ಹಿಡಿತದಲ್ಲಿರಬೇಕಾಗಿದೆ.

**ತಾ. ೨೬ ಜೂನ್, ೧೯೪೦**

ಈ ದಿವಸ ಕಾಮನ್ಸನ್ನು ಮಿ| ಎಮೆರಿಯವರು ಯುದ್ಧ ಕಾಲದಲ್ಲಿ ಇಂಡಿಯಾ ವೈಸರಾಯರಿಗೆ ಹಲವು ವಿಶೇಷಾಧಿಕಾರಗಳನ್ನೀಯುವ ಮಸೂದೆಯನ್ನು ಮಂಡಿಸುತ್ತ ಭಾಷಣ ಮಾಡಿದರು. ಮುಂದೆ ಹಿಂದೂ ದೇಶಕ್ಕೂ- ಇಂಗ್ಲಾಂಡಿಗೂ ವ್ಯವಹಾರ ಸೌಕರ್ಯಗಳು ತಪ್ಪಿಹೋಗಬಹುದಾದುದರಿಂದಲೆ ಈ ಅಧಿಕಾರವನ್ನು ಇತ್ತುದು.

ಫ್ರೆಂಚ್ ತೀರದ ಬಳಿ ಬ್ರಿಟಿಷ್ ವಿಮಾನಗಳು ಹಾರಾಡಿ ಧಾಳಿ ನಡೆಯಿಸಿದುವು. ಮೂರು ಶತ್ರು ವಿಮಾನಗಳು ನಾಶವಾಗಿವೆ. ಶತ್ರುಗಳಿಗೆ ತುಂಬಾ ನಷ್ಟವಾಗಿದೆ.

ಜಪಾನು ಹೊಸ ಫ್ರೆಂಚ್ ಸರಕಾರವನ್ನು (ಪಿಟೇನ್ ಸರಕಾರ) ಒಪ್ಪಿರುವುದು.

೨೮- ಮತ್ತು ೨೯ನೇ ತಾರೀಕುಗಳಲ್ಲಿ ಬ್ರಿಟನ್ನಿನಲ್ಲಿ ಅಲ್ಲಲ್ಲಿ ವಿಮಾನ ಧಾಳಿಯಾಯಿತು. ೫ ಶತ್ರು ವಿಮಾನಗಳು ನಾಶವಾಗಿವೆ. ಬ್ರಿಟಿಷರು ನಾಲ್ಕು ಮಂದಿ ಸತ್ತರು.

**ತಾ. ೨೭ ಜೂನ್, ೧೯೪೦**

ರುಮೇನಿಯಾದ ಬೆಸ್ಸರೇಬಿಯಾವನ್ನು ಬುಕೋವಿನಾ ಪ್ರಾಂತದ ಉತ್ತರ ಭಾಗಗಳನ್ನು ತನಗೆ ಕೊಡಬೇಕೆಂದು ರಶಿಯಾವು ರುಮೇನಿಯಾವಿಗೆ ಎಚ್ಚರಿಕೆಯನ್ನಿತ್ತಿದೆ. ರುಮೇನಿಯಾ ಸರಕಾರ ಒಪ್ಪಿದೆ.

ಬ್ರಿಟಿಷ್ ವಿಮಾನಗಳು ಸ್ವಿಝರ್‌ಲೇಂಡಿನಲ್ಲಿ ಹಾರಾಡಿದುದಕ್ಕೆ ಬ್ರಿಟಿಷರು ಕ್ಷಮಾಪಣೆಯನ್ನು ಕೇಳಿದ್ದಾರೆ.

ಫೆಸಿಫಿಕ್ ಸಾಗರದಲ್ಲಿ ಅಶಾಂತಿಯಾಗುವ ಚಿಹ್ನೆಯಿದೆ. ಜಪಾನೀ ಸೈನ್ಯಗಳು ಶೇಖರವಾಗಿವೆ. ಹಡಗುಗಳೂ ಬಂದಿವೆ. ಅಮೇರಿಕಾದ ಹಡಗುಗಳೂ ಹೊರಟಿವೆ.

ಇಟಲಿಗೆ ಸೇರಿದ ಪೂರ್ವ ಆಫ್ರಿಕಾದ ಪ್ರದೇಶದ ಮೇಲೆ ಬ್ರಿಟಿಷರು ಧಾಳಿನಡೆಯಿಸಿದರು. ಒಂದು ಇಟಲಿ ವಿಮಾನ ನಾಶವಾಗಿದೆ.

ಮಾಲ್ಟಾದ ಮೇಲೆ ಇಟಲಿಯ ಭಾರೀ ವಿಮಾನ ಧಾಳಿಯಾಯಿತು. ೨೩ ಮಂದಿ ಸತ್ತರು, ಅನೇಕರು ಮಡಿದರು.

**ತಾ. ೨೮ ಜೂನ್, ೧೯೪೦**

ರುಮೇನಿಯಾ ಸರಕಾರದ ಒಪ್ಪಿಗೆ ಮೇಲೆಯೆ ರಶಿಯಾದ ಸೈನಿಕರು ಈ ದಿನ ಬೆಸ್ಸರೇಬಿಯಾ ಮತ್ತು ಬುಕಾವಿನಾ ಪ್ರಾಂತಗಳನ್ನು ವಶಪಡಿಸಿಕೊಂಡವು. ಹಂಗೇರಿ ಬಲ್ಗೇರಿಯಾ ದೇಶಗಳೂ ಕೂಡ ರುಮಾನಿಯಾದೊಡನೆ ಪಾಲು ಕೇಳಬಹುದೆಂದು ತಿಳಿದುಬಂದಿದೆ. ರುಮೇನಿಯಾದಲ್ಲಿ ಸೈನ್ಯಸಂಗ್ರಹಕ್ಕಾರಂಭವಾಗಿದೆ.

ಜರ್ಮನಿಯ ಮೇಲೂ ಫ್ರಾನ್ಸಿನ ಮೇಲೂ ಕಡಲ್ಗಾಲುವೆಯ ಮೇಲೂ ಬ್ರಿಟಿಷ್ ವಿಮಾನಗಳು ಧಾಳಿನಡೆಸಿ ಜರ್ಮನರಿಗೆ ತುಂಬ ನಷ್ಟವನ್ನುಂಟುಮಾಡಿದ್ದಾವೆ. ಬ್ರಿಟಿಷರ ೯ ವಿಮಾನಗಳು ನಾಶವಾಗಿವೆ. ಜರ್ಮನರ ಒಂದು ಬಾಂಬರು ವಿಮಾನ ನಾಶವಾಗಿದೆ.

೮೦೦೦ ಟನ್ನು ತೂಕದ ಒಂದು ಶತ್ರುಪಕ್ಷದ ಸಬ್ ಮೆರಾಯಿನನ್ನು ಬ್ರಿಟಿಷರು ಮುಳುಗಿಸಿದ್ದಾರೆ.

ಕಪ್ಪು ಸಮುದ್ರದಲ್ಲಿ ರಶಿಯಾ ಮತ್ತು ಟರ್ಕಿ ನೌಕೆಗಳ ಚಲನ ವಲನಕ್ಕಾರಂಭವಾಗಿದೆ.

ಫ್ರೇಸರ್ ಎಂಬ ಕೆನಡಾದ ಡಿಸ್ಟ್ರಾಯರ್ ಹಡಗು ಮುಳುಗಿತು. ೪೫ ಜನರು ಪತ್ತೆಯಿಲ್ಲವಾಗಿದ್ದಾರೆ.

ಕಡಲ್ಗಾಲುವೆಯ ದ್ವೀಪಗಳ ಮೇಲೆಲ್ಲ ಜರ್ಮನರು ಧಾಳಿನಡೆಯಿಸಿದುದರ ಫಲವಾಗಿ ಅನೇಕ ನಾಗರಿಕರು ಹತರಾಗಿದ್ದಾರೆ.




# ನವಜೀವಾತು

ಎಂಬ

## ಸೂತಿಕಾರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೮ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪ್ಯಾಗಳೇ ಒಂದು ಬಾಣಂತಿತನಕ್ಕೆ ಸಾಕಾಗುವುವು. ವಿಶೇಷ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ,**
**ನಂ. 15 ಕೊಡಿಯಾಲಬೈಲು, ದ. ಕ.**

**ತಾ. ೨೯ ಜೂನ್, ೧೯೪೦**

ಇಟಾಲಿಯ ವೈಮಾನಿಕ ದಲದ ಪುನರ್ನಿರ್ಮಾತರೆನಿಸಿದ ಮಾರ್ಷಲ್ ಬಾಲ್ಬೋರವರು ತಾನು ಕುಳಿತಿದ್ದ ವಿಮಾನವು ಮುರಿದು ಬಿದ್ದು ಮೃತರಾಗಿದ್ದಾರೆ. ಬ್ರಿಟಿಷರು ವಿಮಾನ ಯುದ್ಧದಲ್ಲಿ ಬಾಲ್ಬೋರವರನ್ನು ಕೊಂದರೆಂದು ಇಟಾಲಿಯು ಹೇಳಿದೆ. ಶುದ್ಧ ಸುಳ್ಳು ಎಂದಿದ್ದಾರೆ ಬ್ರಿಟಿಷರು.

ಎರಡು ಇಟಾಲಿಯನ್ ಸಬ್ ಮೆರಾಯಿನುಗಳು ನಾಶವಾಗಿವೆಯಂತೆ.

ಜರ್ಸಿ ಮತ್ತು ಗೂರ್ನ್ಸಿ ಎಂಬ ಬ್ರಿಟಿಷ್ ಕಡಲ್ಕಾಲುವೆಯ ದ್ವೀಪಗಳ ಮೇಲೆ ಜರ್ಮನರು ಧಾಳಿ ನಡೆಯಿಸಿದುದರ ಫಲವಾಗಿ ೩೯ ಜನರು ಹತರಾದರು.

ಇಂಗ್ಲಾಂಡಿನ ಮೇಲೆ ಜರ್ಮನಿಯ ವಿಮಾನಗಳು ಧಾಳಿನಡೆಸಿದುವು ಹೆಚ್ಚಿನ ನಷ್ಟವಾಗಿಲ್ಲವೆಂದೂ ಇಬ್ಬರು ಸತ್ತರೆಂದು ವರದಿಯಾಗಿದೆಯೆಂದೂ ಬ್ರಿಟಿಷ್ ಹೇಳಿಕೆ ತಿಳಿಸುತ್ತಿದೆ.

ಭೂಮಧ್ಯ ಸಮುದ್ರದಲ್ಲಿ ಶತ್ರು ಪಕ್ಷದ ಒಂದು ಡಿಸ್ಟ್ರಾಯರು ಹಡಗು ಮುಳುಗಿದೆಯಂತೆ.

**ತಾ. ೩೦ ಜೂನ್, ೧೯೪೦**

ಬ್ರಿಟನ್ನಿನ ಮೇಲೆ ನಡೆಯುವ ಶತ್ರು ಧಾಳಿಯನ್ನು ನಾವೆಲ್ಲರೂ ಒಟ್ಟಾಗಿ ಎದುರಿಸಿ ಜಯಿಸುವೆವು. ಶತ್ರುಗಳೊಡನೆ ಸಂಧಾನವೇ ಇಲ್ಲ.'' ಎಂದು ಚೇಂಬರ್ಲೆನರು ಹೇಳಿದ್ದಾರೆ.

ಆಫ್ರಿಕಾದ ಇಟಾಲಿಯ ವಸಾಹತುಗಳ ಮೇಲೆ ಬ್ರಿಟಿಷ್ ವಿಮಾನಗಳು ಹಾರಾಡಿ ಎರಡು ಇಟಾಲಿಯನ್ ವಿಮಾನಗಳನ್ನು ನಾಶಪಡಿಸಿವೆ. ಬ್ರಿಟಿಷರ ಎರಡು ವಿಮಾನಗಳೂ ನಾಶವಾಗಿವೆ.

ಎರಿಟ್ರಿಯಾದ ಗಡಿಯಲ್ಲಿ ಇಟಲಿಯ ಸೈನ್ಯಕ್ಕೂ ಬ್ರಿಟಿಷ್ ಸೈನ್ಯಕ್ಕೂ ಘರ್ಷಣೆಯಾ। ೧೨೦೦ ಜನ ಇಟಾಲಿಯನ್ ಸೈನಿಕರು ಓಡಿಹೋದರು. ೫೦ ಜನರು ಮಡಿದರು.

**ತಾ. ೧ ಜುಲಾಯಿ, ೧೯೪೦**

ರುಮೇನಿಯಾವು ಬ್ರಿಟನ್ನು ಫ್ರಾನ್ಸುಗಳಿಗೆ ಹಿಂದೆ ಇತ್ತಿದ್ದ ಭರವಸೆಯನ್ನು ತಿರಸ್ಕರಿಸಿದೆ.

ಫ್ರಾನ್ಸಿನಲ್ಲಿ ಬ್ರಿಟಿಷ್ ವಿಮಾನಗಳಿಗೂ ಜರ್ಮನ್ ವಿಮಾನಗಳಿಗೂ ಘರ್ಷಣೆಯಾಗಿ ಜರ್ಮನರ ೧೨ ವಿಮಾನಗಳು ಕೆಡವಲ್ಪಟ್ಟವು.

ಬ್ರಿಟಿಷ್ ಕಡಲ್ಕಾಲುವೆಯ ದ್ವೀಪಗಳಿಗೆ ಜರ್ಮನರು ಪ್ರವೇಶಿಸಿದ್ದಾರೆ.

ಈಚೀಚೆಗೆ ಜಪಾನಿನ ಚಟುವಟಿಕೆಗಳು ಸ್ವಲ್ಪ ಜಾಸ್ತಿಯಾದಂತೆ ತೋರುತ್ತಿದೆ. ಫ್ರೆಂಚ್ ಇಂಡೋ ಚೀಣಾದ ಬಳಿಯ ಸರಹದ್ದಿನ ಗ್ರಾಮವಾದ ''ಲುಂಗ್ ಚಾಟು''ವನ್ನು ಜಪಾನರು ಮುತ್ತಿದ್ದಾರೆ.

**ತಾ. ೨ ಜುಲಾಯಿ, ೧೯೪೦**

ಇಂಗ್ಲೆಂಡಿನಲ್ಲಿ ಜರ್ಮನರ ಒಂದು ವಿಮಾನವು ಬಂದು ಒಂದು ಬಾಂಬನ್ನೆಸೆಯಿತು. ೧೦ ಜನರು ಹತರಾದರು. ೧೧೦ ಜನರು ಗಾಯಗೊಂಡರು. ಹಲವು ಕಟ್ಟಡಗಳು ನಾಶವಾಗಿವೆ.

ಜರ್ಮನಿಯ ಮೇಲೆ ಬ್ರಿಟಿಷ್ ವಿಮಾನಗಳು ಧಾಳಿನಡೆಯಿಸಿದುವು. ಬಹಳ ನಷ್ಟ ಸಂಭವಿಸಿದೆಯಂತೆ. ಬ್ರಿಟಿಷರ ನಾಲ್ಕು ವಿಮಾನಗಳು ನಾಶವಾಗಿವೆ.

**ತಾ. ೩ ಜುಲಾಯಿ, ೧೯೪೦**

ಬ್ರಿಟಿಷ್ ಬಂದರಿನಲ್ಲಿದ್ದ ಫ್ರೆಂಚ್ ನೌಕೆಗಳನ್ನು ಬ್ರಿಟನ್ನು ಸ್ವಾಧೀನೀಕರಿಸಿಕೊಳ್ಳಲು ನಿರ್ಧರಿಸಿದೆ. ಕೆಲವು ನೌಕೆಗಳನ್ನು ಸ್ವಾಧೀನೀಕರಿಸಿಕೊಂಡಿದೆ.

ಅರಂಡೋರಾ ಸ್ಟಾರ್ ಎಂಬ ಹಡಗು ಬ್ರಿಟಿಷರ ಸೆರೆಯಾಳುಗಳಾಗಿದ್ದ ೧೪೦೦ ಜನ (ಜರ್ಮನರು ಮತ್ತು ಇಟಾಲಿಯವರು) ರನ್ನು ಕೆನಡಾಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಜರ್ಮನರು ಆ ಹಡಗನ್ನು ಮುಳುಗಿಸಿಬಿಟ್ಟರು. ಸುಮಾರು ಸಾವಿರ ಮಂದಿ ಮಾತ್ರ ರಕ್ಷಿಸಲ್ಪಟ್ಟಿದ್ದಾರೆ.

**ತಾ. ೪ ಜುಲಾಯಿ, ೧೯೪೦**

ಓರಾನಿನಲ್ಲಿ ತಂಗಿದ್ದ ಫ್ರೆಂಚ್ ನೌಕೆಗಳನ್ನು ಬ್ರಿಟಿಷರು ಸ್ವಾಧೀನೀಕರಿಸಿಕೊಳ್ಳಲು ಬಯಸಿದಾಗ ಹಡಗಿನಲ್ಲಿದ್ದವರು ನಿರಾಕರಿಸಿದರು. ಇದರಿಂದ ಕಾದಾಟವಾಯಿತು. ಕೆಲವು ಹಡಗುಗಳು ಮುಳುಗಿಸಲ್ಪಟ್ಟುವು. ಈ ಹಡಗುಗಳು ಜರ್ಮನರ ವಶವಾಗದಂತೆ ಬ್ರಿಟಿಷರು ನೋಡಿಕೊಂಡಿದ್ದಾರೆ. ಈ ಕುರಿತು ಕಾಮನ್ಸಿನಲ್ಲಿ ಚರ್ಚಿಲ್ಲರು ಒಂದು


ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

**ಅಶ್ವಗಂಧಾಪಾಕ** (ಕಾಫಿ, ಟೀಗಳಿಗೆ ಬದಲಾಗಿ ಉಪಯೋಗಿಸಬಹುದು.)

ಪ್ರಾತಃಕಾಲದಲ್ಲಿ ಹಾಲಿನಲ್ಲಿ ಸೇವಿಸುತ್ತಾ ಬಂದರೆ ನರಗಳಿಗೆ ವಿಶೇಷ ಶಕ್ತಿಯೂ, ಧಾತುವೃದ್ಧಿಯೂ ಆಗುತ್ತದೆ. ಕ್ಷೀಣವಾಗಿರುವ ಮಕ್ಕಳಿಗೆ ಹಾಲಿನಲ್ಲಿ ಕೊಡುತ್ತಾ ಬಂದಲ್ಲಿ ಶರೀರ ಪುಷ್ಟಿಯನ್ನುಂಟುಮಾಡುತ್ತದೆ.
ಕೆಟಲಾಗು ಕೇಳಿರಿ. ಬೆಲೆ ೬ ಔನ್ಸು ೦—೧೨—೦

**ಸದ್ವೈದ್ಯಶಾಲಾ—ನಂಜನಗೂಡು**

ಬ್ರಾಂಚು—ರಥಬೀದಿ, ಮಂಗಳೂರು.

ಹೇಳಿಕೆಯನ್ನೀಯುತ್ತಾ "ಬ್ರಿಟೀಷರ ಸರಕಾರವು ಫ್ರಾನ್ಸಿನಲ್ಲಿದ್ದ ೪೦೦ ಜನ ಜರ್ಮನ್ ವೈಮಾನಿಕ ಕೈದಿಗಳನ್ನು ಜರ್ಮನಿಗೆ ಒಪ್ಪಿಸಿದೆ. ಹಡಗುಗಳೂ ಕೂಡ ಜರ್ಮನರ ವಶವಾಗದಂತೆ ನಾವು ನೋಡಿಕೊಳ್ಳಬೇಕಾಯಿತು" ಎಂದರು.

ಈ ದಿನವೂ ಜರ್ಮನಿಯ ವಿಮಾನಗಳು ಬ್ರಿಟನ್ನಿನ ಮೇಲೆ ಧಾಳಿ ನಡೆಯಿಸಿದುವು. ಕಡಲ್ಗಾಲುವೆಯ ತೀರದಲ್ಲಿ ಮಾತ್ರ ಸ್ವಲ್ಪ ನಷ್ಟ ಸಂಭವಿಸಿದೆ. ಜರ್ಮನರ ೭-೮ ವಿಮಾನಗಳು ಉರುಳಿವೆ.

ಜರ್ಮನಿಯ ಪರವಾದ ಯಹೂದಿಯರಿಗೆ ವಿರೋಧವಾದ ಹೊಸ ಸರಕಾರ ರುಮೇನಿಯಾದಲ್ಲಿ ಸ್ಥಾಪಿತವಾಗಿದೆ.

"ಇಟಲಿ-ಜರ್ಮನಿಗಳು ನಾವು ಸಂಧಾನ ಮನೋಭಾವವುಳ್ಳವರೆಂದು ಹೇಳುತ್ತಿವೆ. ಇದು ಶುದ್ಧ ಸುಳ್ಳು. ನಾವು ತತ್ವ ಪಾಲನೆಗಾಗಿ ಕಡೆಯ ವರೆಗೂ ಹೋರಾಡುತ್ತೇವೆ" ಎಂದು ಚರ್ಚಿಲ್ಲರು ನುಡಿದಿದ್ದಾರೆ.

ಇಂಗ್ಲೆಂಡಿನ ಮೇಲೆ ನಡೆದ ವೈಮಾನಿಕ ಧಾಳಿಯಿಂದ ಆರು ಮಂದಿ ಹತರಾದರು.

**ತಾ. ೫ ಜುಲಾಯಿ, ೧೯೪೦**

"ಓರಾನಿನಲ್ಲಿ ಬ್ರಿಟಿಷರು ದೌಷ್ಟ್ಯಪೂರ್ಣವಾದ ಕೆಲಸ ಮಾಡಿ ನಮ್ಮ ಜನರ ರಕ್ತಪಾತಕ್ಕೆ ಕಾರಣರಾಗಿದ್ದಾರೆ. ಇಂತಹ ಹಗೆಗಳೊಡನೆ ನಮಗೆ ಸಂಬಂಧ ಬೇಡ ನಾವು ಇಷ್ಟೆಲ್ಲಾ ತಪ್ಪುಗಳನ್ನು ಬ್ರಿಟನಿನಿಂದಾಗಿಯೆ ಅನುಭವಿಸುತ್ತಿದ್ದೇವೆ. ಆದುದರಿಂದ ನಮಗೆ ಬ್ರಿಟನಿನೊಡನೆ ಯಾವ ಸಂಬಂಧವೂ ಬೇಕಾಗಿಲ್ಲವೆಂದು" ಫ್ರೆಂಚ್ ಸರಕಾರವು ನಿರ್ಧರಿಸಿದೆ. ಓರಾನ್ ಪ್ರಕರಣದ ಬಗ್ಗೆ ಫ್ರೆಂಚ್ ಸರಕಾರವು ಬ್ರಿಟನ್ನಿಗೆ ಖಂಡನಾ ಪತ್ರ ಕಳುಹಿದೆ. ಓರಾನಿನಲ್ಲಿ ನಡೆದ ಕದನದಲ್ಲಿ ಸುಮಾರು ೨೦೦ ಜನರು ಮೃತರಾಗಿದ್ದಾರೆ. "ಬ್ರಿಟಿಷರು ನಾವು ಕಷ್ಟದಲ್ಲಿರುವಾಗಲೂ ಅವಿನಯವನ್ನು ತೋರಿಸಿದ್ದಕ್ಕೆ ಫ್ರೆಂಚರು ವ್ಯಸನಪಡುತ್ತಾರೆ" ಎಂದು ಫ್ರೆಂಚರು ಹೇಳುತ್ತಾರೆ.

ಉತ್ತರ ಆಫ್ರಿಕಾದಲ್ಲಿ ಬ್ರಿಟಿಷರು ಶತ್ರು ವಿಮಾನಗಳೊಡನೆ ಕಾದಾಡಿಕೊಂಡು ೧೦ ಶತ್ರು ವಿಮಾನಗಳನ್ನು ನಾಶಪಡಿಸಿದ್ದಾರೆ.

ಇಂಗ್ಲೆಂಡಿನಲ್ಲಿ ಜರ್ಮನರು ಧಾಳಿ ನಡೆಸಿದ್ದರು. ಅಂತಹ ನಷ್ಟ ಸಂಭವಿಸಿಲ್ಲ.

ಜಿಬ್ರಾಲ್ಟರಿನ ಮೇಲೆ ವಿಮಾನ ಧಾಳಿ ನಡೆದಿದೆ. ಏನೂ ನಷ್ಟವಾಗಿಲ್ಲ.

"ಇಟಲಿ- ಜರ್ಮನಿ- ರಶಿಯಾಗಳ ಕಾರ್ಪೋರೇಟ್ ಸರಕಾರದಂತಹ ಸರಕಾರವನ್ನು ಅಮೇರಿಕೆಯಲ್ಲಿಯೂ ಸ್ಥಾಪಿಸಬೇಕೆಂದು ಕೆಲವರು ಆಶಿಸುತ್ತಾರೆ. ಇದು ಬಹಳ ದುಃಖದಾಯಕ ವಿಚಾರ" ಎಂದು ಅಧ್ಯಕ್ಷ ರೂಸ್‌ವೆಲ್ಟರು ನುಡಿದಿದ್ದಾರೆ.

ಪೋರ್ಟ್‌ಲೇಂಡಿನ ಮೇಲೆ ಶತ್ರು ವಿಮಾನಗಳು ಧಾಳಿ ನಡೆಸಿದುದರ ಪರಿಣಾಮವಾಗಿ ೧೧ ಜನ ನಾಗರಿಕರು ಹತರಾಗಿದ್ದಾರೆ.

**ತಾ. ೬ ಜುಲಾಯಿ, ೧೯೪೦**

ಇಂಗ್ಲಿಷ್ ಕಡಲ್ಗಾಲುವೆಯ ಮೇಲೆ ಹೋರಾಡಬಂದ ಜರ್ಮನ್ ವಿಮಾನಗಳಲ್ಲಿ ಎರಡು ಡೋರ್ನಿಯರ್ ಜಾತಿ ಜರ್ಮನ್ ಬಾಂಬರು ವಿಮಾನಗಳನು ವಿಮಾನಗಳು ಉರುಳಿಸಿವೆ.

ಈ ದಿನ ಬ್ರಿಟಿಷ್ ವಿಮಾನಗಳು ಜರ್ಮನಿಯ ಅನೇಕ ಕಡೆಗಳಲ್ಲಿ ಧಾಳಿ ನಡೆಯಿಸಿ ಅನೇಕ ನಷ್ಟವನ್ನುಂಟುಮಾಡಿವೆ. ೩ ಬ್ರಿಟಿಷ್ ವಿಮಾನಗಳು ಪತ್ತೆಯಿಲ್ಲ.

ರಿಗಾಲ್ ಡಿ ಗೆನ್ಯೂಸ್ ಎಂಬ ಫ್ರೆಂಚ್ ಹಡಗನ್ನು ಯಾರೋ ಟಾರ್ಪೆಡೊ ಮಾಡಿದ್ದಾರೆ.

ಓರಾನಿನಲ್ಲಿ ಫ್ರೆಂಚ್ ಹಡಗುಗಳೊಡನೆ ಹೋರಾಡಬಂದ ಬ್ರಿಟಿಷ್ ವಿಮಾನಗಳಲ್ಲಿ ಎರಡು ವಿಮಾನಗಳು ಪತ್ತೆಯಿಲ್ಲವಾಗಿವೆ.

**ತಾ. ೭ ಜುಲಾಯಿ, ೧೯೪೦**

ಮಾಲ್ಟಾದ ಮೇಲೆ ಇಟಲಿಯ ಧಾಳಿಯಿಂದಾಗಿ ಜನರು ಹತರಾದರು.

ಆಗ್ನೇಯ ಸಮುದ್ರದಲ್ಲಿ ಬ್ರಿಟಿಷರೊಡನೆ ಕಾದಾಡಿದ ಜರ್ಮನ್ ವಿಮಾನಗಳಲ್ಲಿ ಮೂರು ವಿಮಾನಗಳು ನಷ್ಟವಾಗಿವೆ.

ನೈರುತ್ಯ ಸಮುದ್ರ ತೀರದಲ್ಲಿ ಜರ್ಮನ್ ವಿಮಾನಗಳು ಧಾಳಿನಡೆಯಿಸಿದುವು. ಕೆಲವು ಸಾವು ನೋವುಗಳೊದಗಿದೆ. ನಷ್ಟ ಸ್ವಲ್ಪವೇ ಆಗಿದೆ. ಶತ್ರುಗಳ ೨-೩ ವಿಮಾನಗಳು ನಾಶವಾಗಿವೆ.

**S. S. Rubber Stamp mfg. Co., Chikmagalur**



ತಮಗೆ ಅಗತ್ಯ ಬೇಕಾಗುತ್ತಿರುವ ಉತ್ತಮ ತರತರದ ರಬ್ಬರ್ ಮೊಹರುಗಳು, ಅರಗಿನ ಶೀಲುಗಳು, ಬ್ಲಾಕುಗಳೇ ಮುಂತಾದ ಸಾಮಾನುಗಳು ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಶ್ರೀ. ಸುಬ್ರಮಣ್ಯ ರಬ್ಬರ್ ಸ್ಟಾಂಪ್ ಕಂಪೆನಿ, ಚಿಕ್ಕಮಗಳೂರು.**


Printed & Published by P. Venkataramanacharya at Manipal Power Press, Udipi

# ಅಂತರಂಗದ ಇಪ್ಪತ್ತೊಂದನೆಯ ಸ್ಪರ್ಧೆ

**ಸ್ಪರ್ಧೆಯ ಬಾಬ್ತು ಜಮೆಯಾದ ಮೊಬಲಗಿನಲ್ಲಿ ಈ ರೀತಿ ಬಹುಮಾನವು ಹಂಚಲ್ಪಡುವುದು:**

| | | |
|---|---|---|
| ಪ್ರಥಮ ಬಹುಮಾನ: | | ರೂ. ೪೦/ |
| ದ್ವಿತೀಯ | ,, | ರೂ. ೨೦/ |
| ತೃತೀಯ | ,, | ರೂ. ೧೦/ |

ಎಲ್ಲರಿಗಿಂತಲೂ ಹೆಚ್ಚು ಉತ್ತರಗಳನ್ನು ಕಳುಹಿಸುವವರಿಗೆ ರೂ ೫/



## ಎಡದಿಂದ ಬಲಕ್ಕೆ

೧. ಫ್ರಾನ್ಸಿನ ಪತನದ ಸುದ್ದಿಯನ್ನು ಕೇಳಿದೊಡನೆ ಹೆಚ್ಚಿನವರಿಗೆ.......ಬಡೆದಂತಾಯಿತು ೩. ಯುದ್ಧರಂಗದಲ್ಲಿ ಹೋರಾಡಿ ಮಡಿಯುವುದಕ್ಕಿಂತ ತಮ್ಮ ಹಳ್ಳಿಯರೊಡನೆ......ವಾತುಗಳನ್ನಾಡಿ ಆನಂದಿಸುವುದೇ ಲೇಸೆಂದು ಹೇಡಿಗಳಭಿಮತ. ೪. .......ಗಳ ವಿಮಾನ ಶಕ್ತಿಯು ಅತ್ಯಧಿಕವಾಗಿದೆಯೆಂದು ಬ್ರಿಟಿಷರ ಅಭಿಪ್ರಾಯ. ೬. ೪೨ನೆಯ ಸಂವತ್ಸರದ ಹೆಸರು. ೭. ಹಿಂದು ಮುಂದಾದ 'ವೆಚ್ಚ' ೮. ಸಮೀಪ ೯. ಗೋಪಿಯರ ಮನೆಯಲ್ಲಿ ಬಾಲಕೃಷ್ಣನು ಅದೆಷ್ಟು....ಮೊಸರನ್ನು ತಿನ್ನಲಿಲ್ಲ! ೧೧. ಸಂತೋಷ

## ಮೇಲಿಂದ ಕೆಳಕ್ಕೆ

೧. ಯುದ್ಧಕಾಲದಲ್ಲಿ ನಮ್ಮ ದೇಶದಲ್ಲಿ......ಯಾಗುವ ಸಂಭವವಿರುವುದರಿಂದ ರಾಷ್ಟ್ರೀಯ ಸ್ವಯಂಸೇವಕ ದಲವನ್ನು ವ್ಯವಸ್ಥೆಗೊಳಿಸಬೇಕೆಂದು ಜವಾಹರಲಾಲರಂದಿದ್ದಾರೆ. ೨. ಇತ್ತೀಚೆಗೆ.......ಚಾರರ ಸಂಖ್ಯೆ ಹೆಚ್ಚಿಸಲ್ಪಟ್ಟಿದೆ. ೩. ಈ ಯುದ್ಧದಲ್ಲಿ ಬ್ರಿಟಿಷರಿಗೆ ಹೇಗಾದರೂ ಜಯದೊರಕಬೇಕೆಂದು ಇತರರಿಗಿಂತ ಸಿರಿವಂತರ......ಯೇ ಹೆಚ್ಚಾಗಿದೆ. ೫. ವೈರಿಗಳನ್ನು......ವುದೇ ತಮ್ಮ ಧ್ಯೇಯವೆಂದು ಬ್ರಿಟಿಷರ ಅಂಬೋಣ. ೧೦ ಸ್ಮರಿಸು.

## — ಸ್ಪರ್ಧೆಯ ನಿಯಮಗಳು —

ಈ ಸ್ಪರ್ಧೆಯ ಉತ್ತರವು ಅಂತರಂಗದ ಪ್ರಧಾನಸಂಪಾದಕರ ಬಳಿ ಮೊಹರು ಮಾಡಿಡಲಾಗಿದೆ. ಆದಕ್ಕೆ ಸಂಪೂರ್ಣ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನವೂ, ಒಂದು ಮತ್ತು ಎರಡು ತಪ್ಪುಇರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಸರಿಹೋಲುವ ಉತ್ತರಗಳಿಲ್ಲದಿದ್ದಲ್ಲಿ ಒಂದು ತಪ್ಪು ಇರುವವರಿಗೆ ಪ್ರಥಮ ಬಹುಮಾನ ಕೊಡಲ್ಪಡುವುದು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಸರಿಸಮಾನವಾಗಿ ಹಂಚಲ್ಪಡುವುವು. ಬಹುಮಾನವನ್ನು ಹಂಚುವ ವಿಧಾನದಲ್ಲಿ ಸ್ಪರ್ಧೆಯ ಮೆನೇಜರರ ನಿಷ್ಕರ್ಷೆಯೇ ಕೊನೆಯದು. ಪ್ರತಿ ಉತ್ತರಕ್ಕೂ ಪ್ರವೇಶ ಧನ ನಾಲ್ಕಾಣೆ. ಒಬ್ಬನು ಎಷ್ಟು ಉತ್ತರಗಳನ್ನು ಕಳುಹಿಸಬಹುದು. ಎಂಟಾಣೆಗೆ ಮೂರು ಉತ್ತರಗಳನ್ನು ಕಳುಹಿಸಬಹುದಾಗಿದೆ. ಆದರೆ ಒಬ್ಬನಿಗೆ ಒಂದಕ್ಕಿಂತ ಹೆಚ್ಚು ಬಹುಮಾನ ಕೊಡಲ್ಪಡುವದಿಲ್ಲ. ಪ್ರವೇಶ ಧನವನ್ನು ಪೋಸ್ಟಲ್ ಸ್ಟಾಂಪು, ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿ ಆರ್ಡರ್ ಮೂಲಕ ರವಾನಿಸಬಹುದು. ಉತ್ತರವನ್ನು ಸ್ವೀಕರಿಸುವ ಕಡೇ ದಿನ ಜುಲಾಯಿ. ೩೧ ನಂತರ ಈ ಸ್ಪರ್ಧೆಗಾಗಿ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸ್ಪರ್ಧೆಗೆ ಉತ್ತರ ಕೊಟ್ಟವರ ಹೆಸರನ್ನೂ ಸರಿಯಾದ ಉತ್ತರವನ್ನೂ ಆಗಸ್ಟ್ ೧೮ರ "ಅಂತರಂಗ"ದಲ್ಲಿ ಪ್ರಕಟಿಸಲಾಗುತ್ತದೆ. ಸ್ಪರ್ಧೆಯ ವಿಷಯದಲ್ಲಿ ಅನಾವಶ್ಯಕ ಪತ್ರವ್ಯವಹಾರವನ್ನು ಮಾಡಲಾಗುವುದಿಲ್ಲ. ಸ್ಪರ್ಧೆಯ ಉತ್ತರಗಳನ್ನು ಕೂಪನಿನಲ್ಲಿಯಾ ಖಾಲಿ ಕಾಗದದಲ್ಲಿ ಬರೆದು ಕಳುಹಿಸಬಹುದು.

—ಮೆನೇಜರ್, ಅಂತರಂಗ ಸ್ಪರ್ಧೆ. ಉಡುಪಿ

**ಅಂತರಂಗ ಸ್ಪರ್ಧೆಗೆ ಎಲ್ಲಿಯೂ ಏಜಂಟರಿರುವುದಿಲ್ಲ.**